GOVERNMENT OF TAMILNADU

ಕನ್ನಡ ಸಿರಿ

KANNADA READER

ಐದನೆಯ ತರಗತಿ

STANDARD FIVE

Department of School Education

Untouchability is Inhuman and a Crime

5th-std_Term 1_Kannada_Reader_CBSE_KM.indd 1 7/9/2019 3:00:53 PM

Government of Tamil Nadu

First Edition - 2019

Reprint - 2020, 2021, 2022, 2023, 2024

(Published under New Syllabus)

Content Creation

State Council of Educational Research and Training

© SCERT 2019

Printing & Publishing

Tamil Nadu Textbook and Educational Services Corporation

www.textbooksonline.tn.nic.in

ಮುನ್ನುಡಿ

ಮಕ್ಕಳ ಜಗತ್ತು ವರ್ಣಮಯವಾದುದು. ಮಾಯಾಲೋಕವೆಂದರೂ ತಪ್ಪೆನಿಸದು. ಅವರ ಕಲ್ಪನಾ ಸಾಮರ್ಥ್ಯವೋ ನೋಡುಗರನ್ನು ಬೆರಗುಗೊಳಿಸಿ ಆತ್ಮೀಯತೆಯೊಂದಿಗೆ ಬೆಸೆಯುವಂತದ್ದು. ಹೊಸದನ್ನು ಬಯಸುವ ಅವರ ಉತ್ಸಾಹದ ಒಳಮನಸ್ಸು ನಿರ್ಜೀವ ವಸ್ತುಗಳನ್ನು ಕನ್ನಡ ಕಲಿಯುವಂತೆ ಮಾಡಬಲ್ಲ ಮಾಂತ್ರಿಕ ಶಕ್ತಿಯಾಗಿದೆ.

ಆ ಹೊಸ ಜಗತ್ತಿನಲ್ಲಿ ಮಕ್ಕಳೊಂದಿಗೆ ಪಯಣಿಸುವುದು ಒಂದು ರೋಮಾಂಚನ ಅನುಭವವೇ ಸರಿ.

ಕನ್ನಡ ವಿದ್ಯಾರ್ಥಿಗಳ ಕೈಗಳಲ್ಲಿ ಈ ಹೊಸ ಪಠ್ಯ ಪುಸ್ತಕದೊಂದಿಗೆ ಕೆಳಕಂಡ ಉದ್ದೇಶ ಈಡೇರಿಕೆಗೆ ನಾವು ಕೈಗೊಂಡಿರುವ ಪ್ರಯತ್ನವು ಮಹತ್ವವಾದದ್ದು.

- ಕಲಿಕೆಯನ್ನು ಕಂಠಪಾಠ ವಿಧಾನದಿಂದ ಮುಕ್ತಗೊಳಿಸಿ ಚಟುವಟಿಕೆಯ ಹಾದಿಯಲ್ಲಿ ನಡೆಸುವುದು.
- ಕನ್ನಡಿಗರು ತಮ್ಮ ಸಾಂಸ್ಕೃತಿಕ, ಸಾಹಿತ್ಯ ಹಿರಿಮೆ ಗರಿಮೆಯೊಂದಿಗೆ ಇತಿಹಾಸ, ಕಲೆ ಹಾಗೂ ಸಂಪ್ರದಾಯ, ಆಚಾರ ವಿಚಾರಗಳ ಮಹತ್ವವನ್ನು ಅರಿಯುವಂತೆ ಮಾಡುವುದು.
- ಆತ್ಮವಿಶ್ವಾಸದೊಂದಿಗೆ ವಿಜ್ಞಾನ, ತಂತ್ರಜ್ಞಾನ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಹೊಸ ಜಗತ್ತಿನಲ್ಲಿ ಧೈರ್ಯದಿಂದ ಮುನ್ನಡೆಯುವುದನ್ನು ದೃಢಪಡಿಸುವುದು.
- ಜ್ಞಾನಾರ್ಜನೆಯು ಕೇವಲ ಪುಸ್ತಕಕ್ಕೆ ಸೀಮಿತವಾಗಿರದೆ ವಿಸ್ತಾರ ಮತ್ತು ಆಳವಾದ ಕಲಿಕೆಗೆ ಪುಸ್ತಕಗಳು ನೆರವಾಗುವಂತೆ ಮಾರ್ಗದರ್ಶನ ನೀಡುವುದು.
- ಪಠ್ಯಪುಸ್ತಕದ ಹೊಸ ವಿನ್ಯಾಸವು ಆಳವಾದ ವಿಷಯ ಹಾಗೂ ಮಕ್ಕಳ ಮನಶಾಸ್ತ್ರೀಯ ರೀತಿಯ ಹಲವು ಹೊಸ ಅಂಶಗಳನ್ನು ಒಳಗೊಂಡಿದ್ದು ನಿಮ್ಮ ಕೈಗಳಲ್ಲಿ ಈ ಪಠ್ಯ ಪುಸ್ತಕ ಸೇರಿದಾಗ ನೀವೊಂದು ಹೊಸ ಜಗತ್ತಿಗೆ ಪಯಣಿಸುತ್ತೀರಿ ಎಂಬ ಮಹತ್ವಾಕಾಂಕ್ಷೆ ನಮಗಿದೆ.

5th-std_Term 1_Kannada_Reader_CBSE_KM.indd 3 7/9/2019 3:00:53 PM

ರಾಷ್ಟ್ರಗೀತೆ

ಜನ ಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯವಿಧಾತ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಚಲ ಜಲಧಿ ತರಂಗಾ
ತವಶುಭ ನಾಮೆ ಜಾಗೇ
ತವಶುಭ ಆಶಿಷಮಾಗೆ
ಗಾಹೇ ತವ ಜಯ ಗಾಥಾ
ಜನ ಗಣ ಮಂಗಲ ದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯ ಹೇ!

–ಮಹಾಕವಿ ರವೀಂದ್ರನಾಥ್ ಠಾಗೂರ್.

ರಾಷ್ಟ್ರಗೀತೆಯ ಸಾರ

ಭಾರತ ಮಾತೆಯೇ! ಪ್ರಜೆಗಳ ಸುಖ ದುಃಖಗಳನ್ನು ನಿರ್ಣಯಿಸುವ ನೀನೇ ಎಲ್ಲರ ಮನದಲ್ಲೂ ನೆಲೆಸಿದ್ದೀಯೇ. ನಿನ್ನ ಶ್ರೀನಾಮವು ಪಂಜಾಬ್ , ಸಿಂಧು, ಗುಜರಾತ್, ಮಹಾರಾಷ್ಟ್ರ, ದ್ರಾವಿಡ, ಉತ್ಕಲ (ಒರಿಸ್ಸಾ) ಬಂಗಾಳ ಪ್ರಾಂತ್ಯಗಳನ್ನು ಮನೋದ್ದೀಪನಗೊಳಿಸುತ್ತದೆ.

ಮತ್ತೆ ನಿನ್ನ ಶ್ರೀನಾಮ, ವಿಂಧ್ಯ ಹಿಮಾಚಲ ಪರ್ವತ ಶ್ರೇಣಿಗಳಲ್ಲಿ ಪ್ರತಿಧ್ವನಿಸುತ್ತದೆ; ಯಮುನಾ ಗಂಗಾ ನದಿಗಳ ಮಧುರ ನಾದದಲ್ಲಿ ಲೀನವಾಗುತ್ತದೆ; ಹಿಂದೂ ಮಹಾಸಾಗರದ ಅಲೆಗಳಲ್ಲಿ ನಮನಗೊಳ್ಳುತ್ತದೆ.

ಅವು ನಿನ್ನ ಕೃಪೆಯನ್ನು ಬೇಡುತ್ತವೆ; ನಿನ್ನ ಕೀರ್ತಿಯನ್ನು ಹರಡುತ್ತವೆ. ಭಾರತದ ಸುಖ ದುಃಖಗಳನ್ನು ನಿರ್ಣಯಿಸುವ ತಾಯೇ! ನಿನಗೆ ಜಯವಾಗಲಿ! ಜಯವಾಗಲಿ! ಜಯವಾಗಲಿ!




5th-std_Term 1_Kannada_Reader_CBSE_KM.indd 4 7/9/2019 3:00:54 PM

ತಮಿಳ್ ತಾಯ್ ವಾಳ್ತು

ನೀರಾರುಂ ಕಡಲುಡುತ್ತ ನಿಲಮಡಂದೈಕ್ಕೆಳಿಲೊಳುಗುಂ
ಸೀರಾರುಂ ವದನಮೆನತ್ತಿಗಳ್ ಭರತ ಖಂಡಮಿದಿಲ್
ತೆಕ್ಕಣಮುಂ ಅದಿಲ್ ಸಿರಂದ ದ್ರಾವಿಡನಲ್ ತಿರುನಾಡುಂ
ತಕ್ಕಸಿರು ಪಿರೈನುದಲುಂ ತರಿತ್ತನರುಂ ತಿಲಕಮುಮೇ
ಅತ್ತಿಲಗ ವಾಸನೈಪೋಲ್ ಅನೈತ್ತುಲಗುಂ ಇನ್ಬಮುರ
ಎತ್ತಿಸೈಯುಂ ಪುಗಳ್ ಮಣಕ್ಕ ಇರುಂದು ಪೆರುಂ ತಮಿಳಣಂಗೇ!
ತಮಿಳಣಂಗೇ!
ಉನ್ ಸೀರಿಳಮೈತ್ತಿರಂವಿಯಂದು ಸೆಯಲ್ ಮರಂದು ವಾಳ್ತುದುಮೇ!
ವಾಳ್ತುದುಮೇ!
ವಾಳ್ತುದುಮೇ!

– ಮನೋನ್ಮಣೀಯಂ ಪಿ. ಸುಂದರಂ ಪಿಳ್ಳೈ



ತಮಿಳು ತಾಯಿಯ ಪ್ರಾರ್ಥನೆ

ಕಡಲುಡುಗೆಯಾದ ಭೂಮಾತೆಯ ಸುಂದರ ವದನದಂತಿರುವ ಭಾರತದ ತೆರೆ ನೊಸಲಿನಂತಿರುವ ದಕ್ಷಿಣದಲ್ಲಿ, ಶ್ರೀಗಂಧದ ತಿಲಕವಿಟ್ಟಂತಿರುವ ನಲ್ನಾಡು ದ್ರಾವಿಡ, ಆ ತಿಲಕದ ಸುಗಂಧದಂತೆ ಸರ್ವ ಲೋಕಕ್ಕೆ ಸಂತೋಷ ವರ್ಧಿಸುತ್ತಿರುವಂತೆ ಎಲ್ಲಾ ದಿಕ್ಕುಗಳಲ್ಲೂ ಕೀರ್ತಿ ಘಮ ಘಮಿಸುತ್ತಿರುವ ತಮಿಳುತಾಯೇ, ನಿನ್ನ ಗಂಭೀರವಾದ ಚಿರಯೌವ್ವನವನ್ನು ನೆನೆದು ಅಚ್ಚರಿಯಿಂದ ಮೈಮರೆತು ಹಾಡಿ ಹೊಗಳುತ್ತೇನೆ.

5th-std_Term 1_Kannada_Reader_CBSE_KM.indd 5 7/9/2019 3:00:55 PM



ರಾಷ್ಟ್ರೀಯ ಸಮಗ್ರತೆಯ ಪ್ರತಿಜ್ಞೆ

ರಾಷ್ಟ್ರದ ಸ್ವಾತಂತ್ರ್ಯ ಮತ್ತು ಒಗ್ಗಟ್ಟನ್ನು ಕಾಪಾಡುವ ಹಾಗೂ ಬಲಪಡಿಸುವ ಕಾರ್ಯದಲ್ಲಿ ನಾನು ನನ್ನನ್ನು ಅರ್ಪಿಸಿಕೊಳ್ಳುತ್ತೇನೆ ಎಂದು ಹೃತ್ಪೂರ್ವಕವಾಗಿ ಪ್ರತಿಜ್ಞೆಮಾಡುತ್ತೇನೆ. ಅಲ್ಲದೇ ಎಂದೂ ನಾನು ಹಿಂಸೆಗೆ ಆಸ್ಪದ ಕೊಡುವುದಿಲ್ಲವೆಂದೂ ಮತೀಯ, ಭಾಷಿಕ, ಪ್ರಾದೇಶಿಕ ಮತ್ತು ರಾಜಕೀಯ ಹಾಗೂ ಆರ್ಥಿಕ ಸಂಕಷ್ಟಗಳ ಸಂದರ್ಭಗಳಲ್ಲಿ ಬರುವ ಎಲ್ಲಾ ರೀತಿಯ ಭಿನ್ನಾಭಿಪ್ರಾಯಗಳು, ವಿವಾದಗಳನ್ನು ಶಾಂತಿಯುತವಾಗಿಯೂ ಸಂವಿಧಾನಕ್ಕೆ ಅನುಸಾರವಾಗಿಯೂ ಪರಿಹರಿಸಲ್ಪಡಬೇಕೆಂದೂ ದೃಢಪಡಿಸುತ್ತೇನೆ.

ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಒಡಹುಟ್ಟಿದವರು. ನನ್ನ ದೇಶವನ್ನು ನಾನು ಬಹಳ ಪ್ರೀತಿಸುತ್ತೇನೆ. ಈ ನಾಡಿನ ಭವ್ಯ ಪರಂಪರೆಯನ್ನೂ ವೈಶಿಷ್ಟ್ಯವನ್ನೂ ಕಂಡು ಹೆಮ್ಮೆ ಪಡುತ್ತೇನೆ. ಈ ನಾಡಿನ ಹಿರಿಮೆಯನ್ನು ಹೆಚ್ಚಿಸಲು ಅನವರತ ದುಡಿಯುತ್ತೇನೆ.

ನನ್ನ ತಂದೆ ತಾಯಿಯರು, ಶಿಕ್ಷಕರು ಮತ್ತು ಹಿರಿಯರನ್ನು ನಾನು ಗೌರವಿಸುತ್ತೇನೆ. ಎಲ್ಲರೊಡನೆಯೂ ಪ್ರೀತಿ ಹಾಗೂ ಗೌರವದಿಂದ ನಡೆದುಕೊಳ್ಳುತ್ತೇನೆ. ನನ್ನ ನಾಡಿಗೂ ನನ್ನ ನಾಡಿನ ಪ್ರಜೆಗಳಿಗೂ ಸೇವೆ ಮಾಡಲು ಮುಂದೆ ನಿಲ್ಲುತ್ತೇನೆ. ಅವರ ಏಳಿಗೆಯನ್ನೂ, ಸಮೃದ್ಧಿಯನ್ನೂ ಕಂಡು ನಾನು ಅತ್ಯಾನಂದ ಪಡುತ್ತೇನೆ.



5th-std_Term 1_Kannada_Reader_CBSE_KM.indd 6 7/9/2019 3:00:55 PM

ನಾಡ ಗೀತೆ

ಜಯ ಹೇ ಕರ್ನಾಟಕ ಮಾತೆ

ಜಯ್ ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ !
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ !

ಭೂದೇವಿಯ ಮುಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ,
ರಾಘವ ಮಧುಸೂದನರವತರಿಸಿದ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ಜನನಿಯ ಜೋಗುಳ ವೇದದ ಘೋಷ,
ಜನನಿಗೆ ಜೀವವು ನಿನ್ನಾವೇಶ,
ಹಸುರಿನ ಗಿರಿಗಳ ಸಾಲೆ,
ನಿನ್ನಯ ಕೊರಳಿನ ಮಾಲೆ.
ಕಪಿಲ ಪತಂಜಲ ಗೌತಮ ಜಿನನುತ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರ ಮಧ್ವರ ದಿವ್ಯಾರಣ್ಯ
ರನ್ನ ಷಡಕ್ಷರಿ ಪೊನ್ನ
ಪಂಪ ಲಕುಮಿಪತಿ ಜನ್ನ
ಕುಮಾರವ್ಯಾಸರ ಮಂಗಳ ಧಾಮ !
ಕವಿಕೋಗಿಲೆಗಳ ಪುಣ್ಯಾರಾಮ !
ನಾನಕ ರಮಾನಂದ ಕಬೀರರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನೆಚ್ಚಿನ ಬೀಡೆ;
ಕೃಷ್ಣಶರಾವತಿ ತುಂಗಾ
ಕಾವೇರಿಯ ವರ ರಂಗ.
ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ಸರ್ವ ಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ.
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ.
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ !

ಕನ್ನಡನುಡಿ ಕುಣಿದಾಡುವ ಗೇಹ !
ಕನ್ನಡ ತಾಯಿಯ ಮಕ್ಕಳ ದೇಹ !
ಜಯ್ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ !

– ರಾಷ್ಟ್ರಕವಿ ಕುವೆಂಪು

5th-std_Term 1_Kannada_Reader_CBSE_KM.indd 7 7/9/2019 3:00:55 PM

ಅಭಿಜಾತ ಭಾಷೆಯಾದ ಕನ್ನಡ ಭಾಷೆಯ ಹಿರಿಮೆ–ಗರಿಮೆಗಳನ್ನು ಇಂದಿನ ವಿದ್ಯಾರ್ಥಿಗಳು ಗ್ರಹಿಸುವಂತೆ ಮಾಡುವ ಉದ್ದೇಶದಿಂದ ಈ ಪಠ್ಯ ಪುಸ್ತಕವನ್ನು ವಿನ್ಯಾಸಗೊಳಿಸಲಾಗಿದೆ.



ಪ್ರತಿಯೊಂದು ಘಟಕವನ್ನು ಆಸಕ್ತಿಯಿಂದ ಆಲಿಸಲು ಗದ್ಯ, ಪದ್ಯ ಮುಂತಾದ ಉಪ ಪಠ್ಯ ಶೀರ್ಷಿಕೆ.



ಕಾಲದ ವೇಗಕ್ಕೆ ಹೊಂದಾಣಿಕೆಯಾಗುವಂತೆ ಅಂತರ್ಜಾಲದ ಮೂಲಕ



ಪಠ್ಯ ವಿಷಯದ ಅರ್ಥವನ್ನು ವಿವರಿಸುವ ಅಮೂಲ್ಯವಾದ ಹೊಸ ಸಂಗತಿಗಳನ್ನು ತಿಳಿದುಕೊಳ್ಳಲು ಜ್ಞಾನ ಸಂಪಾದನೆ



ವಿಷಯಕ್ಕೆ ಪೂರಕವಾದ ಘಟಕದ ಪ್ರಾರಂಭದಲ್ಲಿ ಕಲಿಕಾ ಉದ್ದೇಶಗಳು

ಸೃಜನಶೀಲ ಅಧ್ಯಾಪಕರಿಗೂ, ಕ್ರಿಯಾಶೀಲ ಮನಸ್ಸಿನ ವಿದ್ಯಾರ್ಥಿಗಳಿಗೂ...



ಕಲಿತ ವಿಷಯಗಳ ಕುರಿತಾದ ಚಿಂತನೆಗಳನ್ನು ಕಲಿಕಾಫಲಗಳ ಮೂಲಕ



ಘಟಕದ ಕೊನೆಯಲ್ಲಿ ಇನ್ನೂ ಹೆಚ್ಚು ಕಲಿಯಬೇಕೆಂಬ ಉತ್ಸಾಹದೊಂದಿಗೆ

ವಿದ್ಯಾರ್ಥಿಗಳು ಸ್ವಯಂ ಮೌಲ್ಯಮಾಪನಕ್ಕೆ ಪೂರಕವಾಗುವಂತೆ ಮೌಲ್ಯೀಕರಿಸುವುದು.



ಚಿಂತನಾ ಸಾಮರ್ಥ್ಯಗಳಿಸಲು, ಚಟುವಟಿಕೆಯ ಮಾರ್ಗದಲ್ಲಿ ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ನಿಭಾಯಿಸಲು, ಓದಿ ಆನಂದಿಸಲು, ಭಾಷಾ ಕ್ರೀಡೆಯಲ್ಲಿ ತೊಡಗಲು



ಸಾಹಿತ್ಯದ ಮೂಲಕ ಭಾಷಾ ಕಲಿಕೆ, ತಾಂತ್ರಿಕವಾಗಿ ಮನನ ಮಾಡಲು ಭಾಷಾ ಪ್ರೌಢಿಮೆಯನ್ನು ಗಳಿಸುವುದು



ಮಾತೃ ಭಾಷೆಯೊಂದಿಗೆ ಇತರ ವಿಷಯಗಳನ್ನು, ಹೊಸ ಅರ್ಥಗಳನ್ನು ಗ್ರಹಿಸಲು, ತರ್ಕದಲ್ಲಿ ತೊಡಗಲು... ಈ ಪಠ್ಯ ಪುಸ್ತಕವು ಹೊಸ ವಿನ್ಯಾಸ ಹಾಗೂ ವರ್ಣರಂಜಿತವಾಗಿದ್ದು ಪರಿವಿಡಿಯೊಂದಿಗೆ ಈ ಪಠ್ಯ ಪುಸ್ತಕವು ನಿಮ್ಮ ಕೈಗಳಲ್ಲಿ....

5th-std_Term 1_Kannada_Reader_CBSE_KM.indd 8 7/9/2019 3:00:55 PM

ಪರಿವಿಡಿ

ಘಟಕ	ವಿಷಯವಸ್ತು	ಶೀರ್ಷಿಕೆ	ಪುಟಸಂಖ್ಯೆ
1	ಭಾಷೆ		
	ಪದ್ಯ	ಸ್ವಾತಂತ್ರ್ಯ – ಭಾರತಿದಾಸನ್	2
	ಗದ್ಯ	ವಿಜ್ಞಾನ ಉಳಿವಿಗಾಗಿಯೇ? ಅಳಿವಿಗಾಗಿಯೇ?	5
	ಉಪಪಠ್ಯ	ಶಬ್ದವೇನು ?	10
	ವ್ಯಾಕರಣ	ಸಾಂಪ್ರದಾಯಿಕ ಪದಗಳು	13
2	ಶಿಕ್ಷಣ		
	ಪದ್ಯ	ಸರ್ವಜ್ಞನ ವಚನಗಳು * – ಸರ್ವಜ್ಞ	23
	ಗದ್ಯ	ವಿದ್ಯೆ ಸಂಪತ್ತೋ? ಧನ ಸಂಪತ್ತೋ?	26
	ಉಪಪಠ್ಯ	ಬಡತನದಲ್ಲಿಯೂ ಪ್ರಾಮಾಣಿಕತೆ	32
	ವ್ಯಾಕರಣ	ನಾಮಪದ, ಕ್ರಿಯಾಪದ	35
3	ಪ್ರಕೃತಿ		
	ಪದ್ಯ	ನಮೋ ತಾಯಿ ಭಾರತಿ * – ಸಾ.ಶಿ.ಮರುಳಯ್ಯ	43
	ಗದ್ಯ	ಚಿತ್ರ ಇಲ್ಲಿ! ಗಾದೆ ಎಲ್ಲಿ?	46
	ಉಪಪಠ್ಯ	ಅಪಾಯದಿಂದ ಪಾರಾದ ಜಿಂಕೆ	51
	ವ್ಯಾಕರಣ	ವಾಕ್ಯಗಳು	56
	ವಿಜ್ಞಾನ ಮತ್ತು ತಂತ್ರಜ್ಞಾನ		
4	ಪದ್ಯ	ಜಲಚಕ್ರ * –ಹ.ಮ.ಪೂಜಾರ	65
	ಗದ್ಯ	ಪ್ರವಾಸ ಹೋಗೋಣ – ಸಂಗ್ರಹ	69
	ಉಪಪಠ್ಯ	ಕನಸುಗಾರ ಕಲಾಂ! – ಸಂಗ್ರಹ	75
	ವ್ಯಾಕರಣ	ಸಂಯುಕ್ತಾಕ್ಷರಗಳು	78
	ಕಲೆ ಮತ್ತು ಸಂಸ್ಕೃತಿಯ ಪರಂಪರೆ		
5	ಪದ್ಯ	ನಮ್ಮೂರು – ಜೋಳದರಾಶಿ ದೊಡ್ಡನಗೌಡರು	80
	ಗದ್ಯ	ಮೆಚ್ಚಿನ ಗೊಂಬೆ – ಸಂಗ್ರಹ	83
	ಉಪಪಠ್ಯ	ಕರಗ ಉತ್ಸವ – ಡಾ. ಎಂ. ಸುಮಿತ್ರ	89
	ವ್ಯಾಕರಣ	ಲೇಖನ ಚಿಹ್ನೆಗಳು	92

5th-std_Term 1_Kannada_Reader_CBSE_KM.indd 9 7/9/2019 3:00:55 PM

6	ವೃತ್ತಿವಾಣಿಜ್ಯ ಮತ್ತು ನಾಗರೀಕತೆ			
	ಪದ್ಯ	ದುಡಿಮೆ *	– ಚನ್ನವೀರ ಕಣವಿ	94
	ಗದ್ಯ	ಮಲ್ಲಜ್ಜಿಯ ಮಳಿಗೆ	– ಸಂಗ್ರಹ	99
	ಉಪಪಠ್ಯ	ಮಾಸ್ತಿಯವರ ಮಾತೃಪ್ರೇಮ	– ಬೆಳಗೆರೆ ಕೃಷ್ಣಶಾಸ್ತ್ರಿಗಳು	104
	ವ್ಯಾಕರಣ	ಕಾಲಗಳು		108
7	ರಾಷ್ಟ್ರೀಯತೆ ಮತ್ತು ಸಮಾಜ			
	ಪದ್ಯ	ಬಂದೆವಿದೋ	– ಡಿ.ಎಸ್.ಕರ್ಕಿ	110
	ಗದ್ಯ	ಪಂಚತಂತ್ರ	– ಎಂ. ಗೋಪಾಲಕೃಷ್ಣ ಅಡಿಗ	113
	ಉಪಪಠ್ಯ	ನರಿಯ ನ್ಯಾಯ	– ಸಂಗ್ರಹ	118
	ವ್ಯಾಕರಣ	ಲಿಂಗಗಳು		122
8	ಧರ್ಮ–ತತ್ವ–ಚಿಂತನೆ			
	ಪದ್ಯ	ಬಸವಣ್ಣನವರ ವಚನ *	– ಬಸವಣ್ಣನವರು	124
	ಗದ್ಯ	ವೀರಮಾತೆ ಜೀಜಾಬಾಯಿ	– ಸಂಗ್ರಹ	127
	ಉಪಪಠ್ಯ	ದುರಾಸೆಯ ಫಲ	– ಸಂಗ್ರಹ	131
	ವ್ಯಾಕರಣ	ವಚನಗಳು		134
9	ಮಾನವೀಯತೆ ಮತ್ತು ವ್ಯಕ್ತಿತ್ವ			
	ಪದ್ಯ	ಮಂಕುತಿಮ್ಮನ ಕಗ್ಗ *	– ಡಿ.ವಿ.ಗುಂಡಪ್ಪ	136
	ಗದ್ಯ	ಕವಿ ಸುಬ್ರಹ್ಮಣ್ಯ ಭಾರತಿ	– ಸಂಗ್ರಹ	139
	ಉಪಪಠ್ಯ	ಅಜ್ಜಿಯ ತೋಟದಲ್ಲಿ ಒಂದು ದಿನ	– ಸಂಗ್ರಹ	142
	ವ್ಯಾಕರಣ	ಪತ್ರ ಲೇಖನ		145

* ಈ ಚಿಹ್ನೆಯು ಕಂಠಪಾಠ ಮಾಡಬೇಕಾದ ಪದ್ಯಗಳನ್ನು ಸೂಚಿಸುತ್ತದೆ.

5th-std_Term 1_Kannada_Reader_CBSE_KM.indd 10 7/9/2019 3:00:55 PM

ಘಟಕ ಒಂದು

ಭಾಷೆ

ಪದ್ಯ	:	ಸ್ವಾತಂತ್ರ್ಯ	–	ಭಾರತಿದಾಸನ್
ಗದ್ಯ	:	ವಿಜ್ಞಾನ ಉಳಿವಿಗಾಗಿಯೇ? ಅಳಿವಿಗಾಗಿಯೇ?	–	ಚರ್ಚಾಸ್ಪರ್ಧೆ
ಉಪಪಠ್ಯ	:	ಶಬ್ದವೇನು ?		
ವ್ಯಾಕರಣ	:	ಸಾಂಪ್ರದಾಯಿಕ ಪದಗಳು		



ಕಲಿಕಾ ಉದ್ದೇಶಗಳು

- ಪದ್ಯವನ್ನು ತಪ್ಪಿಲ್ಲದೆ ಸರಿಯಾಗಿ ರಾಗಬದ್ಧವಾಗಿ ಹಾಡುವುದು
- ತನ್ನಲ್ಲಿರುವ ಭಾವನೆಗಳನ್ನು ಕವಿತೆಯ ಮೂಲಕ ವ್ಯಕ್ತಪಡಿಸಲು ಪ್ರಯತ್ನಿಸುವುದು.
- ಆಶಯಗಳ ಹೋಲಿಕೆ ಮಾಡಿ, ಅವುಗಳ ಗುಣಾವಗುಣಗಳನ್ನು ಪರಿಶೀಲಿಸುವ ಹಾಗೂ ಮಾತನಾಡುವ ಕೌಶಲ್ಯವನ್ನು ಬೆಳೆಸಿಕೊಳ್ಳುವುದು.
- ಭಾಷಾ ವೈಶಿಷ್ಟ್ಯವನ್ನು ಪ್ರಶಂಸಿಸುವುದು.
- ಭಾಷಾ ವೈಶಿಷ್ಟ್ಯತೆಯ ಹಲವು ಬಗೆಗಳನ್ನು ತಿಳಿದು ಉಪಯೋಗಿಸುವುದು.

5th-std_Term 1_Kannada_Reader_CBSE_KM.indd 1 7/9/2019 3:00:56 PM

ಘಟಕ ಒಂದು

ಪದ್ಯ

ಸ್ವಾತಂತ್ರ್ಯ

– ಭಾರತಿದಾಸನ್

(ಕನ್ನಡಕ್ಕೆ : ಡಾ॥ಚಿ.ರಾಮಸ್ವಾಮಿ)



ಸಿಹಿತನಿವಣ್ಣುಗಳ ತಿನ್ನಲು ಈಯುವರು
ಬಲುರುಚಿಯ ಕಾಳುಗಳ ಬೇಯಿಸಿ ನೀಡುವರು
ಮಣಿಯೇ! ಅರಗಿಣಿಯೇ! ಎಂದೆಲ್ಲ ಹೊಗಳುವರು
ಆದರೂ ಓ! ಗಿಳಿಯೇ! ಅಲ್ಲಿ ನೋಡು
ನಿನ್ನೊಡ ಹುಟ್ಟಿದ ಆ ನಿನ್ನ ಸಣ್ಣಕ್ಕ
ಬಾನಂಚಿನಲ್ಲಿ ಅಲೆದು ಹಾರಾಡಿ
ತೆಂಗು ಗರಿಗಳ ನಡುವೆ ಉಯ್ಯಾಲೆಯಾಡಿ
ತರುವನಗಳಲಿ ಅಲೆದು ತನ್ನಿಷ್ಟ ಮೇದು
ಬಾನನ್ನು ನೆಲವನ್ನು ತಾನೇ ಆಕ್ರಮಿಸಿಹಳು!
ಬಡಗಿಯ ಗೂಡೇ ನಿನಗೆ ಗತಿಯೇ!?
ಅಕ್ಕ! ಅಕ್ಕ! ಎಂದೇನೋ ನೀ ಕರೆವೆ
ಅಕ್ಕಯ್ಯ ಬಂದು ನೀಡಲು
ಸ್ವಾತಂತ್ರ್ಯವೇನು ಶುಂಠಿಯೇ? ಮೆಣಸೇ? ಹೇಳು ಗಿಳಿಯೇ?

5th-std_Term 1_Kannada_Reader_CBSE_KM.indd 2 7/9/2019 3:00:57 PM

ಪದಗಳ ಅರ್ಥ

ತನಿವಣ್ಣು–ಸಿಹಿಯಾದ ಹಣ್ಣು; ಈಯುವರು–ನೀಡುವರು; ಅರಗಿಣಿ–ಅರಮನೆಯ ಗಿಣಿ; ಬಾನಂಚು–ಬಾನಿನ ಅಂಚು, ಆಕಾಶದ ಬದಿ; ತರು–ಮರ; ವನ–ಕಾಡು; ಬಡಗಿ–ಮರೆಗೆಲಸ ಮಾಡುವವನು;.

ಪದ್ಯದ ಭಾವಾರ್ಥ

ಈ ಕವನದಲ್ಲಿ ಸ್ವಾತಂತ್ರ್ಯವೆಂದರೇನು ಎಂಬುದನ್ನೂ, ಸ್ವಾತಂತ್ರ್ಯವನ್ನು ಯಾರೂ ನಮಗೆ ಕೊಡುವುದಿಲ್ಲ. ನಾವೇ ಅದನ್ನು ಪಡೆದುಕೊಳ್ಳುವ ಪ್ರಯತ್ನ ಮಾಡಬೇಕೆಂಬುದನ್ನೂ ತಿಳಿಸುತ್ತಾರೆ. ಬಂಧನ ಜೀವನದಲ್ಲಿ ತೃಪ್ತಿ, ನೆಮ್ಮದಿ, ಸಮಾಧಾನಗಳು ಇರುವುದಿಲ್ಲ. ಸ್ವತಂತ್ರ ಜೀವನವೇ ಶ್ರೇಷ್ಠವಾದದು ಎಂದು ಹೇಳುವ ಮೂಲಕ ಜನತೆಯಲ್ಲಿ ಜಾಗೃತಿಯನ್ನುಂಟು ಮಾಡುವ ಪ್ರಯತ್ನವನ್ನು ಕವಿ ಭಾರತಿದಾಸನ್ ಅವರು ಇಲ್ಲಿ ಮಾಡಿದ್ದಾರೆ.

ಕವಿ ಪರಿಚಯ



ತಮಿಳಿನ ಪ್ರಮುಖ ಕವಿಗಳಲ್ಲಿ ಭಾರತಿದಾಸನ್ ಅವರೂ ಒಬ್ಬರು. ಇವರು ಪಾಂಡಿಚೆರಿಯಲ್ಲಿ ತಮಿಳು ಉಪಾಧ್ಯಾಯರಾಗಿ ಸೇವೆ ಸಲ್ಲಿಸಿದ್ದಾರೆ. ಭಾರತಿದಾಸನ್‌ರ ನಿಜವಾದ ಹೆಸರು ಕನಕ ಸುಬ್ಬರತ್ನಂ. ಸುಬ್ರಹ್ಮಣ್ಯ ಭಾರತಿಯವರು ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ರಾಜಕೀಯ ಕಾರಣಗಳಿಂದ ಪಾಂಡಿಚೇರಿಯಲ್ಲಿ ತಲೆಮರೆಸಿಕೊಂಡಿದ್ದಾಗ ಅವರೊಂದಿಗೆ ಭಾರತಿದಾಸನ್ ನಿಕಟ ಪರಿಚಯ ಬೆಳೆಸಿಕೊಂಡು, ಅವರ ಅಭಿಮಾನಿಯಾದರು. ಅದರ ಪರಿಣಾಮವಾಗಿ ಭಾರತಿದಾಸನ್ ಎಂಬ ಕಾವ್ಯನಾಮವನ್ನಿಟ್ಟುಕೊಂಡು ಸಾಹಿತ್ಯ ರಚನೆಯಲ್ಲಿ ತೊಡಗಿದರು. ಇವರಿಗೆ ಕ್ರಾಂತಿಕವಿ ಎಂಬ ಬಿರುದು ದೊರೆತಿದೆ.



ಕಲಿಕಾ ಫಲ

- ಈ ಪದ್ಯವನ್ನು ಸರಿಯಾದ ಉಚ್ಚಾರಣೆಯೊಂದಿಗೆ ಓದಿ ತಿಳಿದುಕೊಳ್ಳುವುದು.
- ಈ ಕವಿತೆಯನ್ನು ರಾಗಬದ್ಧವಾಗಿ ಹಾಡಿರಿ.
- ಭಾರತೀದಾಸನ್ 'ತಮಿಳೇ ಉಸಿರು!' ಎನ್ನುತ್ತಾರೆ. ತಮಿಳು ಭಾಷೆಯ ಮಹತ್ವದ ಬಗ್ಗೆ ನಿಮಗೇನು ಗೊತ್ತಿದೆ? ಚರ್ಚಿಸಿರಿ.
- ತಮಿಳು ಭಾಷೆಗೆ ಸಂಬಂಧಪಟ್ಟ ಹಾಡುಗಳನ್ನು ಮತ್ತು ಕವಿತೆಗಳನ್ನು ಓದಿ ಸಂತಸಪಡಿ.

5th-std_Term 1_Kannada_Reader_CBSE_KM.indd 3 7/9/2019 3:00:58 PM

ಮೌಲ್ಯಮಾಪನ

ಓದೋಣ! ಚಿಂತಿಸೋಣ! ಬರೆಯೋಣ!

ಅ. ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ

1. **ತನಿವಣ್ಣು** ಪದದ ಅರ್ಥ _____

ಅ) ಸಿಹಿಯಾದ ಹಣ್ಣು ಆ) ಸಿಹಿಯಿಲ್ಲದ ಹಣ್ಣು
ಇ) ತಣ್ಣಗಿರುವ ಹಣ್ಣು ಈ) ಚಿಕ್ಕದಾಗಿರುವ ಹಣ್ಣು

2. **ನೆಲವನ್ನು** ಈ ಪದವನ್ನು ಬಿಡಿಸಿ ಬರೆದಾಗ _____

ಅ) ನೆಲದಲ್ಲಿ + ಅನ್ನು ಆ) ನೆಲ + ಅನ್ನು
ಇ) ನೆಲ + ವನ್ನು ಈ) ನೆಲವ + ಅನ್ನು

3. **ತನ್ನ+ಇಷ್ಟ** ಈ ಪದವನ್ನು ಸೇರಿಸಿ ಬರೆದಾಗ_____

ಅ) ತನಗಿಷ್ಟ ಆ) ತನ್ನಯಿಷ್ಟ
ಇ) ತನ್ನಿಷ್ಟ ಈ) ತನ್ನಷ್ಟಕ್ಕೆ

ಆ. ಈ ಪದಗಳನ್ನು ಬಿಡಿಸಿ ಬರೆಯಿರಿ.

ಅ) ಬಾನಂಚು – _____ + _____
ಆ) ಸಣ್ಣಕ್ಕ – _____ + _____

ಇ. ಕೆಳಗೆ ಕೊಟ್ಟಿರುವ ಪದಗಳಿಗೆ ಸರಿಯಾದ ಪದಗಳನ್ನು ಹೊಂದಿಸಿ ಬರೆಯಿರಿ.

1. ಹಾಲು – ಬೆಲ್ಲ
2. ಎಳನೀರು – ನಿಂಬೆಹಣ್ಣು
3. ನಿಂಬೆರಸ – ಹಸು
4. ಪಾನಕ – ತೆಂಗಿನ ಮರ

ಈ. ಈ ಪದ್ಯದಲ್ಲಿ ಬರುವ ಪ್ರಾಸ ಪದಗಳನ್ನು ಬರೆಯಿರಿ.

_____, _____, _____, _____

ಉ. ಈ ಪದ್ಯದಲ್ಲಿ ಕಂಡು ಬರುವ ಒತ್ತಕ್ಷರ ಪದಗಳನ್ನು ಗುರುತಿಸಿ 'ಬರೆಯಿರಿ.

_____, _____, _____, _____

ಊ. ಈ ಪದ್ಯದಲ್ಲಿ ಬರುವ ವರ್ಣನೆಯ ಪದಗಳನ್ನು ಬರೆಯಿರಿ.

_____, _____, _____, _____

ಋ. ಈ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ಕಾಳುಗಳನ್ನು ಬೇಯಿಸಿ ನೀಡುವವರು ಯಾರು ?
2. ಭಾರತಿದಾಸನ್ ಅವರ ನಿಜವಾದ ಹೆಸರೇನು ?

ಎ) ಚಿಂತನಾಶೀಲ ಪ್ರಶ್ನೆ.

ಭಾರತಿದಾಸನ್ ಅವರ ಇನ್ನಿತರ ಕೃತಿಗಳನ್ನು ಸಂಗ್ರಹಿಸಿ ಓದಿರಿ.

5th-std_Term 1_Kannada_Reader_CBSE_KM.indd 4 7/9/2019 3:00:58 PM


ಘಟಕ ಒಂದು

ವಿಜ್ಞಾನ ಉಳಿವಿಗಾಗಿಯೇ? ಅಳಿವಿಗಾಗಿಯೇ?

ಗದ್ಯ

ಆಶಯ

ಮಾತನಾಡುವುದು ಸಾಮಾನ್ಯ ಕಲೆ. ಒಂದು ವೇದಿಕೆಯ ಮೇಲೆ ಮಾತನಾಡುವುದು ವ್ಯಕ್ತಿಯ ಪ್ರೌಢಿಮೆಯನ್ನು ತೋರಿಸುತ್ತದೆ. ಒಂದು ವಿಷಯವನ್ನು ತೆಗೆದುಕೊಂಡು ಅದರ ಬಗ್ಗೆ ಚರ್ಚಿಸುವುದು ಆ ವ್ಯಕ್ತಿಯ ಬೌದ್ಧಿಕ ಸಾಮರ್ಥ್ಯವನ್ನು ತಿಳಿಸುತ್ತದೆ. ಹಾಗೆಯೇ ಬೆಳೆಯುವ ಮಕ್ಕಳಲ್ಲಿ ಅವರ ಬುದ್ಧಿಶಕ್ತಿಯ ಮಟ್ಟವನ್ನು ಹೆಚ್ಚಿಸಲು ಈ ಚರ್ಚಾಸ್ಪರ್ಧೆಯು ಸಹಕಾರಿಯಾಗಿದೆ.



ಪರಿಚಯ

ಸ್ಥಳ	:	ಶಾಲಾ ಆವರಣ.
ಸಮಯ	:	ಬೆಳಿಗ್ಗೆ 3.00 ಗಂಟೆ.
ವಿಷಯ	:	ವಿಜ್ಞಾನದ ಬೆಳವಣಿಗೆ ಉಳಿವಿಗಾಗಿಯೇ? ಅಳಿವಿಗಾಗಿಯೇ?
ತೀರ್ಪುಗಾರರು	:	ಶಿಕ್ಷಕರು
ಉಳಿವಿಗಾಗಿ ತಂಡ	:	ರವಿ, ಮಾಲ
ಅಳಿವಿಗಾಗಿ ತಂಡ	:	ರಘು, ಫಾತಿಮಾ.

ಚರ್ಚಾಸ್ಪರ್ಧೆ ಪ್ರಾರಂಭ

ತೀರ್ಪುಗಾರರು : ಈಗ ನಮ್ಮ ಶಾಲೆಯ ವಿದ್ಯಾರ್ಥಿಗಳು ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಿ ಮಾತನಾಡಲಿದ್ದಾರೆ. 'ವಿಜ್ಞಾನದ ಬೆಳವಣಿಗೆ ಉಳಿವಿಗಾಗಿ' ಎಂಬ ತಂಡದಲ್ಲಿ ರವಿ ಮತ್ತು ಮಾಲ ತಮ್ಮ ಅಭಿಪ್ರಾಯಗಳನ್ನು ಮಂಡಿಸುವರು. 'ವಿಜ್ಞಾನದ ಬೆಳವಣಿಗೆ ಅಳಿವಿಗಾಗಿ'

5th-std_Term 1_Kannada_Reader_CBSE_KM.indd 5 7/9/2019 3:00:58 PM

ಎಂಬ ತಂಡದಲ್ಲಿ ರಘು ಮತ್ತು ರಶ್ಮಿ ಮಾತನಾಡಿ ತಮ್ಮ ಅಭಿಪ್ರಾಯಗಳನ್ನು ತಿಳಿಸುವರು. ಎರಡೂ ತಂಡಗಳ ವಿವಾದಗಳನ್ನು ಗಮನಿಸಿ ತೀರ್ಪನ್ನು ನೀವೇ ತೀರ್ಮಾನಿಸಿ.

ರವಿ : ಮೊದಲು ಸಭಿಕರಿಗೆ ವಂದಿಸುತ್ತೇನೆ. ಇಂದು ಆಧುನಿಕ ಜಗತ್ತಿನಲ್ಲಿ ವಿಜ್ಞಾನವು ಶರವೇಗದಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಮುಂದುವರೆಯುತ್ತಿದೆ ಹಾಗೂ ಪ್ರಪಂಚವೇ ವಿಜ್ಞಾನಮಯವಾಗುತ್ತಿದೆ. ವಿದ್ಯುತ್, ದೂರದರ್ಶನ, ಗಣಕಯಂತ್ರ, ರುಬ್ಬುವ ಯಂತ್ರ, ವಿದ್ಯುತ್ ಪಂಖ ಮುಂತಾದ ವಸ್ತುಗಳೆಲ್ಲ ವಿಜ್ಞಾನದ ಬೆಳವಣಿಗೆಯಿಂದಲೇ ರೂಪುಗೊಂಡಿದೆ. ಹಾಗಾಗಿ ವಿಜ್ಞಾನವು ಉಳಿವಿಗಾಗಿಯೇ ಎಂದು ತಿಳಿಸುತ್ತೇನೆ.

ರಘು : ನಮಸ್ಕಾರ. ವಿಜ್ಞಾನದ ಬೆಳವಣಿಗೆ ಮಾನವನ ದೈಹಿಕ ಶ್ರಮವನ್ನು ಕಡಿಮೆ ಮಾಡಿದೆ. ವ್ಯವಸಾಯಕ್ಕೆ ಬಳಸುವ ಕೀಟನಾಶಕಗಳಿಂದ ಅಪಾಯಕಾರಿ ವ್ಯಾಧಿಗಳು ಬರುತ್ತವೆ. ರಾಸಾಯನಿಕ ಗೊಬ್ಬರಗಳಿಂದ ನೆಲದ ಸಾರವು ಕಡಿಮೆಯಾಗುತ್ತದೆ. ಫಲವತ್ತಾದ ಭೂಮಿಗಳೆಲ್ಲ ವಿಷಪೂರಿತ ನೆಲಗಳಾಗಿ ಬದಲಾವಣೆಯಾಗುವ ಪರಿಸ್ಥಿತಿ ಬಂದುಬಿಟ್ಟಿದೆ.

ಮಾಲ : 'ವಿಜ್ಞಾನವಿಲ್ಲದೆ ಪ್ರಪಂಚವಿಲ್ಲ'. ಇಂದು ಪ್ರತಿಯೊಬ್ಬರೂ ವೈಜ್ಞಾನಿಕ ತಾಂತ್ರಿಕತೆಗೆ ಅವಲಂಬಿತರಾಗಿದ್ದಾರೆ. ಇಂದಿನ ಆಧುನಿಕ ಯುಗದಲ್ಲಿ ಪ್ರಪಂಚದಲ್ಲಿ ನಡೆಯುವ ವಿಚಾರಗಳು, ಘಟನೆಗಳು, ಸನ್ನಿವೇಶಗಳು, ವಾಯುಗುಣ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ದೂರದರ್ಶನದ ಮೂಲಕ ವೀಕ್ಷಿಸಿ ತಿಳಿದುಕೊಳ್ಳುತ್ತೇವೆ. ಹಾಗಾಗಿ ವಿಜ್ಞಾನದ ಬೆಳವಣಿಗೆ ಮಾನವನ ಅಭಿವೃದ್ಧಿಗೆ ಪೂರಕವಾಗಿದೆ ಎಂದೇ ನಾನು ಭಾವಿಸುತ್ತೇನೆ.

ಫಾತಿಮಾ : ನಮ್ಮ ಹಿರಿಯರು ಪ್ರಕೃತಿದತ್ತವಾದ ಆಹಾರವನ್ನು ಸೇವಿಸಿ ದೀರ್ಘಕಾಲ ಆರೋಗ್ಯವಾಗಿ ಬಾಳಿದರು. ಆದರೆ ಇಂದಿನ ಪರಿಸ್ಥಿತಿ ಏನು? ಹೆಚ್ಚುತ್ತಿರುವ ಕಾರ್ಖಾನೆಗಳು, ಅಧಿಕವಾದ ಸಂಚಾರ ಸಾಧನಗಳು ಗಾಳಿಯನ್ನು ಮಲಿನಗೊಳಿಸುತ್ತಿವೆ. ಅವುಗಳ ಕರ್ಕಶವಾದ ಶಬ್ದದಿಂದ 'ಶಬ್ದ ಮಾಲಿನ್ಯ'ವಾಗುತ್ತಿದೆ. ಹೊಸ ಹೊಸ ವ್ಯಾಧಿಗಳು ಹುಟ್ಟಿಕೊಂಡಿವೆ. ಇದನ್ನು ವಿಜ್ಞಾನ ತಂಡದವರು ತಿರಸ್ಕರಿಸಲು ಸಾಧ್ಯವೇನು?

ರವಿ : ಎಂಥಾ ತಮಾಷೆಯ ಮಾತಿದು! ಕೆಡುಕನ್ನುಂಟು ಮಾಡುವುದು ಸಂಚಾರ ಸಾಧನಗಳೇ? ಇವುಗಳ ಸಹಾಯದಿಂದ ಪ್ರಪಂಚವನ್ನು ಕ್ಷಣಾರ್ಧದಲ್ಲಿ ಸುತ್ತಿ ಬರಬಹುದಲ್ಲವೇ? ಅದು ನಿನಗೆ ತಿಳಿಯದೆ? ಮಾನವ ಹಕ್ಕಿಯಂತೆ ಆಕಾಶದಲ್ಲಿ ಹಾರಬಲ್ಲ, ಮೀನಿನಂತೆ ನೀರಿನಲ್ಲಿ ಈಜಬಲ್ಲ. ಇದಕ್ಕೆ ಕಾರಣ ವಿಜ್ಞಾನವಲ್ಲದೆ ಮತ್ತೇನು? ಇಂದು ಯಾವುದೋ ಮೂಲೆಯಲ್ಲಿ ಕುಳಿತು ಪ್ರಪಂಚದಲ್ಲಿ ನಡೆಯುವ ವಿದ್ಯಾಮಾನಗಳೆಲ್ಲವನ್ನೂ ತಿಳಿಯುವಂತೆ ಮಾಡುವ ಕೃತಕ ಉಪಗ್ರಹಗಳ ಕೊಡುಗೆ ವಿಜ್ಞಾನದ್ದಲ್ಲವೇ? ಅವುಗಳನ್ನು ಕಾರ್ಯವೆಸಗುವಂತೆ ಮಾಡುವ ಗಣಕಯಂತ್ರಗಳು ವಿಸ್ಮಯವನ್ನುಂಟು ಮಾಡುವುದಿಲ್ಲವೇ? ಆದುದರಿಂದ ವಿಜ್ಞಾನದ ಅಗತ್ಯವಿದೆ ಎಂಬುದು ನನ್ನ ಅನಿಸಿಕೆ.

ರಘು : ಏನು ದೂರದರ್ಶನದಿಂದ ಒಳ್ಳೆಯದೇ? ಇಂದಿನ ವಿದ್ಯಾರ್ಥಿಗಳ ಶಿಕ್ಷಣಕ್ಕೂ, ಒಳ್ಳೆಯ ನಡತೆಗಳಿಗೂ ಕೆಡುಕನ್ನುಂಟು ಮಾಡುತ್ತಿರುವುದು ದೂರದರ್ಶನ ತಾನೇ? ಸಿನಿಮಾಗಳು ನಮ್ಮ ಸಂಸ್ಕೃತಿ, ಸಂಪ್ರದಾಯಗಳನ್ನು ನಾಶ ಮಾಡುತ್ತಿವೆಯಲ್ಲವೇ? ಮಕ್ಕಳ ಮನಸ್ಸು ಹೂವಿನಂತಹದ್ದು. ಅವರ ಮನಸ್ಸನ್ನು ಆಕರ್ಷಿಸಿ ಅವರ ಭಾವನೆಗಳನ್ನು ಕೆರಳಿಸಿ ಶಿಕ್ಷಣದ ಕಡೆ ಗಮನ ಕೊಡದೆ ಕಲಿಕೆಯು ಕುಂಠಿತವಾಗಲು ಕಾರಣವಾಗಿದೆ. ಆದ್ದರಿಂದ ವಿಜ್ಞಾನದ ಸಾಧನಗಳು ನಮ್ಮನ್ನು ವಿನಾಶದತ್ತ ಕೊಂಡೊಯ್ಯುತ್ತವೆ.

ಮಾಲ : ಇಂದು ಶಿಕ್ಷಣ ಕ್ಷೇತ್ರದಲ್ಲಿ ವಿಜ್ಞಾನವು ತನ್ನ ಮಹತ್ತರವಾದ ಕೊಡುಗೆಯನ್ನು ನೀಡಿ ಶೈಕ್ಷಣಿಕ ಅಭಿವೃದ್ಧಿಗೆ ಕಾರಣವಾಗಿದೆ. ಉದಾಹರಣೆಗೆ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ

5th-std_Term 1_Kannada_Reader_CBSE_KM.indd 6 7/9/2019 3:00:58 PM

ಶಿಕ್ಷಕರು ಹೇಳಿಕೊಟ್ಟ ವಿಷಯವಲ್ಲದೆ, ಹೆಚ್ಚಿನ ಜ್ಞಾನವನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಗಣಕಯಂತ್ರದ ಮೂಲಕ ಅಂತರ್ಜಾಲದಲ್ಲಿ ಹುಡುಕಿ ತಮ್ಮ ಕಲಿಕಾಸಾಮರ್ಥ್ಯವನ್ನು ವಿದ್ಯಾರ್ಥಿಗಳು ಹೆಚ್ಚಿಸಿಕೊಳ್ಳಲು ವಿಜ್ಞಾನವು ಕಾರಣವಾಗಿದೆ.

ಫಾತಿಮಾ : ನೀನು ಹೇಳುವುದನ್ನು ಒಂದು ಕಡೆ ಒಪ್ಪಬಹುದಾದರೂ, ಮತ್ತೊಂದು ಕಡೆ ದುಷ್ಪರಿಣಾಮವನ್ನು ಬೀರುವುದರಲ್ಲಿ ಸಂದೇಹವಿಲ್ಲ. ಹೇಗೆಂದರೆ ಅಂತರ್ಜಾಲವು ಇಂದು ಜಾಗತಿಕ ಮಟ್ಟದಲ್ಲಿ ಬೆಳೆದಿದೆಯಾದರೂ ವಿದ್ಯಾರ್ಥಿಗಳು ಅದರಲ್ಲಿಯೇ ಮುಳುಗಿರುವುದರಿಂದ ಸಮಾಜಘಾತುಕಶಕ್ತಿ, ದುಶ್ಚಟಗಳು ಲೀಲಾಜಾಲವಾಗಿ ಅಂತರ್ಜಾಲದಲ್ಲಿ ಹರಿದಾಡುವುದರಿಂದ ವಿದ್ಯಾರ್ಥಿಗಳ ಕಲಿಕೆಯ ಮೇಲೆ ಅದು ದುಷ್ಪರಿಣಾಮ ಬೀರುತ್ತದೆ.

ತೀರ್ಪುಗಾರರು : ವಿದ್ಯಾರ್ಥಿಗಳೇ! ಈ ಕಾರ್ಯಕ್ರಮಕ್ಕೆ ಆಗಮಿಸಿ ಆಲಿಸಿದ ನಿಮ್ಮೆಲ್ಲರಿಗೂ ಕೃತಜ್ಞತೆಯನ್ನು ತಿಳಿಸುತ್ತೇನೆ. ಇದುವರೆಗೂ ಎರಡೂ ತಂಡದವರೂ ನಡೆಸಿದ ಚರ್ಚಾಸ್ಪರ್ಧೆಯನ್ನು ಕೇಳಿದಿರಿ. ಎರಡು ತಂಡಗಳ ವಾದ ಮತ್ತು ಪ್ರತಿವಾದಿಗಳು ತುಂಬಾ ಚೆನ್ನಾಗಿ ವಿಜ್ಞಾನದಿಂದ ಉಂಟಾಗುವ ಅನುಕೂಲಗಳು ಮತ್ತು ಅನಾನುಕೂಲಗಳು ಎಂಬ ವಿಷಯವಾಗಿ ತಮ್ಮ ಭಾಷಾ ಪ್ರೌಢಿಮೆಯಿಂದ ಯಾರೂ ಸೋಲದಂತೆ ತುಂಬಾ ಸುಂದರವಾಗಿ ಚರ್ಚೆಯನ್ನು ನಡೆಸಿಕೊಟ್ಟಿರುವ ನಿಮಗೆ ಧನ್ಯವಾದಗಳು. ವಿಜ್ಞಾನದ ಸಾಧನಗಳಿಂದ ನಾಶದತ್ತ ಸಾಗುತ್ತಿದ್ದೇವೆಯೇ ಅಥವಾ ಅವುಗಳನ್ನು ಉಪಯೋಗಿಸುವ ವಿಧಾನಗಳಿಂದ ನಾಶಗಳು ಉಂಟಾಗುತ್ತಿವೆಯೇ ಎಂಬ ದೃಷ್ಟಿಯಿಂದ ಯೋಚಿಸಿ ನೋಡಿ ತೀರ್ಪನ್ನು ನೀವೇ ಹೇಳಿರಿ.

ಕಲಿಕಾ ಫಲ

- ವಿಜ್ಞಾನವು ಉಳಿವಿಗಾಗಿಯೇ? ಅಳಿವಿಗಾಗಿಯೇ? ಇವುಗಳಲ್ಲಿ ಯಾವುದು ಉತ್ತಮ? ನಿಮ್ಮ ಅಭಿಪ್ರಾಯವನ್ನು ತಿಳಿಸಿ.
- ವಿಜ್ಞಾನವು ಮಾನವನ ಅಭಿವೃದ್ಧಿಗೆ ಮಹತ್ವವಾದದ್ದು. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?
- ದೇಶದ ಅಭಿವೃದ್ಧಿಯಲ್ಲಿ ಹೆಚ್ಚಿನ ಮಹತ್ವ ವಹಿಸುವವರು ವಿದ್ಯಾವಂತರೇ? ಅವಿದ್ಯಾವಂತರೇ? ನಿಮ್ಮ ತರಗತಿಯಲ್ಲಿ ಚರ್ಚಿಸಿ.

ಮೌಲ್ಯಮಾಪನ

ಓದೋಣ! ಚಿಂತಿಸೋಣ! ಬರೆಯೋಣ!

ಅ. ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ

1. ಜಗತ್ತಿನಲ್ಲಿ ಈ ಪದವನ್ನು ಬಿಡಿಸಿ ಬರೆದಾಗ .....

ಅ) ಜಗತ್ತು+ನಲ್ಲಿ ಆ) ಜಗತ್ತು+ಅಲ್ಲಿ
ಇ) ಜಗತ್ತಿನ+ನಲ್ಲಿ ಈ) ಜಗತ್ತಿನ+ಅಲ್ಲಿ

2. 'ಪ್ರಪಂಚ' ಈ ಪದಕ್ಕೆ ಸರಿಸಮವಲ್ಲದ ಪದ .....

ಅ) ವಿಶ್ವ ಆ) ಜಗತ್ತು ಇ) ಬ್ರಹ್ಮಾಂಡ ಈ) ಪಂಚ

5th-std_Term 1_Kannada_Reader_CBSE_KM.indd 7 7/9/2019 3:00:58 PM

3 **ಕ್ಷಣ+ಅರ್ಧ** ಈ ಪದವನ್ನು ಸೇರಿಸಿ ಬರೆದಾಗ .....

ಅ) ಕ್ಷಣಾರ್ಧ ಆ) ಕ್ಷಣಾರ್ಥ

ಇ) ಕ್ಷಣದರ್ಧ ಈ) ಕ್ಷಣದರ್ಥ

4 **ಉಳಿವು** ಈ ಪದದ ವಿರುದ್ಧ ಪದ .....

ಅ) ಬೆಳವಣಿಗೆ ಆ) ಅಭಿವೃದ್ಧಿ ಇ) ಅಳಿವು ಈ) ಉಳುವುದು

5 **ಬೆಳಕು** ಈ ಪದಕ್ಕೆ ಸರಿಸಮವಲ್ಲದ ಪದ .....

ಅ) ಪ್ರಕಾಶ ಆ) ಜ್ಯೋತಿ ಇ) ಹೊಳಪು ಈ) ಬೆಳೆಸು

ಆ. ಈ ಪದಗಳನ್ನು ಬಿಡಿಸಿ ಬರೆಯಿರಿ.

ಅ) ಅಭಿಪ್ರಾಯವನ್ನು – –––––––– + ––––––––––

ಆ) ವಿದ್ಯಾಭ್ಯಾಸ – –––––––– + ––––––––––

ಇ. ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1 ವಿಜ್ಞಾನ ಉಳಿವಿಗಾಗಿಯೇ ಎಂಬುದನ್ನು ಯಾರು ಚರ್ಚಿಸುತ್ತಿದ್ದರು ?

2 ವಿಜ್ಞಾನದಿಂದಾಗುವ ಪ್ರಯೋಜನಗಳೇನು ?

3 ವಿಜ್ಞಾನದ ಬೆಳವಣಿಗೆಯಿಂದಾಗುವ ದುಷ್ಪರಿಣಾಮಗಳು ಯಾವುವು?

4 ತೀರ್ಪುಗಾರರು ಹೇಳಿದ ತೀರ್ಪಿನ ಬಗ್ಗೆ ನಿಮ್ಮ ಅಭಿಪ್ರಾಯವೇನು?

5 ವಿದ್ಯುತ್‌ನಿಂದ ಕಾರ್ಯವೆಸಗುವ ಸಾಧನಗಳು ಯಾವುವು? ಯಾವುದಾದರು ಐದನ್ನು ಬರೆಯಿರಿ.

6 ಫಾತಿಮಾ ಏನೆಂದು ಚರ್ಚಿಸಿದಳು. ತಿಳಿಸಿ.

ಈ. ಚಿಂತನಾಶೀಲ ಪ್ರಶ್ನೆ.

1 ಆಧುನಿಕ ಯುಗದಲ್ಲಿ ಅಂತರ್ಜಾಲದ ಅನುಕೂಲ ಮತ್ತು ಅನಾನುಕೂಲತೆಗಳ ಬಗ್ಗೆ ತರಗತಿಯಲ್ಲಿ ಚರ್ಚಿಸಿ ?

2 'ತಿಳುವಳಿಕೆ' ಅಥವಾ 'ಸಂಸ್ಕೃತಿ' ಇದರಲ್ಲಿ ಯಾವುದು ಶ್ರೇಷ್ಠ. ಚರ್ಚಿಸಿ.

5th-std_Term 1_Kannada_Reader_CBSE_KM.indd 8 7/9/2019 3:00:58 PM

ಓದಿ ತಿಳಿದುಕೊಳ್ಳಿ

ಚರ್ಚಾಸ್ಪರ್ಧೆಯ ಉದ್ಘಾಟನಾ ಸಮಾರಂಭ

ಕಾರ್ಯಕ್ರಮ

- ತಮಿಳ್ ತಾಯ್ ವಾಳ್ತು
- ಸ್ವಾಗತ ಭಾಷಣ : ಅನುಶ್ರೀ, ಐದನೇ ತರಗತಿ
- ಸಭಾಧ್ಯಕ್ಷರ ಮಾತು : ಮುಖ್ಯೋಪಾಧ್ಯಾಯರು ಪಂಚಾಯತ್ ಯೂನಿಯನ್ ಪ್ರಾಥಮಿಕ ಶಾಲೆ, ಪಾಳ್ಯಂ, ತಾಳವಾಡಿ.
- ವಿಶೇಷ ಭಾಷಣ : ವಿಶೇಷ ಆಹ್ವಾನಿತರು ಕ್ಷೇತ್ರ ಶಿಕ್ಷಣಾಧಿಕಾರಿಗಳು, ತಾಳವಾಡಿ.
- ವಂದನಾರ್ಪಣೆ : ಅಖಿಲೇಶ್, ಐದನೇ ತರಗತಿ.
- ರಾಷ್ಟ್ರಗೀತೆ



5th-std_Term 1_Kannada_Reader_CBSE_KM.indd 9 7/9/2019 3:00:58 PM

ಘಟಕ ಒಂದು

ಉಪಪಠ್ಯ

ಶಬ್ದವೇನು.....?



ಅಂದು ಭಾನುವಾರ. ಶಾಲೆಗೆ ರಜೆಯಿದ್ದುದರಿಂದ ಸುರೇಶನು ತನ್ನ ಅಜ್ಜಿಯೊಡನೆ ಆಡುಗಳನ್ನು ಮೇಯಿಸಲು ಹೊರಟನು.


ಆಡುಗಳು ಕಾಡಿನ ಪಕ್ಕದಲ್ಲಿ ಮೇಯುತ್ತಿದ್ದವು. ಸುರೇಶನು ಮರದ ಕೆಳಗೆ ಕುಳಿತು ಕಾಡಿನ ಸೌಂದರ್ಯವನ್ನು ಸವಿಯುತ್ತಿದ್ದನು. ಆ ಮರದ ಮೇಲೆ ಕುಳಿತಿರುವ ಕೋತಿಗಳ ಕಿರುಚಾಟದಿಂದ ಇವನಿಗೆ ತೊಂದರೆಯಾಗುತ್ತಿತ್ತು. ಆದ್ದರಿಂದ ಅವನು ಬೇರೊಂದು ಮರದ ಕೆಳಗೆ ಹೋಗಿ ಕುಳಿತನು. ಆ ಮರದಲ್ಲಿ ಅಳಿಲುಗಳು ಓಡಾಡಿಕೊಂಡು ಆಟವಾಡುತ್ತಿದ್ದವು. ಆ ಮರದಲ್ಲಿದ್ದ ಕೋಗಿಲೆ 'ಕುಹೂ... ಕುಹೂ...' ಎಂದು ಕೂಗುತ್ತಿತ್ತು. ಕೋಗಿಲೆಯ ಧ್ವನಿಯನ್ನು ಕೇಳಲು ಸುರೇಶನಿಗೆ ಇಂಪಾಗಿತ್ತು. ಹಾಗೆಯೇ ಸ್ವಲ್ಪ ಹೊತ್ತು ಮಲಗಿಕೊಂಡು ವಿಶ್ರಾಂತಿ ಪಡೆದನು. ದಿಢೀರೆಂದು ಆಡುಗಳು 'ಮ್ಯಾ... ಮ್ಯಾ...' ಎಂದು ಅರಚುವ ಶಬ್ದವನ್ನು ಕೇಳಿ ಸುರೇಶನು ಗಾಬರಿಯಿಂದಲೇ ಏನೆಂದು ಗಮನಿಸಿದನು. ಪಕ್ಕದ ಪೊದೆಯಲ್ಲಿ ನರಿಯೊಂದು ಆಡುಗಳನ್ನು ಹಿಡಿಯಲು ಹೊಂಚು ಹಾಕುವುದನ್ನು ಕಂಡನು! ತಕ್ಷಣವೇ ಒಂದು ಕಡ್ಡಿಯನ್ನು ಬಗ್ಗಿಸಿ ಬಿಲ್ಲಿನಂತೆ ಮಾಡಿಕೊಂಡು ನರಿಗೆ ಬಾಣ ಬಿಟ್ಟನು. ಆ ಬಾಣ ನರಿಗೆ ತಗುಲಿ ಗಾಯವಾದುದರಿಂದ ಅದು ಕಿರುಚಿಕೊಂಡೇ ಓಡಿ ಹೋಯಿತು.

ಸುರೇಶನು ಆಡುಗಳನ್ನು ಓಡಿಸಿಕೊಂಡು ಅಜ್ಜಿಯೊಡನೆ ಮನೆಗೆ ಹೊರಟನು. ದೂರದಿಂದ ಎಲ್ಲೋ ಸಿಂಹದ ಘರ್ಜನೆಯ ಶಬ್ದ ಕೇಳಿಸಿತು. ಆ ಶಬ್ದ ಕೇಳಿದೊಡನೆ ಕಾಡೇ ನಡುಗಿತು. ಪಕ್ಷಿಗಳು ರೆಕ್ಕೆಯನ್ನು ಪಟಪಟನೆ ಬಡಿಯುತ್ತಾ ಅಲ್ಲಲ್ಲಿ ಹಾರಾಡುತ್ತಿದ್ದವು, ಆನೆಯು ಘೀಳಿಟ್ಟಿತು, ಗೂಬೆ ಘೂಂಕರಿಸಿತು, ಮುಂಗುಸಿ ಗಿಡಗಳ ಪೊದರಿನಿಂದ ಜಿಗಿದು ಓಡಿ ಹೋಯಿತು, ನವಿಲು ನಡುಗಿತು, ಹಾವು ತನ್ನ ಹುತ್ತದಿಂದ ಹೊರಬಂದು ಭುಸುಗುಟ್ಟಿತು, ಕುದುರೆ ಕೆನೆಯಿತು. ಇದನ್ನೆಲ್ಲ ಕೇಳಿದ ಸುರೇಶನಿಗೆ ನಾಲಗೆ ಒಣಗಿತು. ತಾನು ತಂದಿದ್ದ ನೀರನ್ನು ಕುಡಿದನು. ಮನೆಗೆ ಹೋಗುವ ದಾರಿಯಲ್ಲಿ ದುಂಬಿಗಳ ಝೇಂಕಾರ ಅವನಿಗೆ ಕೇಳಿಸಿತು. ಊರಿನ ಹತ್ತಿರಕ್ಕೆ ಬಂದ ನಂತರ ಸುರೇಶನಿಗೆ ಭಯ ಕಡಿಮೆಯಾಯಿತು.



ಸುರೇಶನು ತನ್ನ ಮನೆಗೆ ಬಂದೊಡನೆ ಅವನನ್ನು ಕಂಡ ಸಂತೋಷದಲ್ಲಿ ಕೊಟ್ಟಿಗೆಯಲ್ಲಿದ್ದ ಹಸು, 'ಅಂಬಾ...' ಎಂದು ಕೂಗಿತು. ಸುರೇಶನು ಆಡುಗಳನ್ನು ಕೊಟ್ಟಿಗೆಯೊಳಗೆ ಬಿಟ್ಟು ತನ್ನ ಅಮ್ಮನ ಹತ್ತಿರ ಹೋಗಿ ಕಾಡಿನಲ್ಲಿ ಕಂಡ ನರಿಯ ಬಗ್ಗೆಯೂ;

5th-std_Term 1_Kannada_Reader_CBSE_KM.indd 10 7/9/2019 3:00:59 PM



ತಾನು ಕೇಳಿದ ಸಿಂಹ, ಆನೆ ಮೊದಲಾದವುಗಳ ಶಬ್ದಗಳ ಬಗ್ಗೆಯೂ ಕುತೂಹಲದಿಂದ ವಿವರಿಸಿದನು. ಅಮ್ಮ ಸುರೇಶನ ಧೈರ್ಯವನ್ನು ಮೆಚ್ಚಿ ಹೊಗಳಿದಳು.

ಬಾಳೆ ತೋಟದಲ್ಲಿರುವ ನೀರಿನ ತೊಟ್ಟಿಯಲ್ಲಿ ಅವನು ಸ್ನಾನ ಮಾಡಿ ಬಂದನು. ಅಮ್ಮ ಕೊಟ್ಟ ಚಕ್ಕುಲಿಯನ್ನು ತಿಂದನು. ಆಗ ಅವನ ತಂಗಿ ಶೀಲಳು ಹಾಲನ್ನು ಕರೆಯುತ್ತಿದ್ದಳು.

ಸ್ವಲ್ಪ ಸಮಯದ ನಂತರ ಸುರೇಶ, ಶೀಲ ಮತ್ತು ಅಜ್ಜಿಯನ್ನು ಊಟ ಮಾಡಲು ಅಮ್ಮ ಕರೆದಳು. ಅಮ್ಮನ ಕರೆಯನ್ನು ಕೇಳಿ ಇಬ್ಬರೂ ಎದ್ದು ಹೋಗಿ ಊಟ ಮಾಡಿದರು.

ನಂತರ ಮಲಗಲು ಹೋಗುವ ಮುನ್ನ ಅಜ್ಜಿ ಕಥೆ ಹೇಳಿದಳು. ಇಬ್ಬರೂ ಕಥೆಯನ್ನು ಆಸಕ್ತಿಯಿಂದ ಕೇಳಿದರು. ಇಲಿಗಳು ಮತ್ತು ಇಲಿ ಮರಿಗಳು ಕಿಚ್... ಕಿಚ್... ಎಂದು ಶಬ್ದ ಮಾಡುತ್ತಿದ್ದವು; ಇಲಿಯ ಈ ಶಬ್ದವು ಅಜ್ಜಿ ಹೇಳುವ ಕಥೆಗೆ ಹೂಂಗುಟ್ಟುವಂತಿತ್ತು. ನಾಯಿಯ 'ಬೌ... ಬೌ...' ಶಬ್ದವನ್ನು ಕೇಳಿ ಅವನು ಮನೆಯಿಂದ ಹೊರಗೆ ಬಂದು ನೋಡಿದನು.

ಅಲ್ಲಿ ಬೆಕ್ಕನ್ನು ನೋಡಿ ನಾಯಿ ಬೊಗಳುತ್ತಿತ್ತು. ನಾಯಿ ಮತ್ತು ಬೆಕ್ಕನ್ನು ತೆಂಗಿನ ತೋಟದ ಕಡೆಗೆ ಓಡಿಸಿ ನಂತರ ಮನೆಗೆ ಬಂದು ಮಲಗಿದನು.



ಬೆಳಿಗ್ಗೆ, ಪಕ್ಕದ ತೋಟದ ಸೀಬೆ ಮರದ ಮೇಲೆ ಕೋಳಿ ಹುಂಜವೊಂದು ಕೊಕ್ಕೊಕೋ ಎಂದು ಕೂಗುವುದನ್ನು ಕೇಳಿ ಸುರೇಶನು ನಿದ್ರೆಯಿಂದ ಎಚ್ಚೆತ್ತನು. 'ಕಾ... ಕಾ...' ಎಂದು ಕಾಗೆಯು ತನ್ನ ಬಳಗವನ್ನು ಕರೆಯುತ್ತಿತ್ತು.

5th-std_Term 1_Kannada_Reader_CBSE_KM.indd 11 7/9/2019 3:01:00 PM

ಮುಂಜಾನೆ ಸುರೇಶನು ಉತ್ಸಾಹದಿಂದ ಎದ್ದು ದಿನನಿತ್ಯದ ಕೆಲಸಗಳನ್ನು ಸಂತೋಷದಿಂದ ಪ್ರಾರಂಭಿಸಿದನು. ತನಗಾದ ಅನುಭವಗಳನ್ನು ತನ್ನ ಗೆಳೆಯರೊಡನೆ ಹಂಚಿಕೊಳ್ಳಲು ಉತ್ಸಾಹದಿಂದ ಶಾಲೆಗೆ ಹೊರಟನು.

ಪಕ್ಷಿಗಳು, ಪ್ರಾಣಿಗಳು ಮುಂತಾದ ಜೀವರಾಶಿಗಳು ಯಾವ ರೀತಿ ಶಬ್ದಗಳನ್ನು ಮಾಡುತ್ತವೆ ಎಂಬುದನ್ನು ನಮ್ಮ ಪೂರ್ವಿಕರು ಹೇಳಿಕೊಟ್ಟಿದ್ದಾರೆ. ಅದನ್ನು ನಾವು ಅನುಸರಿಸುತ್ತಿದ್ದೇವೆ.

ಕಲಿಕಾ ಫಲ

- 'ಶಬ್ದವೇನು' ಎಂಬ ಈ ಪಠ್ಯಭಾಗವನ್ನು ಸರಿಯಾದ ಉಚ್ಚಾರಣೆಯೊಂದಿಗೆ, ಲೇಖನ ಚಿಹ್ನೆಗಳ ಜೊತೆಗೆ ತಿಳಿಸಿ ಕೊಡುವುದು.
- ಸುರೇಶನ ಚಟುವಟಿಕೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು ? ಗುಂಪಿನಲ್ಲಿ ಚರ್ಚಿಸಿ.
- ರಜೆಯ ದಿನಗಳಲ್ಲಿ ನೀವು ಏನು ಮಾಡುವಿರಿ. ತರಗತಿಯಲ್ಲಿ ಹಂಚಿಕೊಳ್ಳಿರಿ.
- ನಿಮಗೆ ತಿಳಿದ ಕಥೆಯೊಂದನ್ನು ತರಗತಿಯಲ್ಲಿ ಹೇಳಿರಿ.
- ಈ ಪಾಠಕ್ಕೆ ಸಂಬಂಧಿಸಿದ ಶೀರ್ಷಿಕೆಯನ್ನು ಕುರಿತು ಗುಂಪಿನಲ್ಲಿ ಚರ್ಚಿಸಿ.

ಮೌಲ್ಯಮಾಪನ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1. ಸುರೇಶನು ಆಡುಗಳನ್ನು ಕಾಡಿಗೆ ಏಕೆ ಹೊಡೆದುಕೊಂಡು ಹೋದನು ?
2. ಸುರೇಶನ ಚಟುವಟಿಕೆಯನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬರೆಯಿರಿ.

ಚಿಂತನಾಶೀಲ ಪ್ರಶ್ನೆ

1. ಮನುಷ್ಯರಂತೆಯೇ ಪ್ರಾಣಿಗಳಿಗೂ ಮಾತನಾಡುವ ಸಾಮರ್ಥ್ಯವಿದ್ದರೆ ಹೇಗಿರುತ್ತದೆ? ಕಾಡಿನಲ್ಲಿ ವಾಸಿಸುವ ಪ್ರಾಣಿಗಳ ರೀತಿ ಅಭಿನಯಿಸಿ.
2. ನಿಮ್ಮ ಮನೆಯಲ್ಲಿ ಪ್ರೀತಿಯಿಂದ ಸಾಕುವ ನಾಯಿ, ಬೆಕ್ಕು, ಮುಂತಾದವುಗಳಿಗೆ ಏನಾದರೂ ಆಪತ್ತು ಬರುವುದಕ್ಕೆ ಮುನ್ನ ಯಾವ ಮುನ್ಸೂಚನೆಗಳು ಕಾಣಿಸುತ್ತವೆ. ವಿವರಿಸಿ.

5th-std_Term 1_Kannada_Reader_CBSE_KM.indd 12 7/9/2019 3:01:00 PM

ಘಟಕ ಒಂದು

ಸಾಂಪ್ರದಾಯಿಕ ಪದಗಳು

ವ್ಯಾಕರಣ

ನಮ್ಮ ಪೂರ್ವಿಕರು ಯಾವುದೇ ವಿಷಯವನ್ನೇ ಆಗಲಿ ಅದರದೇ ಆದ ಪದಗಳ ಬಳಕೆ ಮಾಡಿಕೊಂಡು ಆ ವಿಷಯಕ್ಕೆ ಸಂಬಂಧಿಸಿದ ಹಾಗೆ ಹೇಳುವುದನ್ನು ರೂಢಿ ಮಾಡಿಕೊಂಡಿದ್ದರು. ಅವುಗಳನ್ನು ರೂಢಿಯಲ್ಲಿರುವ ಪದಗಳು ಅಥವಾ ಸಾಂಪ್ರದಾಯಿಕ ಪದಗಳು ಎನ್ನುತ್ತೇವೆ.

ಪ್ರಾಣಿಗಳ ಧ್ವನಿಗಳಿಗೆ ಸಂಬಂಧಿಸಿದಂತೆ ರೂಢಿಯಲ್ಲಿರುವ ಸಾಂಪ್ರದಾಯಿಕ ಪದಗಳು

ಕೋತಿ	ಕಿರುಚುವುದು
ಕೋಗಿಲೆ	ಕೂಗುವುದು
ಆಡು	ಅರಚುವುದು
ಸಿಂಹ	ಘರ್ಜಿಸುವುದು
ನಾಯಿ	ಬೊಗಳುವುದು
ಹುಲಿ	ಹೂಂಕರಿಸುವುದು
ಆನೆ	ಘೀಳಿಡುವುದು
ಗೂಬೆ	ಘೂಂಕರಿಸುವುದು
ನವಿಲು	ಕೂಗುವುದು
ಹಾವು	ಭುಸುಗುಟ್ಟುವುದು

ಸಾಂಪ್ರದಾಯಿಕವಾಗಿ ಬಳಸುವ ಪ್ರಾಣಿಗಳ ಮರಿಗಳ ಹೆಸರುಗಳು

ಆಡಿನಮರಿ	ಆನೆಮರಿ
ಕೋಳಿಮರಿ	ಸಿಂಹದಮರಿ
ಕುದುರೆಮರಿ	ಹುಲಿಮರಿ
ಕೋತಿಮರಿ	ಕೀರೆಮರಿ
ಜಿಂಕೆಮರಿ	ಅಳಿಲುಮರಿ

ಸಾಂಪ್ರದಾಯಿಕ ಕ್ರಿಯಾ ಪದಗಳು

ಬಿಲ್ಲು ಬಾಣ ಬಿಟ್ಟನು	ಊಟ ಮಾಡಿದನು
ಬಟ್ಟೆ ನೇಯ್ದನು	ಗೂಡೆ ನೇಯ್ದನು
ಹೂ ಕಟ್ಟಿದಳು	ಮನೆ ಕಟ್ಟಿದನು
ಮಾತ್ರೆ ನುಂಗಿದನು	ಚಕ್ಕುಲಿ ತಿಂದನು
ನೀರು ಕುಡಿದನು	ಹಾಲು ಕುಡಿದನು

5th-std_Term 1_Kannada_Reader_CBSE_KM.indd 13 7/9/2019 3:01:00 PM

ಸಸ್ಯದ ಭಾಗಗಳ ಸಾಂಪ್ರದಾಯಿಕ ಪದಗಳು	
ಮಾವು, ಹಲಸು, ಬಾಳೆ	ಎಲೆಗಳು
ಈಚಲು, ತೆಂಗು, ತಾಳೆ	ಗರಿಗಳು
ಕಂಬು, ರಾಗಿ, ಜೋಳ	ತೆನೆಗಳು
ಭತ್ತ, ಹುಲ್ಲು, ಮೇವು	ಹುಲ್ಲು
ಅವರೆ, ಬದನೆ, ನುಗ್ಗೆ	ಕಾಯಿಗಳು

ಕೀಟಗಳು, ಪಕ್ಷಿಗಳು, ಪ್ರಾಣಿಗಳು – ಇವುಗಳ ಸಾಂಪ್ರದಾಯಿಕ ವಾಸಸ್ಥಳದ ಪದಗಳು

ಗೆದ್ದಲು	ಹುತ್ತ	ಆಡು	ಕೊಟ್ಟಿಗೆ
ದನ	ಕೊಟ್ಟಿಗೆ	ಕುದುರೆ	ಲಾಯ
ಕೋಳಿ	ಗೂಡು	ಆನೆ	ಲಾಯ
ಜೇಡ	ಬಲೆ	ಪಕ್ಷಿ	ಗೂಡು
ಏಡಿ	ದರಿ	ಇಲಿ	ಬಿಲ

ಕಲಿಕಾ ಫಲ

- ಸಾಂಪ್ರದಾಯಿಕ ಮಾತುಗಳ ಬಗ್ಗೆ ನೀವು ತಿಳಿದುಕೊಂಡಿರುವುದನ್ನು ನಿಮ್ಮ ಸ್ವಂತ ರೀತಿಯಲ್ಲಿ ತಿಳಿಸಿ.
- ನಾವು ಏಕೆ ಸಾಂಪ್ರದಾಯಿಕ ಮಾತುಗಳನ್ನು ಅನುಸರಿಸಬೇಕು? ಅನುಸರಿಸಲಿಲ್ಲವೆಂದರೆ ಭಾಷೆ ಏನಾಗುವುದು? ತರಗತಿಯಲ್ಲಿ ಚರ್ಚಿಸಿ.

ಮೌಲ್ಯಮಾಪನ

ಓದೋಣ! ಚಿಂತಿಸೋಣ! ಬರೆಯೋಣ!

ಅ. ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ

1. ನಮ್ಮ ಪೂರ್ವಿಕರು ಒಂದು ಪದವನ್ನು ಹೇಳಿದಂತೆ ನಾವೂ ಹೇಳುವುದು _____

ಅ) ಹಳೆಯ ಪದ ಆ) ಹೊಸ ಪದ ಇ) ಸಾಂಪ್ರದಾಯಿಕ ಪದ ಈ) ವಿಶೇಷ ಪದ

2. 'ಆನೆ' _____

ಆ) ಘರ್ಜಿಸುವುದು ಅ) ಕಿರುಚುವುದು ಇ) ಘೀಳಿಡುವುದು ಈ) ಕೂಗುವುದು

5th-std_Term 1_Kannada_Reader_CBSE_KM.indd 14 7/9/2019 3:01:00 PM

3 ಸಿಂಹವು _____

ಅ) ಕೂಗುವುದು ಆ) ಕಿರುಚುವುದು

ಇ) ಘರ್ಜಿಸುವುದು ಈ) ಬೊಗಳುವುದು

4 'ಭುಸುಗುಟ್ಟುವ ಪ್ರಾಣಿ' _____

ಅ) ಬೆಕ್ಕು ಆ) ನಾಯಿ

ಇ) ಇಲಿ ಈ) ಹಾವು

5 ಗರಿಗಳು ಇರುವ ಮರ _____

ಅ) ತೆಂಗು ಆ) ಮಾವು

ಇ) ನುಗ್ಗೆ ಈ) ಹಲಸು

ಆ. ಪ್ರಾಣಿಗಳ ಶಬ್ದಗಳನ್ನು ಹೊಂದಿಸಿ ಬರೆಯಿರಿ.

1. ಸಿಂಹ – ಕೂಗುವುದು
2. ಅಳಿಲು – ಘರ್ಜಿಸುವುದು
3. ನವಿಲು – ಕೀಚುವುದು
4. ಕೋಗಿಲೆ – ಕಿರುಚುವುದು
5. ಕೋತಿ – ಕುಹೂ... ಕುಹೂ...

ಇ. ಚಿತ್ರದಲ್ಲಿರುವ ಜೀವಿಗಳ ಸಾಂಪ್ರದಾಯಿಕ ಧ್ವನಿಗೆ ವೃತ್ತ ಹಾಕಿ

1 ನವಿಲು  – ಕೂಗುವುದು, ಘೀಳಿಡುವುದು, ಕಿರುಚುವುದು.

2 ಗಿಳಿ  – ಮಾತನಾಡುವುದು, ಕೂಗುವುದು, ಕೀಚುವುದು.

3 ಕೋತಿ  – ಕಿರುಚುವುದು, ಕೂಗುವುದು, ಅರಚುವುದು.

4 ಆಡು  – ಮಾತನಾಡುವುದು, ಅರಚುವುದು, ಕೂಗುವುದು.

5 ಕೋಗಿಲೆ  – ಕಿರುಚುವುದು, ಕೂಗುವುದು, ಕುಹೂ... ಕುಹೂ...

6 ಆನೆ  – ಕೂಗುವುದು, ಘೀಳಿಡುವುದು, ಘರ್ಜಿಸುವುದು.

5th-std_Term 1_Kannada_Reader_CBSE_KM.indd 15 7/9/2019 3:01:00 PM

ಈ. ಈ ಸಾಂಪ್ರದಾಯಿಕ ಕ್ರಿಯಾ ಪದಗಳನ್ನುಹೊಂದಿಸಿ ಬರೆಯಿರಿ.

1	ನೀರು	ಕಿತ್ತಳು
2	ಚಕ್ಕುಲಿ	ಬಿಟ್ಟನು
3	ಊಟ	ಕುಡಿದನು
4	ಬಿಲ್ಲುಬಾಣ	ತಿಂದನು
5	ಹೂ	ಮಾಡಿದನು

ಉ. ಚಿತ್ರದಲ್ಲಿರುವ ಜೀವಿಗಳ ಶಬ್ದದ ಧ್ವನಿಯನ್ನು ಬರೆಯಿರಿ.

1  _____

2  _____

3  _____

4  _____

5  _____

ಊ. ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ಸಾಂಪ್ರದಾಯಿಕ ನುಡಿ ಎಂದರೇನು ?
2. ಯಾವುದಾದರೂ ನಾಲ್ಕು ಪ್ರಾಣಿಗಳ ಧ್ವನಿ ಶಬ್ದಗಳನ್ನು ಬರೆಯಿರಿ.



ಭಾಷಾ ಕೌಶಲ್ಯವನ್ನು ಬೆಳೆಸಿ ಕೊಳ್ಳೋಣ

ಅ. ಕೇಳುವುದು

- ಹಾಡುಗಳನ್ನು ಸರಳವಾಗಿಯೂ ಇಂಪಾಗಿಯೂ ಕೇಳಿ ಸಂತೋಷ ಪಡುವುದು.
- ದೂರದರ್ಶನ, ಆಕಾಶವಾಣಿಕಾರ್ಯಕ್ರಮದಲ್ಲಿ, ಶಾಲೆಯಲ್ಲಿ ಆಚರಿಸುವ ಜಾತ್ರೆಗಳು, ಚರ್ಚಾಸ್ಪರ್ಧೆ, ಕವಿಗೋಷ್ಠಿ ಮೊದಲಾದವುಗಳನ್ನು ಕಂಡು, ಕೇಳಿ ಆನಂದಿಸುವುದು.

ಆ. ಮಾತನಾಡುವುದು

- ನಿಮಗೆ ಇಷ್ಟವಾದ ಶೀರ್ಷಿಕೆಯೊಂದನ್ನು ತೆಗೆದುಕೊಂಡು ತರಗತಿಯ ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಿ ಮಾತನಾಡುವುದು.
- ನಿಮಗೆ ಇಷ್ಟವಾದ ಪಕ್ಷಿಯ ಬಗ್ಗೆ 5 ನಿಮಿಷಗಳ ಕಾಲ ಮಾತನಾಡುವುದು.

5th-std_Term 1_Kannada_Reader_CBSE_KM.indd 16 7/9/2019 3:01:00 PM

ಇ. ಓದುವುದು

- ಭಾಷೆ ಮತ್ತು ಪಾಠವನ್ನು ತಪ್ಪಿಲ್ಲದಂತೆ, ಸರಳವಾಗಿ ಸುಲಭವಾಗಿ ಓದಿ ಸಂತೋಷ ಪಡುವುದು.
- ಮಕ್ಕಳ ಪತ್ರಿಕೆಯಲ್ಲಿ ಬಂದಿರುವ ಯಾವುದಾದರೂ ಒಂದು ಕಥೆಯನ್ನು ಸ್ಪಷ್ಟವಾಗಿ ಓದುವುದು.

ಈ. ಬರೆಯುವುದು

1 ಪದಗಳನ್ನು ಕೇಳಿ ಬರೆಯಿರಿ :

ತಿರುವಳ್ಳುವರ್, ಚಂದ್ರಲೋಕ, ಕುವೆಂಪು, ಪ್ರಕೃತಿ, ಪಕ್ಷಿಧಾಮ, ಭಾರತಿದಾಸನ್, ಸಂಸ್ಕೃತಿ, ಉದ್ಯೋಗ,

2 ಈ ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬರೆಯಿರಿ.

1. ಜ್ಞಾನಾರ್ಜನೆ – _____
2. ತೆಂಗಿನಮರ – _____
3. ಕಲಾಮಂದಿರ – _____
4. ಅಭಿನಂದನೆ – _____

3 ಈ ಪದಗಳನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

ಮೇರಿ ಆಡಿದಳು	ನವಿಲು ಹಾರಿತು	ಹುಲಿ ಹೂಂಕರಿಸಿತು
ಅಜ್ಜಿ ಕೆಮ್ಮಿದಳು	ಮಗು ನಕ್ಕಿತು	ಬೆಕ್ಕು ಮಲಗಿತ್ತು

1. ಮಗು ಏನು ಮಾಡಿತು? _____
2. ಮೇರಿ ಏನು ಮಾಡಿದಳು? _____
3. ಯಾವ ಪಕ್ಷಿ ಹಾರಿತು ? _____
4. ಅಜ್ಜಿ ಏನು ಮಾಡಿದಳು ? _____
5. ಯಾವುದು ಮಲಗಿತ್ತು ? _____
6. ಹುಲಿ ಏನು ಮಾಡಿತು ? _____

4. ಈ ಸಾಲುಗಳನ್ನು ಓದಿಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

ಕನ್ನಡ ಎನ್ನುವ ಶಬ್ದಕ್ಕೆ ಕಸ್ತೂರಿ ಎನ್ನುವ ಅರ್ಥವಿದೆ. ಕನ್ನಡ ಭಾಷೆಯು ನಮ್ಮ ಮಾತೃಭಾಷೆ ಮಾತ್ರವಲ್ಲದೆ ಪ್ರಾಚೀನ ಭಾಷೆಯೂ ಆಗಿದೆ. ಕನ್ನಡ ಭಾಷೆಗೆ ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವಿದೆ. ಜೀವನದ ಅನುಭವವೇ ಸಾಹಿತ್ಯವಾಗಿ ರೂಪುಗೊಂಡಿದೆ. ಸಾಹಿತ್ಯದಲ್ಲಿ ಕನ್ನಡ ಭಾಷೆಯು ವಿಶೇಷತೆಯನ್ನು ಪಡೆದಿದೆ. ಕನ್ನಡ ಭಾಷೆಯು ಸ್ವರಗಳು, ವ್ಯಂಜನಗಳು, ಯೋಗವಾಹಕಗಳು, ಅನುಸ್ವಾರ, ವಿಸರ್ಗ ಮುಂತಾದ ಪ್ರಕಾರಗಳನ್ನು ಹೊಂದಿದೆ. ಕ್ರಿ.ಶ. ಒಂಭತ್ತನೆ ಶತಮಾನದಲ್ಲಿ ಶ್ರೀವಿಜಯನು ರಚಿಸಿದ 'ಕವಿರಾಜ ಮಾರ್ಗ' ಎಂಬುದು ಕನ್ನಡದ ಮೊದಲ ಗ್ರಂಥವಾಗಿದೆ. ಶ್ರೀವಿಜಯನೆಂಬ ಕವಿಯು ಅಮೋಘವರ್ಷ ನೃಪತುಂಗನ ಆಶ್ರಯವನ್ನು ಪಡೆದಿದ್ದನು.

1. ಕನ್ನಡ ಎನ್ನುವ ಶಬ್ದವು ಯಾವ ಅರ್ಥವನ್ನು ಕೊಡುತ್ತದೆ ?

5th-std_Term 1_Kannada_Reader_CBSE_KM.indd 17 7/9/2019 3:01:00 PM

2. ಸಾಹಿತ್ಯ ಯಾವುದರ ಆಧಾರದಲ್ಲಿ ರೂಪುಗೊಂಡಿದೆ ?

3. ಕನ್ನಡದ ಮೊಟ್ಟ ಮೊದಲ ಗ್ರಂಥ ಯಾವುದು ?

4. ಕವಿರಾಜ ಮಾರ್ಗ ಎಂಬ ಕೃತಿಯನ್ನು ಯಾವ ಶತಮಾನದಲ್ಲಿ ರಚಿಸಲಾಗಿದೆ.

5. ಅಮೋಘವರ್ಷನ ಆಸ್ಥಾನದಲ್ಲಿದ್ದ ಕವಿ ಯಾರು ?

5 **ಆಂಗ್ಲ ಪದಗಳನ್ನು ಕನ್ನಡಕ್ಕೆ ಬದಲಾಯಿಸಿ ವಾಕ್ಯಗಳನ್ನು ರಚಿಸಿ.**

ಉದಾಹರಣೆ : ಹ್ಯಾಂಡ್‌ರೈಟಿಂಗ್, ಕಾಂಪಿಟೇಷನ್‌ನಲ್ಲಿ ನನಗೆ ಫಸ್ಟ್ ಪ್ರೈಸ್ ಸಿಕ್ಕಿತು.
ಬರವಣಿಗೆಯ ಸ್ಪರ್ಧೆಯಲ್ಲಿ ನನಗೆ ಪ್ರಥಮ ಬಹುಮಾನ ಸಿಕ್ಕಿತು.

1. ಫಸ್ಟ್ ಪಿರಿಯಡ್‌ನಲ್ಲಿ ಕನ್ನಡ ಕ್ಲಾಸ್ ನಡೆಯಿತು.

_____

2. ನಾನು ಡ್ರಾಯಿಂಗ್ ನೋಟ್‌ಬುಕ್‌ನಲ್ಲಿರುವ ಪಿಕ್ಚರ್‌ಗೆ ಕಲರ್ ಹಚ್ಚುವೆನು.

_____

6. **ಸರಿಯಾದ ಪದಗಳನ್ನು ಆಯ್ಕೆ ಮಾಡಿ ಸಾಲುಗಳನ್ನು ಪೂರ್ಣಗೊಳಿಸಿ.**
ನಿಜ, ತರಬೇತಿ, ತಾಳ್ಮೆ, ಧೈರ್ಯ, ಉತ್ಸಾಹ, ಶಿಕ್ಷಣ, ಶಿಸ್ತು, ಪ್ರಯತ್ನ.

_____ ಕಲಿಯುವವನು ವಿದ್ಯಾರ್ಥಿ	_____ ಹೇಳುವವನು ವಿದ್ಯಾರ್ಥಿ
_____ ಯಿಂದ ಇರುವವನು ವಿದ್ಯಾರ್ಥಿ	_____ ಪಡೆಯುವವನು ವಿದ್ಯಾರ್ಥಿ
_____ ದಿಂದ ಇರುವವನು ವಿದ್ಯಾರ್ಥಿ	_____ ಇರುವವನು ವಿದ್ಯಾರ್ಥಿ
_____ ದಿಂದ ಇರುವವನು ವಿದ್ಯಾರ್ಥಿ	_____ ಮಾಡುವವನು ವಿದ್ಯಾರ್ಥಿ



ಭಾಷೆಯೊಡನೆ ಆಟ

1. ವರ್ಣಿಸಿ ಬರೆಯುವ ಪದಗಳನ್ನು ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.



5th-std_Term 1_Kannada_Reader_CBSE_KM.indd 18 7/9/2019 3:01:01 PM

2. ಸೂಚನೆಗಳನ್ನು ನೋಡಿ ಉತ್ತರ ಬರೆಯಿರಿ.

1. ಉರುಳಿಕೊಂಡು ಹೋಗುವ ರಥವನ್ನು ಕಾಪಾಡುವುದು

	ಡೆ		ಲು

2. ಕಬ್ಬಿಣವನ್ನು ಆಕರ್ಷಿಸುವುದು.

ಅ		ಸ್ಕಾಂ	

3. ತಾಯಿಗೆ ಮತ್ತೊಂದು ಹೆಸರು

	ನ	

4. ಕರ್ಮವೀರ

ಕಾ		ರಾ		ರು

5. ಮೇಲೆ ಎಂಬ ಪದಕ್ಕೆ ವಿರುದ್ಧ ಪದ

ಕೆ		ಗೆ

6. ಹಂಚಿ ತಿಂದರೆ

	ಸಿ		ಲ್ಲ

(ಅಯಸ್ಕಾಂತ, ಕಡೆಗೀಲು, ಕಾಮರಾಜರು, ಕೆಳಗೆ, ಹಸಿವಿಲ್ಲ, ಜನನಿ).

7. ಒಂದು ಪದದಿಂದ ಹಲವಾರು ಪದಗಳನ್ನು ರಚಿಸಿ.

ಉದಾ: ಕೃಷ್ಣರಾಜಸಾಗರ – ಕೃಷ್ಣ, ರಾಜ, ಸಾಗರ, ಜಗ, ಗಜ, ರಜ, ರಾಗ, ಸಾರ, ಗರ.

1. ಮಹಾಬಲಿಪುರಂ 2. ರಘುವನಹಳ್ಳಿ 3. ಪರಮಾನಂದ

8. ಪದಗಳನ್ನು ಬಳಸಿ ವಾಕ್ಯಗಳನ್ನು ರಚಿಸಿ.

ಅಖಿಲ, ಓದಿದಳು, ನಾನು, ಪಾಠ, ಮನೆಗೆ, ರಮೇಶ.

ಹೋದಳು, ಓದಿದನು, ಹೊರಟನು, ಬಂದಳು, ಶಾಲೆಗೆ.

1. _____ _____ _____
2. _____ _____ _____
3. _____ _____ _____
4. _____ _____ _____
5. _____ _____ _____

5th-std_Term 1_Kannada_Reader_CBSE_KM.indd 19 7/9/2019 3:01:01 PM

ಭಾಷಾ ಹಿರಿಮೆ

* ನಾನು ಹಲವಾರು ಭಾಷೆಗಳನ್ನು ತಪ್ಪಿಲ್ಲದಂತೆ ಮಾತನಾಡುತ್ತೇನೆ.
* ಮಾತೃಭಾಷೆಯನ್ನು ಗೌರವಿಸುತ್ತೇನೆ.

ತಿಳಿದುಕೊಳ್ಳೋಣ

ಈ ಅನುಕರಣ ಪದಗಳನ್ನು ಗಮನಿಸಿ ಓದಿ

ಣ – ಢಣಢಣ

ನ – ತನತನ

ರ – ತರತರ

ಲ – ಲಬಲಬ

ಳ – ಥಳಥಳ

ಕುವೆಂಪು ಅವರು ರಚಿಸಿರುವ ಯಾವುದಾದರೂ 5 ಪುಸ್ತಕಗಳ ಹೆಸರುಗಳನ್ನು ಪಟ್ಟಿ ಮಾಡಿ.

ಕ್ರಮಸಂಖ್ಯೆ	ಪುಸ್ತಕಗಳ ಹೆಸರು	ಷರಾ

5th-std_Term 1_Kannada_Reader_CBSE_KM.indd 20 7/9/2019 3:01:01 PM

ಕಾರ್ಯ ಯೋಜನೆ



- ಭಾಷೆಗೆ ಸಂಬಂಧಿಸಿದಂತೆ ಸರಳವಾದ ಹಾಡುಗಳನ್ನು ಸಂಗ್ರಹಿಸಿ ಬರೆಯಿರಿ.
- ಹಾಡಿನ ಒಂದೊಂದು ಸಾಲಿಗೂ ಸಂಬಂಧಿಸಿದಂತೆ ಚಿತ್ರಗಳನ್ನು ಸಂಗ್ರಹಿಸಿ ಅಂಟಿಸಿ.
- ನಿಮಗೆ ಇಷ್ಟವಾದ ಕತೆಯೊಂದನ್ನು ಬರೆದು ಅದರಲ್ಲಿ ಬರುವ ಸಾಂಪ್ರದಾಯಿಕ ಪದಗಳಿಗೆ ಗೆರೆ ಹಾಕಿ ತರಗತಿಯಲ್ಲಿ ಹಂಚಿಕೊಳ್ಳಿ.
- ಸಾಹಿತ್ಯ ಸಮ್ಮೇಳನ, ಸಮಾರಂಭಗಳಲ್ಲಿ ವಿಶೇಷ ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಲು ಕಾರ್ಯ ಯೋಜನೆ ತಯಾರಿಸಿ.
- ಪ್ರಪಂಚ ಎಂಬ ಪದಕ್ಕೆ ಸಮನಾರ್ಥ ಪದಗಳನ್ನು ಬರೆಯಿರಿ.
- ನಿಮ್ಮ ಊರಿನಲ್ಲಿ (ಅ) ಶಾಲೆಯ ಗ್ರಂಥಾಲಯದಿಂದ ಸರ್ವಜ್ಞನ ವಚನಗಳು ಮತ್ತು ಸಾಹಿತ್ಯಗಳ ಪುಸ್ತಕಗಳನ್ನು ಹುಡುಕಿ ನಿಮಗೆ ಇಷ್ಟವಾದ ವಿಚಾರಗಳನ್ನು ಬರೆಯಿರಿ.




5th-std_Term 1_Kannada_Reader_CBSE_KM.indd 21 7/9/2019 3:01:01 PM

ಘಟಕ ಎರಡು

ಶಿಕ್ಷಣ

ಪದ್ಯ	:	ಸರ್ವಜ್ಞನ ವಚನಗಳು	–	ಸರ್ವಜ್ಞ
ಗದ್ಯ	:	ವಿದ್ಯೆ ಸಂಪತ್ತೋ? ಧನ ಸಂಪತ್ತೋ?	–	
ಉಪಪಠ್ಯ	:	ಬಡತನದಲ್ಲಿಯೂ ಪ್ರಾಮಾಣಿಕತೆ	–	
ವ್ಯಾಕರಣ	:	ವ್ಯಾಕರಣ	–	



ಕಲಿಕಾ ಉದ್ದೇಶಗಳು

- ಶಿಕ್ಷಣದ ಮಹತ್ವವನ್ನು ತಿಳಿದುಕೊಳ್ಳುವುದು.
- ಜ್ಞಾನಿಗಳ ಗುಣವು ಉನ್ನತ ಮಟ್ಟದ್ದಾಗಿರುತ್ತದೆ ಎಂದು ಅರಿತುಕೊಳ್ಳುವುದು.
- ತಾಳ್ಮೆಯಿದ್ದರೆ ಏನನ್ನಾದರೂ ಸಾಧಿಸಬಹುದು ಎಂದು ಅರಿತುಕೊಳ್ಳುವುದು.
- ನಾಮಪದ, ಕ್ರಿಯಾಪದಗಳ ವ್ಯತ್ಯಾಸಗಳನ್ನು ತಿಳಿದುಕೊಳ್ಳುವುದು.
- ಭಾಷಾ ಪ್ರೌಢಿಮೆಯನ್ನು ಬೆಳೆಸಿಕೊಳ್ಳುವುದು.

5th-std_Term 1_Kannada_Reader_CBSE_KM.indd 22 7/9/2019 3:01:01 PM

ಘಟಕ ಎರಡು

ಸರ್ವಜ್ಞನ ವಚನಗಳು

ಪದ್ಯ

– ಸರ್ವಜ್ಞ

ಜ್ಞಾನದಿಂದಲಿ ಇಹವು । ಜ್ಞಾನದಿಂದಲಿ ಪರವು ।
ಜ್ಞಾನವಿಲ್ಲದಿರೆ ಸಕಲವೂ ತನಗಿದ್ದು ।
ಹಾನಿ ಕಾಣಯ್ಯ ಸರ್ವಜ್ಞ ॥1॥

ಜ್ಞಾನದಿಂ ಮೇಲಿಲ್ಲ । ಶ್ವಾನನಿಂ ಕೀಳಿಲ್ಲ ।
ಬಾನುವಿಂದಧಿಕ ಬೆಳಗಿಲ್ಲ । ಜಗದೊಳಗೆ
ಜ್ಞಾನವೇ ಮಿಗಿಲು ಸರ್ವಜ್ಞ ॥2॥

ವಿದ್ಯೆಯುಳ್ಳವನ ಮುಖವು । ಮುದ್ದು ಬರುವಂತಿಕ್ಕು ।
ವಿದ್ಯೆಯಿಲ್ಲದವನ ಬರಿಮುಖವು । ಹಾಳೂರ
ಹದ್ದಿನಂತಕ್ಕು ಸರ್ವಜ್ಞ ॥3॥

ಎಲ್ಲ ಬಲ್ಲವರಿಲ್ಲ । ಬಲ್ಲವರು ಬಹಳಿಲ್ಲ ।
ಬಲ್ಲಿದರು ಇದ್ದು ಬಲವಿಲ್ಲ । ಸಾಹಿತ್ಯ
ವೆಲ್ಲರಿಗಿಲ್ಲ ಸರ್ವಜ್ಞ ॥4॥

ಸರ್ವಜ್ಞನೆಂಬುವನು । ಗರ್ವದಿಂದಾವನೆ ।
ಸರ್ವರೊಳಗೊಂದೊಂದು ನುಡಿಗಲಿತು । ವಿದ್ಯದಾ
ಪರ್ವತವೆ ಆದ ಸರ್ವಜ್ಞ ॥5॥

5th-std_Term 1_Kannada_Reader_CBSE_KM.indd 23 7/9/2019 3:01:01 PM

ಪದಗಳ ಅರ್ಥ

ಜ್ಞಾನ–ಅರಿವು, ತಿಳುವಳಿಕೆ; ಸಕಲ–ಸರ್ವ, ಎಲ್ಲವೂ; ಹಾನಿ–ನಷ್ಟ, ನಾಶ, ವಿನಾಶ; ಶ್ವಾನ–ನಾಯಿ; ಭಾನು–ಆಕಾಶ, ಗಗನ; ಜಗ–ಪ್ರಪಂಚ, ವಿಶ್ವ; ಹಾಳೂರು–ಪಾಳು ಬಿದ್ದಿರುವ ಊರು; ಬಲ್ಲವ–ತಿಳಿದವನು, ಅರಿವುಳ್ಳವನು; ಗರ್ವ–ಅಹಂಕಾರ, ಸೊಕ್ಕು, ಜಂಭ; ನುಡಿ–ಮಾತು, ಅಕ್ಷರ; ಪರ್ವತ–ಎತ್ತರವಾದ ಪ್ರದೇಶ, ಬೆಟ್ಟ, ಶಿಖರ.

ಕವಿ – ಕಾವ್ಯ ಪರಿಚಯ



ಸರ್ವಜ್ಞ 12ನೇ ಶತಮಾನದ ಬಸವದಿ ಪ್ರಮಥರ ದಿವ್ಯ ಸಂದೇಶವನ್ನು ತನ್ನದೇ ಆದ ಶೈಲಿಯಲ್ಲಿ ಮತ್ತೊಮ್ಮೆ 16, 17ನೇ ಶತಮಾನದಲ್ಲಿ ಪ್ರಚಾರ ಮಾಡಿದ ಮಹಾಪುರುಷ. ಚರ ಜಂಗಮನಾಗಿ, ಜ್ಞಾನಿಯಾಗಿ, ಸರಳವಾಗಿ ವಿರಕ್ತ ಜೀವನ ನಡೆಸುತ್ತ, ಚಿಕಿತ್ಸಕ ಬುದ್ಧಿಯಿಂದ ಪ್ರತಿಯೊಂದು ವಿಷಯವನ್ನೂ ಗ್ರಹಿಸುತ್ತಾ, ಗಮನಿಸುತ್ತಾ ತನ್ನ ಸ್ವಂತಿಕೆಯಿಂ ಚಿಂತನೆ ಮಾಡುತ್ತ ಜನಮನಕ್ಕೆ ನಾಟುವಂತೆ ಎಲ್ಲಾ ಕಾಲಕ್ಕೂ ಅನ್ವಯವಾಗುವಂತಹ ತ್ರಿಪದಿಗಳನ್ನು ರಚಿಸಿ ಜನಮನದಲ್ಲಿ ಚಿರಸ್ಥಾಯಿಯಾಗಿ, ಉಳಿದಿರುವ ಕವಿ. ಈತನನ್ನು 'ತ್ರಿಪದಿಯ ಚಕ್ರವರ್ತಿ' ಎಂದು ಪ್ರಸಿದ್ಧನಾದವನು. ಸರ್ವಜ್ಞನೆಂಬುದು ಈತನ ವಚನಗಳ ಅಂಕಿತನಾಮ. ತಮಿಳು ಸಾಹಿತ್ಯದ ತಿರುವಳ್ಳುವರ್, ತೆಲುಗು ಸಾಹಿತ್ಯದ ವೇಮನರಂತೆ ಸರ್ವಜ್ಞ ಸಂತ ಕವಿ.

ಸರ್ವಜ್ಞನು ತನ್ನ ತ್ರಿಪದಿಗಳಲ್ಲಿ ವಿದ್ಯೆಯ ಮಹತ್ವವನ್ನು ಕುರಿತು ತಿಳಿಸಿದ್ದಾನೆ.

ಕಲಿಕಾ ಫಲ

- ಸರ್ವಜ್ಞನ ತ್ರಿಪದಿಗಳನ್ನು ರಾಗವಾಗಿ ಹಾಡಿರಿ.
- ವಿದ್ಯೆಯ ಮಹತ್ವದ ಬಗ್ಗೆ ಹೇಳಿರುವ ಸರ್ವಜ್ಞನ ಇನ್ನಿತರ ವಚನಗಳನ್ನು ಸಂಗ್ರಹಿಸಿ.
- ವಿದ್ಯೆಯ ಮಹತ್ವವನ್ನು ಹೇಳಿರುವ ಇತರ ವಚನಕಾರರ ವಚನಗಳನ್ನು ಸಂಗ್ರಹಿಸಿರಿ.
- ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಮಹಾನುಭಾವರುಗಳ ಹೆಸರುಗಳನ್ನು ಪಟ್ಟಿ ಮಾಡಿ ಬರೆಯಿರಿ.

ಮೌಲ್ಯಮಾಪನ

ಓದೋಣ! ಚಿಂತಿಸೋಣ! ಬರೆಯೋಣ!

ಅ. ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.

1. ಜ್ಞಾನದಿಂದಲಿ ಇಹವು, ಜ್ಞಾನದಿಂದಲಿ _____

ಅ) ಕರವು ಆ) ಪರವು

ಇ) ನೆರವು ಈ) ವರವು

2. **ಜಗದೊಳಗೆ** ಈ ಪದವನ್ನು ಬಿಡಿಸಿ ಬರೆದಾಗ _____

ಅ) ಜಗ+ದೊಳಗೆ ಆ) ಜಗದ+ಒಳಗೆ

ಇ) ಜಗ+ಒಳಗೆ ಈ) ಜಗದೊ+ಳಗೆ

5th-std_Term 1_Kannada_Reader_CBSE_KM.indd 24 7/9/2019 3:01:02 PM

3 **ವಿದ್ಯೆಯುಳ್ಳವನ** ಮುಖವು _____ ಬರುವಂತಿಕ್ಕು.

ಅ) ನಿದ್ದೆ **ಆ)** ಬಿದ್ದು

ಇ) ಮುದ್ದು **ಈ)** ಎದ್ದು

4 **ಬಲ್ಲಿದ** ಪದದ ಸಮಾನಾರ್ಥಕ ಪದ _____

ಅ) ಬಡವ **ಆ)** ಬಲ್ಲವ

ಇ) ಶ್ರೀಮಂತ **ಈ)** ಬಲಾಢ್ಯ

5 ತ್ರಿಪದಿಗಳ ಚಕ್ರವರ್ತಿ _____

ಅ) ಶ್ರೀಕೃಷ್ಣದೇವರಾಯ **ಆ)** ಬಸವಣ್ಣ

ಇ) ಚನ್ನಬಸವಣ್ಣ **ಈ)** ಸರ್ವಜ್ಞ

ಆ. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

1) ಜ್ಞಾನ : _____

2) ಶ್ವಾನ : _____

3) ಭಾನು : _____

4) ಗರ್ವ : _____

5) ನುಡಿ : _____

ಇ. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ರಚಿಸಿ.

1) ಜ್ಞಾನ : _____

2) ಮೇಲೆ : _____

3) ಇಹ : _____

4) ಬಡವ : _____

5) ಬಲ : _____

ಈ. ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1) ಜ್ಞಾನವಿಲ್ಲದಿದ್ದರೆ ಏನಾಗುವುದೆಂದು ಸರ್ವಜ್ಞ ಹೇಳಿದ್ದಾನೆ ?

2) ಜಗತ್ತಿನಲ್ಲಿ ಯಾವುದು ಮಿಗಿಲು ಎಂದು ಸರ್ವಜ್ಞ ಹೇಳಿದ್ದಾನೆ ?

3) ವಿದ್ಯೆಯುಳ್ಳವನ ಮುಖವು ಹೇಗಿರುತ್ತದೆ ಎಂದು ಸರ್ವಜ್ಞನು ಹೇಳಿದ್ದಾನೆ?

4) ಸಾಹಿತ್ಯ ಯಾರ್ಯಾರಿಗಿಲ್ಲ ಎಂದು ಸರ್ವಜ್ಞನು ಹೇಳಿದ್ದಾನೆ ?

5) ಸರ್ವಜ್ಞನು ವಿದ್ಯೆಯನ್ನು ಹೇಗೆ ಕಲಿತ ?

ಉ. ಚಿಂತನಾಶೀಲ ಪ್ರಶ್ನೆ.

"ವಿದ್ಯಾರ್ಥಿಗೆ ವಿನಯವೇ ಭೂಷಣ" ಎಂಬ ವಿಚಾರವನ್ನು ನಿಮ್ಮ ತರಗತಿಯಲ್ಲಿ ಗೆಳೆಯರೊಡನೆ ಚಿಂತಿಸಿ ಚರ್ಚಿಸಿ?

5th-std_Term 1_Kannada_Reader_CBSE_KM.indd 25 7/9/2019 3:01:02 PM

ಘಟಕ ಎರಡು

ಗದ್ಯ

ವಿದ್ಯೆ ಸಂಪತ್ತೋ? ಧನ ಸಂಪತ್ತೋ?



ಪೂರ್ಣಿಮ ಮತ್ತು ಪೂಜಾ ಇಬ್ಬರೂ ಗೆಳತಿಯರು. ಇಬ್ಬರೂ ಶಾಲೆಯನ್ನು ಮುಗಿಸಿ ಹೊರಗೆ ಬರುವಾಗ ದೂರದರ್ಶನದಲ್ಲಿ ಬರುವ ದೃಶ್ಯಗಳ ಬಗ್ಗೆ ಮಾತನಾಡಿಕೊಂಡು ಬರುತ್ತಿದ್ದರು. ಆಗ ಪೂರ್ಣಿಮ ತನ್ನ ಗೆಳತಿಯೊಂದಿಗೆ ದೂರದರ್ಶನದಲ್ಲಿ ನೆನ್ನೆ 'ವಿದ್ಯೆ ಸಂಪತ್ತೋ, ಧನ ಸಂಪತ್ತೋ?' ಎಂಬ ಶೀರ್ಷಿಕೆಯಲ್ಲಿ ನಡೆಯುತ್ತಿದ್ದ ಚರ್ಚಾಸ್ಪರ್ಧೆಯನ್ನು ನೋಡುತ್ತಿದ್ದಾಗ ವಿದ್ಯುತ್ ಸ್ಥಗಿತವಾಯಿತು. ಆದುದರಿಂದ ತೀರ್ಪುಗಾರರ ತೀರ್ಪನ್ನು ನನ್ನಿಂದ ತಿಳಿದುಕೊಳ್ಳಲು ಸಾಧ್ಯವಾಗಲಿಲ್ಲ. ಇದರಿಂದ ನನಗೆ ಬೇಸರವಾಗಿದೆ ಎಂದು ಹೇಳಿದಳು.

ಪೂಜಾ: ಬೇಸರ ಪಡಬೇಡ ಪೂರ್ಣಿಮಾ! ಆ ಚರ್ಚಾಸ್ಪರ್ಧೆಯನ್ನು ನೋಡಿದವರ ಬಳಿ ಕೇಳಿ ತೀರ್ಪನ್ನು ತಿಳಿದುಕೊಳ್ಳೋಣ.

ಪೂರ್ಣಿಮಾ: ಸರಿ ಪೂಜಾ. ಬಾ ಮಾತನಾಡಿಕೊಂಡೇ ಹೋಗೋಣ...

ಪೂಜಾ: ವಿದ್ಯೆ ಸಂಪತ್ತೋ? ಧನ ಸಂಪತ್ತೋ? ಯಾವುದು ಶ್ರೇಷ್ಠ ಎಂದು ನೀನು ಹೇಳುತ್ತೀಯಾ?

5th-std_Term 1_Kannada_Reader_CBSE_KM.indd 26 7/9/2019 3:01:02 PM

ಪೂರ್ಣಿಮಾ: ನಾನು ವಿದ್ಯಾ ಸಂಪತ್ತೇ ಶ್ರೇಷ್ಠ ಎನ್ನುತ್ತೇನೆ.

ಪೂಜಾ: ಅದು ಹೇಗೆ ಅಷ್ಟೊಂದು ನಿಖರವಾಗಿ ಹೇಳುತ್ತೀಯಾ?

ಪೂರ್ಣಿಮಾ: 'ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆಯೇ ಮೇಲು' ಎಂದು ಸರ್ವಜ್ಞ ಹೇಳಿದ್ದಾನಲ್ಲವೇ! ಅದೇ ರೀತಿ ಎಲ್ಲದಕ್ಕೂ ಶಿಕ್ಷಣ ಮೂಲವೆಂದು ನಮ್ಮ ಹಿರಿಯರು ಹೇಳಿದ್ದಾರೆ.

ಪೂಜಾ: ಶಿಕ್ಷಣದ ಮಹತ್ವವನ್ನು ಹೇಳಿರುವ ತಿರುವಳ್ಳುವರ್ ಅವರೇ, 'ಹಣವಿಲ್ಲದವರಿಗೆ ಈ ಪ್ರಪಂಚವಿಲ್ಲ' ಎಂದೂ ಹೇಳಿದ್ದಾರೆ. ಹಣವಿಲ್ಲದಿದ್ದರೆ ನಮ್ಮ ಅವಶ್ಯಕತೆಗಳನ್ನು ಪೂರ್ಣಗೊಳಿಸಿಕೊಳ್ಳಲು ಸಾಧ್ಯವಿಲ್ಲ. ಶಿಕ್ಷಣ ಪಡೆಯಲೂ ಸಹ ಹಣ ಬೇಕಲ್ಲವೇ?!

ಪೂರ್ಣಿಮಾ: 'ಹಣವಿದ್ದರೆ ಎಲ್ಲವನ್ನೂ ಪಡೆದುಕೊಳ್ಳಬಹುದು' ಎಂಬುದು ನನಗೆ ಗೊತ್ತು. ಜೀವನ ನಡೆಸಲು ಹಣದ ಅವಶ್ಯಕತೆ ಇದೆ. ಆದರೆ ಹಣವಂತರಿಗೆ ತಮ್ಮ ಊರಿನಲ್ಲಿ ಮಾತ್ರ ಗೌರವ. ವಿದ್ಯಾವಂತರಿಗೆ ಹೋದ ಸ್ಥಳದಲ್ಲೆಲ್ಲಾ ಗೌರವ ಸಿಗುತ್ತದೆ.

ಪೂಜಾ: ವಿದ್ಯಾವಂತರು ಐಶ್ವರ್ಯವಂತರ ನೆರವಿನಲ್ಲಿ ತಾನೇ ಜೀವಿಸಬೇಕಾಗಿದೆ.

ಪೂರ್ಣಿಮಾ: ಧನ ಸಂಪತ್ತು ಸ್ಥಿರವಿಲ್ಲದ್ದು. ವಿದ್ಯಾ ಸಂಪತ್ತು ಎಲ್ಲಾ ಸಂಪತ್ತುಗಳಿಗೂ ಶ್ರೇಷ್ಠವಾದದ್ದು. ಎಂದಿಗೂ ಅಳಿಸಲಾರದ್ದು. ಧನ ಸಂಪತ್ತು ಕೊಡುತ್ತಾ ಕೊಡುತ್ತಾ ಮುಗಿಯುಂಥದ್ದು. ಬೇರೆಯವರಿಂದ ಅಪಹರಿಸುವಂಥದ್ದೂ ಆಗಿದೆ...

ಪೂಜಾ: ಸರಿ, 'ಹಣವಿಲ್ಲದವನು ಹೆಣಕ್ಕೆ ಸಮ', 'ಹಣವೆಂದರೆ ಹೆಣವೂ ಬಾಯಿ ಬಿಡುತ್ತದೆ' ಎಂಬ ಗಾದೆಗಳನ್ನು ನಾವು ಕೇಳಿದ್ದೇವೆ. ಕಲಿತವರಿಂದ ಏನು ಮಾಡಲು ಸಾಧ್ಯ?

ಪೂರ್ಣಿಮಾ: ಇಂದಿನ ಶಿಕ್ಷಣ ಅಭಿವೃದ್ಧಿಯಿಂದ ತಾನೇ ಎಲ್ಲಾ ಬೆಳವಣಿಗೆಗಳಿಗೂ ಕಾರಣ. ಆದ್ದರಿಂದ ಎಲ್ಲರೂ ಸೌಕರ್ಯದಿಂದ ಬಾಳಲು ಸಾಧ್ಯವಾಗಿದೆ.

ಪೂಜಾ: ಹೊಸ ಹೊಸ ವಿಷಯಗಳನ್ನು ತಿಳಿದುಕೊಳ್ಳಲು ವಿದ್ಯಾವಂತರಿಗೂ ಹಣದ ಅವಶ್ಯಕತೆ ಇದೆ ಅಲ್ಲವೇ?

5th-std_Term 1_Kannada_Reader_CBSE_KM.indd 27 7/9/2019 3:01:02 PM

ಪೂರ್ಣಿಮಾ: ಸರಿ. ಅದಕ್ಕೆ ಹಣವೇ ಜೀವನಾಡಿ ಎಂದು ಹೇಳುವುದು ತಪ್ಪು. ಶಿಕ್ಷಣ ತಾನೇ ಜ್ಞಾನವನ್ನು ವೃದ್ಧಿಸುವುದು. ಒಳಿತು ಕೆಡುಕುಗಳನ್ನು ತಿಳಿದು ಸನ್ಮಾರ್ಗದಲ್ಲಿ ಜೀವನ ನಡೆಸಲು ಅದು ಮಾರ್ಗದರ್ಶನ ಮಾಡುತ್ತದೆ.

ಪೂಜಾ: ಹಸಿವಾದಾಗ ಎಲ್ಲವನ್ನೂ ಮರೆಯುವಂತೆ ಬಡತನದಿಂದ ಸಾಮಾಜಿಕ ಸಮಸ್ಯೆಗಳು ಉದ್ಭವವಾಗುತ್ತವೆ.

ಪೂರ್ಣಿಮಾ: ಬಡತನದಲ್ಲಿಯೂ ದಿಟ್ಟತನದಿಂದ ಜೀವನ ನಡೆಸುವವರು ವಿದ್ಯಾವಂತರು. ಅವಿದ್ಯಾವಂತರು ತಿಳುವಳಿಕೆ ಇಲ್ಲದೆ ತಪ್ಪುಗಳನ್ನು ಮಾಡುತ್ತಾರೆ.

ಪೂಜಾ: ಅವಿದ್ಯಾವಂತ ಸಿರಿವಂತನಾಗಿದ್ದರೂ ಸಮೃದ್ಧ ಜೀವನಕ್ಕೆ ಶಿಕ್ಷಣದ ಅವಶ್ಯಕತೆ ಇದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸಮೃದ್ಧ ಜೀವನಕ್ಕೆ ಧನ ಸಂಪತ್ತು ಅವಶ್ಯಕ ಎಂಬುದನ್ನು ನೀನೂ ಒಪ್ಪಿಕೊಳ್ಳುತ್ತೀಯಾ?

(ಚರ್ಚೆ ಮುಂದುವರೆಯುತ್ತದೆ. ಮರುದಿನ ಇಬ್ಬರೂ ಕನ್ನಡ ಶಿಕ್ಷಕರನ್ನು ಸಂಧಿಸಿ ತಮ್ಮ ಚರ್ಚೆಯ ಬಗ್ಗೆ ತಿಳಿಸುತ್ತಾರೆ).



5th-std_Term 1_Kannada_Reader_CBSE_KM.indd 28 7/9/2019 3:01:03 PM

ಕನ್ನಡ ಶಿಕ್ಷಕರು: ಜನರಲ್ಲಿ ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸಿ ಜ್ಞಾನವೆಂಬ ಬೆಳಕನ್ನು ಪಡೆಯುವಂತೆ ಮಾಡುವುದೇ ಶಿಕ್ಷಣ. ಶಿಕ್ಷಣವನ್ನು ನಾವು ಚಿಕ್ಕ ವಯಸ್ಸಿನಲ್ಲಿಯೇ ಪಡೆಯುವುದೇ ಸರಿಯಾದ ಮಾರ್ಗ. 'ಬಾಲ್ಯದಲ್ಲಿಯೇ ಶಿಕ್ಷಣ ನೀಡುವುದು ಶಿಲೆಯಲ್ಲಿ ಅಕ್ಷರವನ್ನು ಕೆತ್ತಿದಂತೆ' ಎಂಬ ಗಾದೆಯನ್ನು ನಾವು ಮರೆಯಬಾರದು.

ಪೂರ್ಣಿಮಾ: ಸಾರ್! ಶಿಕ್ಷಣದ ಮಹತ್ವವನ್ನು ತಿಳಿದುಕೊಂಡೆವು. ಆದರೂ ಶಿಕ್ಷಣದೊಂದಿಗೆ ಹಣವೂ ಇರಬೇಕಲ್ಲವೇ?

ಕನ್ನಡ ಶಿಕ್ಷಕರು: ಹೌದು! ಶಿಕ್ಷಣವೂ, ಹಣವೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಹಣವಂತರಿಂದ ಸಾಧ್ಯವಿಲ್ಲದ್ದು ಯಾವುದೂ ಇಲ್ಲ. ಸಿರಿವಂತರು ಜಯಶಾಲಿಗಳೂ ಹೆಮ್ಮೆಗೆ ಪಾತ್ರರು ಇಷ್ಟು ಮಾತ್ರವೇ? ಉನ್ನತ ಶಿಕ್ಷಣವನ್ನು ಪಡೆಯುವ ಅರ್ಹತೆಯನ್ನೂ ಅವರು ಪಡೆದಿರುತ್ತಾರೆ. 'ಇಲ್ಲದವರನ್ನು ಎಲ್ಲರೂ ಟೀಕಿಸುವರು' ಎಂದು ತಿರುವಳ್ಳುವರ್ ಹೇಳಿರುವುದನ್ನು ನಾವು ತಿಳಿದಿದ್ದೇವೆ. ಆದ್ದರಿಂದ ಮೂಲಭೂತ ಜೀವನಕ್ಕೆ ಹಣ ಅತ್ಯವಶ್ಯಕ. ಆದರೆ ನಮ್ಮನ್ನು ಅಭಿವೃದ್ಧಿ ಪಡಿಸುವುದು ಶಿಕ್ಷಣವೇ ಎಂಬುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ.

ಪೂಜಾ, ಪೂರ್ಣಿಮಾ: ನಿಜ ತಾನೇ ಸಾರ್! ಶಿಕ್ಷಣದಿಂದ ಜ್ಞಾನ, ತಿಳುವಳಿಕೆ ಮೂಡುತ್ತದೆ. ಹಣ ನಮ್ಮ ಜೀವನವನ್ನು ಬಲಪಡಿಸುತ್ತದೆ ಎಂಬುದನ್ನು ನಾವು ತಿಳಿದುಕೊಂಡೆವು.

ಕಲಿಕಾ ಫಲ

- ವಿದ್ಯೆ ಸಂಪತ್ತೋ? ಧನ ಸಂಪತ್ತೋ? ಯಾವುದು ಅವಶ್ಯಕ ಎಂದು ನೀವು ಹೇಳುತ್ತೀರಿ? ಏಕೆ ?
- 'ಹಣವಿಲ್ಲದವರಿಗೆ ಪ್ರಪಂಚವಿಲ್ಲ' – ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?
- 'ಶಿಕ್ಷಣದಲ್ಲಿ ಶ್ರೇಷ್ಠರು, ಹಣವಂತರಲ್ಲಿ ಶ್ರೇಷ್ಠರು. ಇವರಲ್ಲಿ ಯಾರಿಂದ ನಮ್ಮ ದೇಶ ಅಭಿವೃದ್ಧಿ ಹೊಂದುತ್ತದೆ' – ತರಗತಿಯಲ್ಲಿ ಚರ್ಚಿಸಿರಿ.

5th-std_Term 1_Kannada_Reader_CBSE_KM.indd 29 7/9/2019 3:01:03 PM

ಮೌಲ್ಯಮಾಪನ

ಓದೋಣ! ಚಿಂತಿಸೋಣ! ಬರೆಯೋಣ!

ಅ. ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ

1. ಚರ್ಚೆ ಪದದ ಅರ್ಥ _____.

   ಅ) ಮಾತನಾಡು　　ಆ) ವಾದ–ವಿವಾದ

   ಇ) ತೀರ್ಮಾನ　　ಈ) ಸಂವೇದನೆ

2. ಶೀರ್ಷಿಕೆಯಡಿಯಲ್ಲಿ ಪದವನ್ನು ಬಿಡಿಸಿ ಬರೆದಾಗ _____

   ಅ) ಶೀರ್ಷಿಕೆ + ಎಡೆಯಲ್ಲಿ　　ಆ) ಶೀರ್ಷಿಕೆ + ಅಡಿಯಲ್ಲಿ

   ಇ) ಶೀರ್ಷಿಕೆ + ಯಡಿಯಲ್ಲಿ　　ಈ) ಶೀರ್ಷಿಕೆಯ + ಅಡಿಯಲ್ಲಿ

3. ಶ್ರೇಷ್ಠ ಪದದ ವಿರುದ್ಧ ಪದ _____.

   ಅ) ಕಡಿಮೆ　　ಆ) ಕೆಳಮಟ್ಟ

   ಇ) ಕನಿಷ್ಠ　　ಈ) ಉತ್ತಮ

4. ಹಣ+ಇಲ್ಲದವನು ಇದನ್ನು ಸೇರಿಸಿ ಬರೆದಾಗ _____.

   ಅ) ಹಣಇಲ್ಲದವನು　　ಆ) ಹಣವಿಲ್ಲದವನು

   ಇ) ಹಣವಂತನು　　ಈ) ಹಣಯಿಲ್ಲದವನು

5. ಸ್ಥಿರ+ಇಲ್ಲದ್ದು ಇದನ್ನು ಸೇರಿಸಿ ಬರೆದಾಗ _____.

   ಅ) ಸ್ಥಿರಯಿಲ್ಲದ್ದು　　ಆ) ಸ್ಥಿರನಿಲ್ಲದ್ದು

   ಇ) ಸ್ಥಿರವಿಲ್ಲದ್ದು　　ಈ) ಸ್ಥಿರವಾದುದು

ಆ. ಕೆಳಗೆ ಕೊಟ್ಟಿರುವ ಪದಗಳನ್ನು ಸೇರಿಸಿ ಬರೆಯಿರಿ.

1. ಸ್ಥಳದಲ್ಲಿ + ಎಲ್ಲಾ　　=　　_____

2. ಗಾದೆ + ಅನ್ನು　　=　　_____

ಇ. ಕೆಳಗೆ ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆಯಿರಿ.

ಅ. ಅಜ್ಞಾನವೆಂಬ　　=　　_____ + _____

ಆ. ಜೀವನವನ್ನು　　=　　_____ + _____

ಈ. ಕೆಳಗಿನ ಸಾಲುಗಳನ್ನು ಪೂರ್ಣಗೊಳಿಸಿ.

(ಶಿಲೆಯಲ್ಲಿ, ಬಾಯಿ, ಜುಟ್ಟಿಗೆ, ಮುಖಕ್ಕೆ)

5th-std_Term 1_Kannada_Reader_CBSE_KM.indd 30　　7/9/2019 3:01:03 PM

1. ಹಣವೆಂದರೆ ಹೆಣವೂ _____ ಬಿಡುತ್ತದೆ.
2. ಬಾಲ್ಯದಲ್ಲಿಯೇ ಶಿಕ್ಷಣವೆಂಬುದು _____ ಅಕ್ಷರವನ್ನು ಕೆತ್ತಿದಂತೆ.
3. ಹೊಟ್ಟೆಗೆ ಹಿಟ್ಟಿಲ್ಲ, _____ ಮಲ್ಲಿಗೆ ಹೂ.

ಊ. ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ಪೂರ್ಣಿಮ ಯಾವ ಸಂಪತ್ತು ಶ್ರೇಷ್ಠವೆಂದು ಹೇಳಿದಳು ?
2. ಯಾರು ಹೋದಲ್ಲೆಲ್ಲ ಗೌರವ ಪಡೆಯುತ್ತಾರೆ. ತಿಳಿಸಿ ?
3. ಪೂಜಾ, 'ವಿದ್ಯಾ ಸಂಪತ್ತೇ ಶ್ರೇಷ್ಠವಾದದ್ದು' ಎಂದು ಹೇಗೆ ವಿವರಿಸಿದ್ದಾಳೆ. ತಿಳಿಸಿ.
4. ಶಿಕ್ಷಣ ಮತ್ತು ಹಣದ ಬಗ್ಗೆ ನಿಮ್ಮ ಅಭಿಪ್ರಾಯವೇನು ?

ಋ. ಚಿಂತನಾಶೀಲ ಪ್ರಶ್ನೆ

1. ವಿದ್ಯಾ ಸಂಪತ್ತು ಅಥವಾ ಧನ ಸಂಪತ್ತು ಇವೆರಡರಲ್ಲಿ ನೀವು ಯಾವುದನ್ನು ಆಯ್ಕೆ ಮಾಡಿಕೊಳ್ಳುವಿರಿ? ಏಕೆ?
2. 'ನಮ್ಮನ್ನು ಅಭಿವೃದ್ಧಿ ಪಡಿಸುವುದು ಶಿಕ್ಷಣ' – ಇದರ ಬಗ್ಗೆ ನಿಮ್ಮ ಅಭಿಪ್ರಾಯವನ್ನು ತಿಳಿಸಿ.

ಬುಟ್ಟಿಯಲ್ಲಿರುವ ಪದಗಳಿಗೆ ಸರಿಯಾದ ವಿರುದ್ಧ ಪದಗಳನ್ನು ತೊಟ್ಟಿಯಿಂದ ಆರಿಸಿ ಬರೆಯಿರಿ.







5th-std_Term 1_Kannada_Reader_CBSE_KM.indd 31 7/9/2019 3:01:03 PM

ಘಟಕ ಎರಡು

ಉಪಪಠ್ಯ

ಬಡತನದಲ್ಲಿಯೂ ಪ್ರಾಮಾಣಿಕತೆ



ಒಂದು ಊರಿನಲ್ಲಿ ಕೆಲವು ವರ್ಷಗಳ ಕಾಲ ಮಳೆಯೇ ಬೀಳದಿದ್ದ ಕಾರಣ ಆ ಊರಿನಲ್ಲಿ ಬರಗಾಲ ಉಂಟಾಯಿತು. ಜನರು ಹಸಿವಿನಿಂದ ಬಳಲುತ್ತಿದ್ದರು. ಆ ಊರಿನ ಜನರು ಒಳ್ಳೆಯ ಮನಸ್ಸುಳ್ಳ ಶ್ರೀಮಂತರೊಬ್ಬರ ಬಳಿಗೆ ಹೋಗಿ ತಮ್ಮ ಮಕ್ಕಳಿಗೆ ಸಹಾಯ ಮಾಡುವಂತೆ ಬೇಡಿಕೊಂಡರು.

ಉದಾರ ಮನಸ್ಸುಳ್ಳ ಆ ಶ್ರೀಮಂತರು, ಈ ಊರಿನಲ್ಲಿರುವ ಯಾವ ಮಕ್ಕಳೂ ಹಸಿವಿನಿಂದ ಬಳಲಬಾರದು ಎಂದು ಯೋಚಿಸಿ, 'ಪ್ರತಿಯೊಬ್ಬರಿಗೂ ಒಂದೊಂದು ಮೋದಕ ಸಿಗುವಂತೆ ಮಾಡುತ್ತೇನೆ. ನನ್ನ ಮನೆಗೆ ಬಂದು ಮೋದಕಗಳನ್ನು ತೆಗೆದುಕೊಂಡು ಹೋಗಿ' ಎಂದು ಹೇಳಿ ತಮ್ಮ ಮನೆಗೆ ಹಿಂದಿರುಗಿದರು. ಅವರು ತಮ್ಮ ಕೆಲಸದ ಆಳುಗಳನ್ನು ಕರೆದು ಆ ಊರಿನಲ್ಲಿರುವ ಮಕ್ಕಳ ಸಂಖ್ಯೆಯನ್ನು ಲೆಕ್ಕ ಹಾಕಿ ಪ್ರತಿಯೊಬ್ಬರಿಗೂ ಒಂದೊಂದು ಮೋದಕ ಸಿಗುವಂತೆ ಮಾಡಿ, ನಾಳೆಯಿಂದ ಮೋದಕಗಳನ್ನು ಗೂಡೆಯಲ್ಲಿ ಸರಿಯಾದ ಸಂಖ್ಯೆಯಲ್ಲಿಟ್ಟುಕೊಂಡು ಮನೆಯ ಹೊರಭಾಗದಲ್ಲಿ ಇರಬೇಕೆಂದು ಹೇಳಿದರು.

ಹಾಗೆಯೇ ಕೆಲಸದ ಆಳುಗಳೂ ಮಾಡಿದರು. ಅಲ್ಲಿ ನೆರೆದಿದ್ದ ಬಾಲಕ ಬಾಲಕಿಯರು ಅವರನ್ನು ಮುತ್ತಿಕೊಂಡರು. ಕೆಲಸಗಾರರು ಗೂಡೆಯನ್ನು ಅವರ ಮುಂದೆ ಇಟ್ಟರು.

ಮೋದಕಗಳನ್ನು ಎತ್ತಿಕೊಳ್ಳಲು ಒಬ್ಬರಿಗೊಬ್ಬರು ನೂಕಾಡಿದರು. ಆದರೆ ಒಬ್ಬ ಬಾಲಕಿ ಮಾತ್ರ ಸುಮ್ಮನಿದ್ದಳು. ಎಲ್ಲರೂ ಮೋದಕಗಳನ್ನು ತೆಗೆದುಕೊಂಡು ಹೋದ ನಂತರ ಉಳಿದ ಚಿಕ್ಕ ಮೋದಕವನ್ನು ತೆಗೆದುಕೊಂಡು ಸಂತೋಷದಿಂದ ಹೋದಳು. ಇದೆಲ್ಲವನ್ನೂ ಶ್ರೀಮಂತ ವ್ಯಕ್ತಿ ಗಮನಿಸುತ್ತಿದ್ದರು.

5th-std_Term 1_Kannada_Reader_CBSE_KM.indd 32 7/9/2019 3:01:04 PM



ಹೀಗೆಯೇ ಹಲವು ದಿನಗಳು ಕಳೆದವು. ಬುಟ್ಟಿಯಲ್ಲಿದ್ದ ಚಿಕ್ಕ ಮೋದಕವನ್ನು ತೆಗೆದುಕೊಂಡು ಬಾಲಕಿಯು ಮನೆಗೆ ಬಂದಳು. ಆ ಮೋದಕವನ್ನು ತಿನ್ನಲು ಅದನ್ನು ಎರಡು ಭಾಗ ಮಾಡಿದಳು. ಆಗ ಆ ಮೋದಕದಿಂದ ಚಿನ್ನದ ನಾಣ್ಯವೊಂದು ಕೆಳಗೆ ಬಿತ್ತು. ಆ ಚಿನ್ನದ ನಾಣ್ಯವನ್ನು ತನ್ನ ತಾಯಿಗೆ ತೋರಿಸಿ, 'ಅಮ್ಮಾ! ಇದು ಮೋದಕದೊಳಗಿತ್ತು. ಇದು ಏನೆಂದು ನೋಡಮ್ಮಾ!' ಎಂದು ತೋರಿಸಿದಳು. ಅದನ್ನು ನೋಡಿದ ತಾಯಿಯು, 'ಇದು ಚಿನ್ನದ ನಾಣ್ಯ'ವೆಂದು ಹೇಳಿ ಇದು ಹೇಗೆ ಮೋದಕದೊಳಗೆ ಬಂತು ಎಂದು ಚಿಂತಿಸಿ, 'ಈ ಮೋದಕವನ್ನು ಯಾರು ಕೊಟ್ಟರೋ ಅವರಿಗೇ ಇದನ್ನು ಹಿಂದಿರುಗಿಸಿ ಬಾ' ಎಂದಳು .



ಆ ಚಿನ್ನದ ನಾಣ್ಯವನ್ನು ತೆಗೆದುಕೊಂಡು ಶ್ರೀಮಂತರ ಮನೆಗೆ ಬಂದಳು ಬಾಲಕಿ. 'ಸ್ವಾಮೀ, ನಾನು ತೆಗೆದುಕೊಂಡು ಹೋದ ಮೋದಕದೊಳಗೆ ಈ ಚಿನ್ನದ ನಾಣ್ಯವಿತ್ತು. ಇದನ್ನು ತೆಗೆದುಕೊಳ್ಳಿ' ಎಂದಳು.

'ಮಗೂ! ನಿನ್ನ ಹೆಸರೇನು?' ಎಂದು ಕೇಳಿದರು ಶ್ರೀಮಂತರು.

'ನನ್ನ ಹೆಸರು ಮಾನಸ' ಎಂದಳು ಬಾಲಕಿ.

'ಮಗೂ! ನಿನ್ನ ತಾಳ್ಮೆಗೂ ಒಳ್ಳೆಯ ಗುಣಕ್ಕೂ ನಾನು ಕೊಟ್ಟ ಬಹುಮಾನವೇ ಈ ಬಂಗಾರದ ನಾಣ್ಯ. ಸಂತೋಷದಿಂದ ಇದನ್ನು ತೆಗೆದುಕೊಂಡು ಹೋಗು' ಎಂದರು ಆ ಶ್ರೀಮಂತ ವ್ಯಕ್ತಿ.

5th-std_Term 1_Kannada_Reader_CBSE_KM.indd 33 7/9/2019 3:01:04 PM



'ಧನ್ಯವಾದಗಳು ಸ್ವಾಮೀ!' ಎಂದು ಹೇಳಿ ಜಿಗಿಜಿಗಿಯುತ್ತಾ ಓಡಿ ಬಂದ ಅವಳು ಅಲ್ಲಿ ನಡೆದುದೆಲ್ಲವನ್ನೂ ತನ್ನ ತಾಯಿಗೆ ಹೇಳಿದಳು. ಅದನ್ನು ಕೇಳಿ ಅವಳ ತಾಯಿಯೂ ಸಂತೋಷ ಪಟ್ಟಳು.

ನೀತಿ : ಪ್ರಾಮಾಣಿಕತೆಗೆ ತಕ್ಕ ಪ್ರತಿಫಲ

ಕಲಿಕಾ ಫಲ

- ನಾವು ಯಾವ ಯಾವ ಒಳ್ಳೆಯ ಗುಣಗಳನ್ನು ಹೊಂದಿರಬೇಕು. ಪಟ್ಟಿ ಮಾಡಿ.
- ಪ್ರಾಮಾಣಿಕತೆಗೆ ಸಂಬಂಧಿಸಿದಂತೆ ಇನ್ನಿತರ ಕಥೆಗಳ ಬಗ್ಗೆ ತರಗತಿಯಲ್ಲಿ ಮಾತನಾಡಿ.

ಮೌಲ್ಯಮಾಪನ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1. ಹಸಿವಿನಿಂದ ಬಳಲುತ್ತಿದ್ದ ಊರಿನ ಮಕ್ಕಳಿಗೆ ಶ್ರೀಮಂತರು ಹೇಗೆ ಸಹಾಯ ಮಾಡುತ್ತಿದ್ದರು ?

2. ಬಾಲಕಿಯ ಪ್ರಾಮಾಣಿಕತೆಗೆ ಸಿಕ್ಕಿದ ಬಹುಮಾನವೇನು?

ಚಿಂತನಾಶೀಲ ಪ್ರಶ್ನೆ

"ಬಡತನದಲ್ಲಿಯೂ ಪ್ರಾಮಾಣಿಕತೆ' ಎಂಬ ಕತೆಯಲ್ಲಿ ಬರುವ ಬಾಲಕಿಯ ಸ್ಥಾನದಲ್ಲಿ ನೀವಿದ್ದರೆ ಏನು ಮಾಡುತ್ತಿದ್ದಿರಿ?

5th-std_Term 1_Kannada_Reader_CBSE_KM.indd 34 7/9/2019 3:01:04 PM

ಘಟಕ ಎರಡು

ವ್ಯಾಕರಣ

ನಾಮಪದ ಮತ್ತು ಕ್ರಿಯಾಪದಗಳು

ನಾಮಪದ : ಒಬ್ಬ ವ್ಯಕ್ತಿಯ ಹೆಸರನ್ನಾಗಲೀ, ಒಂದು ಸ್ಥಳದ ಹೆಸರನ್ನಾಗಲೀ, ಒಂದು ವಸ್ತುವಿನ ಹೆಸರನ್ನಾಗಲೀ, ಒಂದು ಪ್ರಾಣಿಯ ಹೆಸರನ್ನಾಗಲೀ ಸೂಚಿಸುವ ಪದಕ್ಕೆ ನಾಮಪದ ಎನ್ನುತ್ತೇವೆ.

ಉದಾಹರಣೆ : ರಾಜು, ಮೈಸೂರು, ಚೆಂಡು, ಹಸು ಇತ್ಯಾದಿ.

ಕ್ರಿಯಾಪದ : ಕೆಲಸವನ್ನು ಸೂಚಿಸುವ ಪದವನ್ನು ಕ್ರಿಯಾಪದ ಎನ್ನುತ್ತೇವೆ.

ಉದಾಹರಣೆ : ಓಡು, ಈಜು, ಕೊಡು, ಒದೆ, ನೆಗೆ, ಕುಡಿ, ಹಾಡು ಇತ್ಯಾದಿ.

ಕೆಳಗಿನ ಸಾಲುಗಳನ್ನು ಗಮನಿಸಿ

1. 'ರಾಮನು ಪಾಠವನ್ನು ಓದಿದನು' ಈ ಸಾಲಿನಲ್ಲಿ 'ರಾಮನು' 'ಪಾಠ' ಇವು ನಾಮಪದಗಳು. 'ಓದಿದನು' ಕ್ರಿಯಾಪದ.
2. 'ಹಸು ಹುಲ್ಲನ್ನು ತಿಂದಿತು' ಈ ಸಾಲಿನಲ್ಲಿ 'ಹಸು' 'ಹುಲ್ಲು' ಇವು ನಾಮಪದಗಳು. 'ತಿಂದಿತು' ಕ್ರಿಯಾಪದ.

ಕಲಿಕಾ ಫಲ

- ಒಂದು ಪದವನ್ನು ಓದಿದಾಗ ಅದು ನಾಮಪದವೇ ಕ್ರಿಯಾಪದವೇ ಎಂಬುದನ್ನು ಅರಿಯುವುದು.
- ನಾವು ಮಾತನಾಡುವ ಪದಗಳಲ್ಲಿ ಯಾವುದು ನಾಮಪದ, ಯಾವುದು ಕ್ರಿಯಾಪದ ಎಂಬುದನ್ನು ತಿಳಿದುಕೊಳ್ಳಿ.
- ಒಂದು ಪುಟವನ್ನು ಓದಿ ಅದರಲ್ಲಿರುವ ನಾಮಪದ, ಕ್ರಿಯಾಪದಗಳಿಗೆ ಗೆರೆ ಹಾಕಿರಿ.

ಮೌಲ್ಯಮಾಪನ

ಓದೋಣ! ಚಿಂತಿಸೋಣ! ಬರೆಯೋಣ!

ಅ. ಕೆಳಕಂಡವುಗಳಲ್ಲಿ ನಾಮಪದ ಮತ್ತು ಕ್ರಿಯಾಪದಗಳನ್ನು ವರ್ಗೀಕರಿಸಿರಿ.

(ಹಾಡುತ್ತಾಳೆ, ಬರುತ್ತಾನೆ, ಬರೆಯುತ್ತಾನೆ, ಬರೆದಳು, ಕಲೈವಾಣಿ, ತಿಂದನು, ಕೃಷ್ಣ, ಸಲೀಂ, ಜೆನ್ನಿಫರ್, ತೋರಿಸಿದರು, ಓಡಿತು, ಮೊಲ)

ಕ್ರಮಸಂಖ್ಯೆ	ನಾಮಪದ	ಕ್ರಿಯಾಪದ
1	ಕೃಷ್ಣನು	ತಿಂದನು
2		
3		
4		
5		

5th-std_Term 1_Kannada_Reader_CBSE_KM.indd 35 7/9/2019 3:01:04 PM

ಆ. ಕೆಳಗೆ ಕೊಟ್ಟಿರುವ ಸಾಲುಗಳಲ್ಲಿರುವ ನಾಮಪದ ಮತ್ತು ಕ್ರಿಯಾಪದಗಳನ್ನು ಆರಿಸಿ ಬರೆಯಿರಿ.

1. ನವಿಲು ಗರಿ ಬಿಚ್ಚಿ ನರ್ತಿಸಿತು
2. ರಾಣಿ ಪ್ರಬಂಧ ಬರೆದಳು.
3. ರಾಧ ಅಡುಗೆ ಮಾಡಿದಳು.
4. ಕಮಲ ಗಿಡವನ್ನು ನೆಟ್ಟಳು.
5. ರಾಜು ವೇಗವಾಗಿ ಓಡಿದನು.

ನಾಮಪದಗಳು	ಕ್ರಿಯಾಪದಗಳು
1. _____	1. _____
2. _____	2. _____
3. _____	3. _____
4. _____	4. _____
5. _____	5. _____

ಭಾಷಾ ಕೌಶಲ್ಯವನ್ನು ಬೆಳೆಸಿಕೊಳ್ಳೋಣ

ಅ. ಕೇಳುವುದು

- ಸಾಹಿತ್ಯ ಸಮ್ಮೇಳನಗಳು ಮತ್ತು ಹಬ್ಬಗಳಲ್ಲಿ ಭಾಗವಹಿಸಿ ಅಲ್ಲಿನ ವಿಶೇಷ ಮಾತುಗಳನ್ನು ಕೇಳಿ ಸಂತೋಷಿಸಿ.
- ಬೆಳಗಿನ ಪ್ರಾರ್ಥನಾ ಕೂಟದಲ್ಲಿ ಶಿಕ್ಷಕರು ಹೇಳುವ ಹಿತವಚನಗಳನ್ನು ಕೇಳಿ ತರಗತಿಯಲ್ಲಿ ಚರ್ಚಿಸಿ.

ಆ. ಮಾತನಾಡುವುದು

- ನಮ್ಮ ಶಿಕ್ಷಣದ ಅಭಿವೃದ್ಧಿಗೆ ಶ್ರಮಿಸಿದ ಗಣ್ಯರ ಬಗ್ಗೆ ವಿಷಯ ತಿಳಿದುಕೊಂಡು ಬಂದು ಮಾತನಾಡಿ.
- 'ತಮಿಳುನಾಡಿನ ಉತ್ತಮ ಶಿಕ್ಷಣ' ಎಂಬ ಶೀರ್ಷಿಕೆಯಡಿಯಲ್ಲಿ ನಿಮ್ಮ ಸ್ವಂತ ವಾಕ್ಯಗಳಲ್ಲಿ ಮಾತನಾಡಿ.

ಇ. ಓದುವುದು

- ಪಾಠವನ್ನು ಅರ್ಥ ಗರ್ಭಿತವಾಗಿ ಓದಿ.
- ಪುಸ್ತಕ ಸಂಗ್ರಹದಲ್ಲಿ ಇರುವ ಗ್ರಂಥಗಳಿಂದ ಮೌಲ್ಯಗಳನ್ನು ತಿಳಿಸುವ ಯಾವುದಾದರೊಂದು ಕಥೆಯನ್ನು ಓದಿ.

ಈ. ಬರೆಯುವುದು

1 ಪದಗಳನ್ನು ಕೇಳಿ ಬರೆಯಿರಿ :

1. ಬುದ್ಧಿವಂತ
2. ವಿದ್ಯಾವಂತೆ
3. ಏರ್ಪಡಿಸು
4. ಕನ್ನಡ ಶಿಕ್ಷಕರು
5. ಸುಮಾರ್ಗ
6. ಜೀವನಾಡಿ
7. ದೂರದರ್ಶನ
8. ಜ್ಞಾನಿಗಳು
9. ಅಭಿವೃದ್ಧಿ
10. ಬೇರ್ಪಡಿಸು

5th-std_Term 1_Kannada_Reader_CBSE_KM.indd 36 7/9/2019 3:01:04 PM

2 ಈ ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬರೆಯಿರಿ.

1. ಅಭಿವೃದ್ಧಿ _____
2. ದೂರದರ್ಶನ _____
3. ಬೇರ್ಪಡಿಸು _____
4. ಉತ್ತಮ _____

3. ಅದಲು ಬದಲಾಗಿರುವ ಪದಗಳನ್ನು ಸೇರಿಸಿ ವಾಕ್ಯಗಳನ್ನಾಗಿ ಮಾಡಿರಿ.

ಉದಾಹರಣೆ : ಬೆಳೆಸಿ ಕಾಡನ್ನು ನಾಡನ್ನು ಉಳಿಸಿ

ಕಾಡನ್ನು ಬೆಳೆಸಿ, ನಾಡನ್ನು ಉಳಿಸಿ

1. ಕಣ್ಣು ಸಂಸಾರದ ಹೆಣ್ಣು

2. ಬೆನ್ನೆಲುಬು ದೇಶದ ಕೃಷಿಯೇ

3. ಪ್ರತಿಫಲ ಶ್ರಮಕ್ಕೆ ತಕ್ಕ

4. ಮಿಗಿಲಾದುದು ಸಮಯ ಚಿನ್ನಕ್ಕಿಂತಲೂ

5. ಹಳ್ಳ ಗೂಡಿದರೆ ಹನಿಹನಿ

4. ಕೊಟ್ಟಿರುವ ವಚನವನ್ನು ಪೂರ್ತಿಗೊಳಿಸಿ.

ವಿದ್ಯವೇ_____ ಬುದ್ಧಿಯೇ _____
ಅಧ್ವಾನಕಾದವನೆ _____ ಸುಖದಿ ತಾ
ನಿದ್ದುದೇ _____ ಸರ್ವಜ್ಞ
(ನೆಂಟ, ತಾಯ್ತಂದೆ, ರಾಜ್ಯ, ಸೋದರನು)


5th-std_Term 1_Kannada_Reader_CBSE_KM.indd 37 7/9/2019 3:01:04 PM

5. ಬಿಟ್ಟ ಪದಗಳನ್ನು ಸೇರಿಸಿ ಕತೆಗೆ ಸರಿಯಾದ ಶೀರ್ಷಿಕೆಯನ್ನು ಕೊಡಿರಿ.

ನರಿ ಮತ್ತು ಕೊಕ್ಕರೆ ಸ್ನೇಹಿತರಾಗಿದ್ದರು. ಒಂದು ದಿನ ನರಿ ಕೊಕ್ಕರೆಯನ್ನು ಊಟಕ್ಕೆ ಕರೆಯಿತು. ಕೊಕ್ಕರೆ ನರಿಯ ಮನೆಯ ಊಟಕ್ಕೆ ಬಂದಿತು. ನರಿಯು ತಟ್ಟೆಯಲ್ಲಿ ಪಾಯಸವನ್ನು ಕೊಕ್ಕರೆಗೆ ನೀಡಿತು. ಛೇ! ನನಗೆ ಈ ನರಿ ಅವಮಾನದ ಜೊತೆಗೆ ಹಸಿವೆಯನ್ನೂ ಹೆಚ್ಚು ಮಾಡಿತು. ಇದಕ್ಕೆ ತಕ್ಕ ಬುದ್ಧಿ ಕಲಿಸಬೇಕು ಎಂದುಕೊಂಡು ಅದು ಹಿಂದಿರುಗಿತು. ಕೆಲವು ದಿನಗಳ ನಂತರ ಕೊಕ್ಕರೆ ನರಿಯನ್ನು ತನ್ನ ಮನೆಗೆ ಊಟಕ್ಕೆ ಕರೆಯಿತು. ನರಿಯು ಕೊಕ್ಕರೆಯ ಮನೆಗೆ ಊಟಕ್ಕೆ ಬಂದಾಗ ಕೊಕ್ಕರೆಯು ಉದ್ದನೆಯ ಬಾಯಿಯ ಹೂಜಿಯೊಳಗೆ ಪಾಯಸವನ್ನು ಹಾಕಿ ನರಿಗೆ ನೀಡಿತು. ಕೊಕ್ಕರೆಯು ಸಂತೋಷದಿಂದ ಹೂಜಿಯಲ್ಲಿನ ಪಾಯಸವನ್ನು ಕುಡಿಯಿತು.

ಮೀನು ಹಿಡಿಯೋಣ ಬನ್ನಿರಿ

ಕೊಕ್ಕರೆಗೆ ಸರಿಯಾದ ಮೀನುಗಳನ್ನು ಹಿಡಿದು ಬುಟ್ಟಿಯಲ್ಲಿ ಹಾಕಿರಿ. (ಸಮಾನಾರ್ಥಕ ಪದ ಬರೆಯಿರಿ)



1. ಬೆಂಕಿ – _____ _____ _____ _____
2. ಸೂರ್ಯ – _____ _____ _____ _____
3. ಚಂದ್ರ – _____ _____ _____ _____

5th-std_Term 1_Kannada_Reader_CBSE_KM.indd 38 7/9/2019 3:01:05 PM

ವರ್ಣಸೋಣ



ಚಿತ್ರವನ್ನು ನೋಡಿ ಅಲ್ಲಿರುವ ಜೀವರಾಶಿಗಳನ್ನು ವರ್ಣಿಸಿ ಬರೆಯಿರಿ.

ಉದಾ : ಬಣ್ಣ ಬಣ್ಣದ ಹೂಗಳು

.....

ಜಿಗಿದು ಓಡುವ ಮೊಲ

.....

1 .....

2 .....

3 .....

4 .....

5 .....

5th-std_Term 1_Kannada_Reader_CBSE_KM.indd 39 7/9/2019 3:01:07 PM

ಪ್ರಯಾಣದಲ್ಲಿ ಒಂದು ದಿನ

ಚಿತ್ರಗಳಿಗೆ ಸರಿ ಹೊಂದುವ ಪದಗಳನ್ನು ಬರೆದು ಸಾಲುಗಳನ್ನು ಪೂರ್ಣಗೊಳಿಸಿ.

ಅಬ್ದುಲ್ಲಾ ಪಕ್ಕದ ಊರಿನಲ್ಲಿರುವ  ಮನೆಗ ತನ್ನ ಅಮ್ಮನೊಡನೆ  ಹೋದನು.  ನಿಂದ ಪ್ರಯಾಣ ಚೀಟಿಯನ್ನು ಅಮ್ಮ ತೆಗೆದುಕೊಂಡರು. ಅಬ್ದುಲ್ಲಾ  ಕುಳಿತುಕೊಂಡು ಹೊರಭಾಗದ ದೃಶ್ಯಗಳನ್ನು ನೋಡಿಕೊಂಡೇ ಬಂದನು. ಬಸ್ಸು ವೇಗವಾಗಿ ಹೋಗುತ್ತಿತ್ತು.  ಎಲ್ಲವೂ ಹಿಂದೆ ಹೋಗುವ ಹಾಗೆ ಕಾಣುವುದನ್ನು ನೋಡಿ ತನ್ನ ಅಮ್ಮನನ್ನು ಕೇಳಿದನು. ದೂರದಲ್ಲಿ ಕಾಣುವ  ದೃಶ್ಯ  ತಂಪನ್ನು ನೀಡಿತು. ಬೆಟ್ಟದ ಮೇಲಿಂದ ದುಮುಕಿ ಹರಿಯುವ  ಯ ವೇಗವು ಅಬ್ದುಲ್ಲಾನ ಮನಸ್ಸನ್ನು ಮುದಗೊಳಿಸಿತು. ಹಚ್ಚಹಸಿರಿನಿಂದ ಕೂಡಿದ ಗಿಡಗಳ  ನೋಡುವುದಕ್ಕೆ ಸುಂದರವಾಗಿ ಕಾಣುತ್ತಿತ್ತು. ಗದ್ದೆಯ ಮಧ್ಯದಲ್ಲಿ  ನಿಲ್ಲಿಸಿದ್ದರು. ನೋಡುವುದಕ್ಕೆ ತಮಾಷೆಯಾಗಿತ್ತು. ಸ್ವಲ್ಪ ದೂರ ಹೋದ ನಂತರ ಅಧಿಕ ಹೊಗೆಯನ್ನು ಹೊರಹಾಕುವ  ನ್ನು ನೋಡಿದನು. ಅದರ ಬಗ್ಗೆ ತನ್ನ ಅಮ್ಮನ ಬಳಿ ಕೇಳಿ ತಿಳಿದುಕೊಂಡನು ಪಕ್ಕದ ಬೇಲಿಯಲ್ಲಿ  ಮೇಯುತ್ತಿತ್ತು. ಅಬ್ದುಲ್ಲಾ ಇದನ್ನು ನೋಡಿಕೊಂಡು ಹೋಗುವಾಗ ಯಾರೋ ಒಬ್ಬರು ತಾನು ಹೋಗುವ ಬಸ್ಸನ್ನು ವೇಗವಾಗಿ  ನಲ್ಲಿ ಚಲಿಸಿ ಮುಂದೆ ಹೋಗುವುದನ್ನು ನೊಡಿ ಗಾಬರಿಯಾದನು. ತನ್ನ ಅಮ್ಮನಲ್ಲಿ ಅದರ ಬಗ್ಗೆ ಕೇಳಿದಾಗ ಹಾಗೆ ವೇಗವಾಗಿ ಹೋಗುವುದು ತಪ್ಪು ಎಂದು ಹೇಳಿದರು. ಅಷ್ಟರಲ್ಲಿ ತಾವು ಇಳಿಯುವ ಸ್ಥಳ ಬಂದಾಗ ಬಸ್ಸಿನಿಂದ ಇಳಿದು ಸಂತೋಷದಿಂದ ಅಜ್ಜಿಯ  ಗೆ ಹೋದರು.

ಭಾಷಾ ಹಿರಿಮೆ

ಚೆನ್ನಾಗಿ ಓದಿ ಉತ್ತಮ ಪದವಿಯನ್ನು ಪಡೆಯುತ್ತೇನೆ. ಇದು ನನ್ನಿಂದ ಸಾಧ್ಯ. ಕಲಿತ ಶಿಕ್ಷಣದ ನೆರವಿನೊಂದಿಗೆ ನನ್ನ ಸಾಮರ್ಥ್ಯಕ್ಕೆ ತಕ್ಕ ಕೆಲಸವನ್ನು ಗಳಿಸಿ, ಶ್ರಮದಿಂದ ಮುಂದೆ ಬರುವೆ.

ಕಾರ್ಯ ಯೋಜನೆ

1. ಶಾಲೆಯಲ್ಲಿರುವ ಪುಸ್ತಕ ಸಂಗ್ರಹಗಳಿಂದ ಶಿಕ್ಷಣಕ್ಕೆ ಸಂಬಂಧಪಟ್ಟ ನಾಲ್ಕು ಅಭಿಪ್ರಾಯಗಳನ್ನು ಸಂಗ್ರಹಿಸಿ.
2. ವಾರ್ತಾ ಪತ್ರಿಕೆಗಳಲ್ಲಿ ಬರುವ ಶಿಕ್ಷಣಕ್ಕೆ ಸಂಬಂಧಪಟ್ಟ ನಾಲ್ಕು ವಿಷಯಗಳನ್ನು ಸಂಗ್ರಹಿಸಿ.
3. 'ಹೆಮ್ಮೆ' ಪಡುವಂತಹ ಗುಣವಿರುವ ಮೂರು ಕಥೆಗಳನ್ನು ಪಟ್ಟಿ ಮಾಡಿ.



5th-std_Term 1_Kannada_Reader_CBSE_KM.indd 40 7/9/2019 3:01:09 PM

ಅರ್ಜಿ ಬರೆಯುವುದು

ಕುಡಿಯುವ ನೀರಿಗಾಗಿ ಪಂಚಾಯಿತಿ ಅಧ್ಯಕ್ಷರಿಗೆ ಅರ್ಜಿ ಬರೆಯಿರಿ.

ಇಂದ,

ಜೆ.ವಸಿಷ್ಠ
ತಂ/ಹೆ: ಜಯರಾಮ್
ಮ.ಸಂ: 189, ಸಿಂಗಣಪುರಂ
ಪಣಕಹಳ್ಳಿ, ತಾಳವಾಡಿ ತಾಲೂಕು.

ಗೆ,

ಪಂಚಾಯಿತಿ ಅಧ್ಯಕ್ಷರು
ಪಂಚಾಯಿತಿ ಅಧ್ಯಕ್ಷರ ಕಛೇರಿ
ಬೈಯಣಪುರಂ, ತಾಳವಾಡಿ ತಾಲೂಕು.

ಸ್ವಾಮಿ,

ವಿಷಯ :– ಕುಡಿಯುವ ನೀರಿನ ಕೊಳವೆಯನ್ನು ಸರಿಪಡಿಸಿಕೊಡುವ ಬಗ್ಗೆ ಮನವಿ ಪತ್ರ

ನಮ್ಮ ಬೀದಿಯಲ್ಲಿರುವ ಕುಡಿಯುವ ನೀರಿನ ಕೊಳವೆ ಒಡೆದು ಹೋಗಿರುವುದರಿಂದ ಎರಡು ದಿನಗಳಿಂದಲೂ ನೀರು ನಿರುಪಯಕ್ತವಾಗುತ್ತಿದೆ. ಆದ್ದರಿಂದ ನೀರಿಲ್ಲದೆ ನಮ್ಮ ಬೀದಿಯಲ್ಲಿರುವ ಜನರು ಕಷ್ಟಕ್ಕೊಳಗಾಗಿದ್ದಾರೆ. ಆದ್ದರಿಂದ ಒಡೆದು ಹೋಗಿರುವ ಕೊಳವೆಯನ್ನು ಸರಿಪಡಿಸುವಂತೆ ವಿನಯದಿಂದ ಕೇಳಿಕೊಳ್ಳುತ್ತೇವೆ.

ವಂದನೆಗಳು.

ದಿನಾಂಕ : _____ ಇಂತಿ ತಮ್ಮ ವಿಶ್ವಾಸಿ

ಸ್ಥಳ : ಸಿಂಗಣಪುರಂ ಜೆ.ವಸಿಷ್ಠ

5th-std_Term 1_Kannada_Reader_CBSE_KM.indd 41 7/9/2019 3:01:09 PM

ಘಟಕ ಮೂರು

ಪ್ರಕೃತಿ

ಪದ್ಯ	:	ನಮೋ ತಾಯಿ ಭಾರತಿ	–	ಸಾ.ಶಿ.ಮರುಳಯ್ಯ
ಗದ್ಯ	:	ಚಿತ್ರ ಇಲ್ಲಿ! ಗಾದೆ ಎಲ್ಲಿ?		–
ಉಪಪಠ್ಯ	:	ಅಪಾಯದಿಂದ ಪಾರಾದ ಜಿಂಕೆ		–
ವ್ಯಾಕರಣ	:	ವಾಕ್ಯಗಳು		–



ಕಲಿಕಾ ಉದ್ದೇಶಗಳು

- ಪದ್ಯವನ್ನು ತಪ್ಪಿಲ್ಲದೆ ಸರಿಯಾಗಿ ರಾಗಬದ್ಧವಾಗಿ ಹಾಡುವುದು.
- ವಿದ್ಯಾರ್ಥಿಗಳು ದೇಶಭಕ್ತಿಯನ್ನು ತಮ್ಮ ಮನಸ್ಸಿನಲ್ಲಿ ಬೆಳೆಸಿಕೊಳ್ಳುವುದು.
- ಗಾದೆ ಮಾತುಗಳಲ್ಲಿ ಕಂಡು ಬರುವ ಸಂದೇಶವನ್ನು ಅರಿತುಕೊಳ್ಳುವುದು.
- ಕವಿತೆ, ಸಣ್ಣಕತೆ, ಹನಿಗವನಗಳನ್ನು ರಚಿಸುವ ಪ್ರತಿಭೆಯನ್ನು ಬೆಳೆಸಿಕೊಳ್ಳುವುದು.
- ವಿಶೇಷಣ, ಪದಬಂಧ ಮತ್ತು ವದಂತಿಗಳನ್ನು ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದುವರು.

5th-std_Term 1_Kannada_Reader_CBSE_KM.indd 42 7/9/2019 3:01:09 PM

ಘಟಕ ಮೂರು

ನಮೋ ತಾಯಿ ಭಾರತಿ!

ಪದ್ಯ

– ಸಾ.ಶಿ.ಮರುಳಯ್ಯ

ಭರತ ದೇಶ ಭಾಗ್ಯ ಕೋಶ
ನಮ್ಮ ಜನದ ಸಂಪದ
ಕೋಟಿ ಕೋಟಿ ಹೃದಯ ತೀರ್ಥ
ಬೃಂದಾರಕ ಶಿವಪಥ ॥1॥
ಹೈಮಾಚಲದುನ್ನತಿಯಲ್ಲಿ
ಆಧ್ಯಾತ್ಮದ ತೇಜದಲ್ಲಿ
ಸಗ್ಗ ಸಿರಿಯ ಸುರಿವಳಿಲ್ಲಿ
ಆತ್ಮರತೀ ವನಮಾಲೀ ॥2॥
ಸಹಾಧ್ಯಯನ ಸಹಭೋಜನ
ಸಹಪೌರುಷ ಸಹತೋಷ
ವಿಶ್ವಮೈತ್ರಿ ಗಾಯಿತ್ರಿಯು
ಪಠಿಸಿದಂಥ ಧೀರಯುತ ॥3॥
ಭವ್ಯ ಭೂಮಿ ಭಾರತ
ಮಿಗಿಲೆನಗಿದು ಜನಾಕಿಂತ!
ಈ ಮಣ್ಣಿನ ಕಣಕಣವೂ
ನನ್ನ ದೇಹ ನಿಶ್ಚಿತ ॥4॥
ಜನ್ಮಭೂಮಿ ಜನನಿ ದೇವಿ
ಮಣಿವೆನಿದೋ ಸಂತತ
ನಿತ್ಯ ಸತ್ಯೆ ವಿಶ್ವವಂದ್ಯೆ
ನಮೋ ತಾಯಿ ಭಾರತಿ!

5th-std_Term 1_Kannada_Reader_CBSE_KM.indd 43 7/9/2019 3:01:09 PM

ಪದಗಳ ಅರ್ಥ

ತೋಷ–ಆನಂದ; ತಾಯಿ–ಮಾತೆ, ಅಮ್ಮ, ಜನನಿ;

ವಿಶ್ವ–ಪ್ರಪಂಚ, ಜಗತ್ತು; ಸಂತತ–ನಿರಂತರ, ಯಾವಾಗಲೂ;

ಜನನ–ಹುಟ್ಟು;

ಪದ್ಯದ ಭಾವಾರ್ಥ

ಭಾರತ ದೇಶವು ಸಕಲ ಭಾಗ್ಯಗಳನ್ನೂ ಒಳಗೊಂಡಿರುವ ದೇಶ. ಹಿಮಾಲಯ ಪರ್ವತದಲ್ಲಿ ಶಿವನು ನೆಲೆಸಿದ್ದಾನೆ. ಕೋಟ್ಯಾನುಕೋಟಿ ಭಕ್ತರು ಸಾಧುಸಂತರು ಶಿವ ಪಥವನ್ನು ತಲುಪಲು ಅನೇಕ ವರ್ಷಗಳಿಂದ ತಪಸ್ಸು, ವ್ರತವನ್ನು ಕೈಗೊಂಡು ಮುಕ್ತಿ ಪಡೆಯಲು ಹೊರಟಿದ್ದಾರೆ. ಇಲ್ಲಿ ಆಧ್ಯಾತ್ಮ, ತೇಜಸ್ಸು, ಉನ್ನತಿಯನ್ನು ಪಡೆಯಬಹುದು. ವನಮಾಲಿಯು ಎಲ್ಲರ ಆತ್ಮದಲ್ಲಿ ಸಗ್ಗದ ಸಿರಿಯನ್ನು ತುಂಬಿದ್ದಾಳೆ.ಭರತ ಖಂಡದಲ್ಲಿ ಅನೇಕತೆಯಲ್ಲಿ ಏಕತೆ, ಸಹ ಅಧ್ಯಯನ, ಸಹಪಂಕ್ತಿ ಭೋಜನ, ಪೌರುಷ, ಆನಂದ, ವಿಶ್ವಮೈತ್ರಿ, ಗಾಯಿತ್ರಿ ಮಂತ್ರವನ್ನು ಇಲ್ಲಿನ ಜನರು ಪಠಿಸುತ್ತಾರೆ.ಜನ್ಮವನ್ನು ನೀಡುವವಳು ತಾಯಿ. ಸಕಲ ಜೀವರಾಶಿಗಳಿಗೂ ಅನ್ನವನ್ನು ನೀಡುವವಳು ಭೂಮಿತಾಯಿ. ಆದ್ದರಿಂದ ನಿನಗೆ ಕೋಟಿ ವಂದನೆಗಳು. ನನ್ನ ದೇಹವು ಈ ನೆಲಕ್ಕಾಗಿಯೇ ಮುಡಿಪಾಗಲಿ. ಅದುವೇ ಸ್ವರ್ಗವೆಂದು ನಿಶ್ಚಯಿಸಿದ್ದೇನೆ ಎಂದು ಕವಿಯು ಹೇಳುತ್ತಾರೆ.

ಕವಿ ಪರಿಚಯ



ಡಾ.ಸಾ.ಶಿ.ಮರುಳಯ್ಯನವರು ದಿನಾಂಕ 28.01.1931ರಲ್ಲಿ ಜನಿಸಿದರು. ಇವರ ತಂದೆ: ಶ್ರೀ.ಶಿವರುದ್ರಪ್ಪ; ತಾಯಿ: ಶ್ರೀಮತಿ ಸಿದ್ಧಮ್ಮನವರು. ಇವರ ಸ್ವಂತ ಊರು ಸಾಸಲು ಗ್ರಾಮ, ಚಿಕ್ಕನಾಯಕನ ಹಳ್ಳಿ ತಾಲೂಕು, ತುಮಕೂರು ಜಿಲ್ಲೆ. ಇವರು ಪ್ರಾಥಮಿಕ ಶಿಕ್ಷಣವನ್ನು ಸ್ವಗ್ರಾಮದಲ್ಲಿಯೇ ಪಡೆದಿದ್ದಾರೆ. 1955ರಲ್ಲಿ ಬಿ.ಎ., ಆನರ್ಸ್ ಪದವಿಯನ್ನೂ; 1956ರಲ್ಲಿ ಎಂ.ಎ., ಪದವಿಯನ್ನೂ ಮೈಸೂರು ವಿಶ್ವವಿದ್ಯಾಲಯದಿಂದ ಪಡೆದಿದ್ದಾರೆ. ಪಿಎಚ್.ಡಿ., ಪದವಿಯನ್ನು ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಪಡೆದಿದ್ದಾರೆ. 'ಪಾಂಡವ' ಎಂಬುದು ಇವರ ಮೊದಲ ಕವನ ಸಂಕಲನ. ಸಾಹಿತ್ಯದ ವಿವಿಧ ಮಜಲುಗಳಲ್ಲಿ ಇವರು ಕೃತಿ ರಚಿಸಿದ್ದಾರೆ. ಇವರು 4.2.2016ರಂದು ನಿಧನರಾದರು.

ಕಲಿಕಾ ಫಲ

- ಈ ಪದ್ಯವನ್ನು ಸರಿಯಾದ ಉಚ್ಚಾರಣೆಯೊಂದಿಗೆ ಓದಿ ತಿಳಿದುಕೊಳ್ಳುವುದು.
- ಈ ರೀತಿಯ ದೇಶಭಕ್ತಿ ಮತ್ತು ಪ್ರಕೃತಿ ಗೀತೆಗಳನ್ನು ಸಂಗ್ರಹಿಸಿ, ತರಗತಿಯಲ್ಲೂ, ಶಾಲಾ ಕಾರ್ಯಕ್ರಮಗಳಲ್ಲೂ ಹಾಡಿರಿ.
- ಭಾರತ ದೇಶದ ಸಂಸ್ಕೃತಿಯ ಬಗ್ಗೆ ನೀವು ತಿಳಿದುಕೊಂಡಿರುವ ವಿಷಯವನ್ನು ನಿಮ್ಮದೇ ಅಭಿಪ್ರಾಯಗಳಲ್ಲಿ ತಿಳಿಸಿ.
- ಈ ಪದ್ಯವನ್ನು ಕಂಠಪಾಠ ಮಾಡಿ

5th-std_Term 1_Kannada_Reader_CBSE_KM.indd 44 7/9/2019 3:01:09 PM

ಮೌಲ್ಯಮಾಪನ

ಓದೋಣ! ಚಿಂತಿಸೋಣ! ಬರೆಯೋಣ!

ಅ. ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ

1. 'ಬೃಂದ+ಅರಕ' ಈ ಪದವನ್ನು ಸೇರಿಸಿ ಬರೆದಾಗ _____.

   ಅ) ಬೃಂದಾರಕ ಆ) ಬೃಂದಕ
   ಇ) ಬೃಂದಾರೀಕ ಈ) ಬೃಂದಹಾರಕ

2. 'ಸಹಾಧ್ಯಯನ' ಈ ಪದವನ್ನು ಬಿಡಿಸಿ ಬರೆದಾಗ _____

   ಅ) ಸಹ + ಧ್ಯಾಯನ ಆ) ಸಹಾ + ಧ್ಯಯನ
   ಇ) ಸಹಾ + ಅಧ್ಯಯನ ಈ) ಸಹ + ಅಧ್ಯಯನ

3. 'ತೋಷ' ಈ ಪದದ ಅರ್ಥ _____.

   ಅ) ತೋರಿಸು ಆ) ಪಾರಿತೋಷಕ
   ಇ) ಆನಂದ ಈ) ಅನುಬಂಧ

4. 'ಮಾತೆ' ಈ ಪದದ ಅರ್ಥ _____.

   ಅ) ತಾಯಿ ಆ) ಪಿತ
   ಇ) ಭೂಮಿ ಈ) ಮಾತು

ಆ. ಈ ಪದ್ಯದಲ್ಲಿ ಕಂಡು ಬರುವ ಪದಗಳಲ್ಲಿ ಎರಡನೇ ಅಕ್ಷರವು ಒಂದೇ ರೀತಿ ಕಂಡು ಬರುವ ಪದಗಳನ್ನು ಬರೆಯಿರಿ.

ಉದಾ : ಸಹಭೋಜನ–ಸಹಾಧ್ಯಯನ

_____ _____ _____ _____

ಇ. ಈ ಪದ್ಯದಲ್ಲಿ ಕಂಡು ಬರುವ ಪದಗಳಲ್ಲಿ ಮೊದಲನೇ ಅಕ್ಷರವು ಒಂದೇ ರೀತಿಕಂಡು ಬರುವ ಪದಗಳನ್ನು ಬರೆಯಿರಿ.

ಉದಾ : ಜನ್ಮ – ಜನನ

_____ _____ _____ _____

ಈ. ಈ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ಕೋಟಿ ಕೋಟಿ ಜನರ ಹೃದಯದಲ್ಲಿರುವವರು ಯಾರು?
2. ವಿಶ್ವಮೈತ್ರಿ ಹೊಂದಲು ನಾವೇನು ಮಾಡಬೇಕು ?

ಉ. ಚಿಂತನಾಶೀಲ ಪ್ರಶ್ನೆ.

ಭವ್ಯ ಭೂಮಿ ಭಾರತವೆನ್ನಲು ಕಾರಣವೇನು? ತರಗತಿಯಲ್ಲಿ ಈ ವಿಷಯವನ್ನು ಕುರಿತು ಚರ್ಚಿಸಿ.

5th-std_Term 1_Kannada_Reader_CBSE_KM.indd 45 7/9/2019 3:01:09 PM

ಘಟಕ ಮೂರು

ಗದ್ಯ

ಚಿತ್ರ ಇಲ್ಲಿ! ಗಾದೆ ಎಲ್ಲಿ?



ಧಾರಾಪುರ ಎಂಬ ಊರಿನ ಮಾವಿನ ತೋಪಿನಲ್ಲಿ ಒಂದು ಗಿಳಿ ವಾಸವಾಗಿತ್ತು. ಅದರ ಹೆಸರು ರೂಪಿಣಿ. ಆ ಊರಿನಲ್ಲಿ ಆ ಗಿಳಿಯನ್ನು ಅದೇ ಹೆಸರಿನಿಂದ ಎಲ್ಲರೂ ಕರೆಯುತ್ತಿದ್ದರು. ಅದು, ಮಾವಿನಕಾಯಿ ಬಿಡುವ ಕಾಲದಲ್ಲಿ ತೋಪಿಗೆ ಬರುವ ಚಿಕ್ಕ ಮಕ್ಕಳಿಗೆ ಒಂದು ಚಿತ್ರವನ್ನು ಮರದ ಪೊಟರೆಯಿಂದ ತೆಗೆದು ತೋರಿಸುತ್ತಿತ್ತು. ಆ ಚಿತ್ರವನ್ನು ಗಮನಿಸಿ ಮಕ್ಕಳು ಗಾದೆಯೊಂದನ್ನು ಹೇಳಿದರೆ ಅವರಿಗೆ ಒಂದು ಮಾವಿನ ಕಾಯಿಯನ್ನು ಕಿತ್ತು ಎಸೆಯುತ್ತಿತ್ತು. ಹಾಗಾಗಿ ಆ ಗಿಳಿಯನ್ನು 'ಗಾದೆ ಗಿಳಿ' ಎಂದು ಎಲ್ಲರೂ ಪ್ರೀತಿಯಿಂದ ಕರೆಯುತ್ತಿದ್ದರು.ಗಾದೆಗಳು ನಮ್ಮ ಹಿರಿಯರ ಅನುಭವದ ಮೂಲಕ ಹೇಳಿದ ಮಾತುಗಳು. ಹಳೆಯ ಕಾಲದಿಂದಲೂ ರೂಢಿಯಲ್ಲಿ ಬಂದಿರುವ ಮಾತುಗಳು ಇವು. ಗಾದೆಗಳಲ್ಲಿ ಹಲವು ನೀತಿಗಳು ಅಡಕವಾಗಿರುತ್ತವೆ.ಮಾವಿನ ಮರದಲ್ಲಿ ಮಾವಿನ ಕಾಯಿಗಳು ತೂಗಾಡುತ್ತಿದ್ದುದನ್ನು ನೋಡಿ ಚಿಕ್ಕ ಮಕ್ಕಳೆಲ್ಲರೂ ಮಾವಿನ ತೋಪಿಗೆ ಬರಲು ಪ್ರಾರಂಭಿಸಿದರು.

'ರೂಪಿಣಿ, ನಾನು ಪ್ರಭು ಬಂದಿರುವೆನು...'

'ಓಹೋ! ಪ್ರಭುವಾ! ಚೆನ್ನಾಗಿದ್ದೀಯಾ?'

'ನಾನು ಚೆನ್ನಾಗಿದ್ದೇನೆ. ನಿನ್ನನ್ನು ನೋಡಿಕೊಂಡು ಮಾವಿನ ಕಾಯಿಯನ್ನು ತೆಗೆದುಕೊಂಡು ಹೋಗಲು ಬಂದಿರುವೆ'

5th-std_Term 1_Kannada_Reader_CBSE_KM.indd 46 7/9/2019 3:01:10 PM

‘ತುಂಬಾ ಸಂತೋಷ! ನಾನು ತೋರಿಸುವ ಚಿತ್ರಕ್ಕನುಗುಣವಾಗಿ ಗಾದೆಯೊಂದನ್ನು ಹೇಳಿದರೆ ನಾನೇ ನಿನಗೆ ಮಾವಿನ ಕಾಯಿಯನ್ನು ಕಿತ್ತು ಕೊಡುವೆ’ ಎಂದು ಹೇಳಿ ಗಿಳಿಯು ಒಂದು ಚಿತ್ರಪಟವನ್ನು ತೆಗೆದು ತೋರಿಸಿತು.



‘ಈ ಚಿತ್ರದಲ್ಲಿ ತಿಳಿಯುವ ಗಾದೆ ಮಾತು ಯಾವುದು?’

‘ಆನೆ ಬರುವ ಮುನ್ನ ಗಂಟೆಯ ಶಬ್ದ ಕೇಳಿಸಿತು’

‘ಸರಿಯಾಗಿ ಹೇಳಿದೆ. ತೆಗೆದುಕೋ, ನಿನಗೆ ಮಾವಿನ ಕಾಯಿ ಕಿತ್ತುಕೊಡುವೆ...’

‘ಓ... ಓ... ತುಂಬಾ ವಂದನೆಗಳು’



‘ಹೇಗಿರುವೆ ರೂಪಿಣಿ?’

‘ಯಾರು ಬಂದಿರುವುದು?’

‘ನಾನು ವಿನ್ಸೆಂಟ್ ಬಂದಿರುವೆನು ರೂಪಿಣಿ. ನನಗೆ ಮಾವಿನ ಕಾಯಿ ಬೇಕು’

‘ಈ ಚಿತ್ರವನ್ನು ನೋಡಿ ಗಾದೆಯನ್ನು ಹೇಳು. ನಿನಗೆ ಮಾವಿನ ಕಾಯಿ ಕೊಡುವೆನು.’

‘ದೂರದ ಬೆಟ್ಟ ನುಣ್ಣಗೆ’

‘ಬೇಗನೆ ಉತ್ತರ ಹೇಳಿದೆ. ಇದೋ ತೆಗೆದುಕೋ, ಮಾವಿನಕಾಯಿಯನ್ನು...’

‘ನನಗೆ ಮಾವಿನ ಕಾಯಿ ಸಿಕ್ಕಿತು. ಧನ್ಯವಾದಗಳು ರೂಪಿಣಿ.

‘ಕಲಾ ನೀನೇಕೆ ಸುಮ್ಮನೆ ನಿಂತಿರುವೆ? ನಿನಗೆ ಮಾವಿನ ಕಾಯಿ ಬೇಡವೇ?’

‘ನನಗೂ ಮಾವಿನ ಕಾಯಿ ಬೇಕು ರೂಪಿಣಿ’

‘ನೀನು ಈ ಚಿತ್ರವನ್ನು ನೋಡಿ ಈ ಚಿತ್ರಕ್ಕೆ ಸಂಬಂಧಿಸಿದ ಗಾದೆಯನ್ನು ಹೇಳು ನೋಡೋಣ!’



‘ಬಿರುಗಾಳಿ...’

‘ಇಲ್ಲ ಕಲಾ! ಇನ್ನೂ ಸ್ವಲ್ಪ ಯೋಚಿಸಿ ನೋಡು’


‘ಹಾಂ! ಆಷಾಢದಲ್ಲಿ ಹಸಗಲ್ಲೂ ಆಡಿತು’

‘ಸರಿಯಾಗಿ ಹೇಳಿದ್ದೀಯ! ಮಾವಿನಕಾಯಿ ತೆಗೆದುಕೋ...’

‘ನಿಜವಾಗಿಯೂ ನಾನು ಸರಿಯಾಗಿ ಹೇಳಿದೆನಾ! ಧನ್ಯವಾದಗಳು...! ನನ್ನ ಗೆಳೆಯ ಸಾಧಿಕ್ ಕೂಡ

5th-std_Term 1_Kannada_Reader_CBSE_KM.indd 47 7/9/2019 3:01:10 PM

ಬಂದಿದ್ದಾನೆ ರೂಪಿಣಿ’



‘ಹೌದೇ? ಈ ಚಿತ್ರಕ್ಕೆ ಹೊಂದುವ ಗಾದೆ ಮಾತೊಂದನ್ನು ಹೇಳುವಂತೆ ಹೇಳು. ಹೇಳಿದರೆ ಅವನಿಗೂ ಮಾವಿನಕಾಯಿ ಕೊಡುವೆನು’

‘ನನಗೇ ಗೊತ್ತು. ಹೇಳಲೇ... ಬೆಳೆಯುವ ಸಿರಿ ಮೊಳಕೆಯಲ್ಲಿ’

‘ತುಂಬಾ ಸರಿಯಾಗಿದೆ. ನಾನು ನಿನಗೆ ಮಾವಿನಕಾಯಿಯನ್ನು ಹುಡುಕಿ ಕಿತ್ತು ಕೊಡುತ್ತೇನೆ’.

‘ಧನ್ಯವಾದಗಳು ರೂಪಿಣಿ!’

‘ರೂಪಿಣೀ, ನನಗೆ?’

‘ಓ! ಸೀತೇನಾ? ನೀನು ಈ ಚಿತ್ರವನ್ನು ನೋಡಿ ಗಾದೆಯೊಂದನ್ನು ಹೇಳು. ತಕ್ಷಣವೇ ನಿನಗೂ ಮಾವಿನಕಾಯಿ ಕೊಡುತ್ತೇನೆ’.

‘ಗಾಳಿ ಬಂದಾಗ ತೂರಿಕೋ!’



‘ಪರವಾಗಿಲ್ವೇ! ಕಣ್ಮುಚ್ಚಿ ಬಿಡುವಷ್ಟರಲ್ಲಿಯೇ ಸರಿಯಾದ ಉತ್ತರ ಹೇಳಿದ್ದೀಯ! ತೆಗೆದುಕೋ ಈ ಮಾವಿನಕಾಯಿ...!’

‘ಮಾವಿನಕಾಯಿ ಎಂದರೆ ನನಗೆ ತುಂಬಾ ಇಷ್ಟ. ಕೊಡು... ನನಗೆ ಸಂತೋಷವಾಯಿತು ರೂಪಿಣಿ’.

‘ಗಾದೆ ಮಾತಿನ ರೂಪಿಣಿಯೇ, ನನಗೆ ಮಾವಿನ ಕಾಯಿ ಇಲ್ಲವೇ!?’

‘ಯಾರು? ನನ್ನ ಹೆಸರನ್ನು ಕೂಗಿ ಕರೆದವರು. ಸುರೇಶನಾ...? ಈ ಚಿತ್ರಕ್ಕೆ ಸಂಬಂಧಿಸಿದ ಗಾದೆಯನ್ನು ಹೇಳು. ನಿನಗೂ ಮಾವಿನಕಾಯಿ ಕೊಡುವೆನು’.

‘ಅಗಲವಾಗಿ ಉಳುವುದಕ್ಕಿಂತ ಆಳವಾಗಿ ಉಳುವುದೇ ಮೇಲು’.



‘ತುಂಬಾ ಸಂತೋಷ. ಸರಿಯಾದ ಗಾದೆ. ತೆಗೆದುಕೋ ಮಾವಿನಕಾಯಿ. ಧನ್ಯವಾದಗಳು ರೂಪಿಣೀ!’

‘ಚಿಕ್ಕ ಮಕ್ಕಳಾದ ನಾವು ಇನ್ನು ಹೆಚ್ಚು ಗಾದೆಗಳನ್ನು ತಿಳಿದುಕೊಂಡು ಮತ್ತೆ ನಾಳೆ ಬರುವೆವು’ ಎಂದು ಹೇಳಿ ಸಂತೋಷದಿಂದ ಗಾದೆ ಮಾತಿನ ರೂಪಿಣಿಗೆ ಧನ್ಯವಾದಗಳನ್ನು ತಿಳಿಸಿ ಎಲ್ಲರೂ ಮನೆಗೆ ಹೊರಟರು.

5th-std_Term 1_Kannada_Reader_CBSE_KM.indd 48 7/9/2019 3:01:11 PM

ಕಲಿಕಾ ಫಲ

- ನಿಮ್ಮ ಮನೆಯಲ್ಲಿ ಪೋಷಕರು, ಅಜ್ಜಿ–ಅಜ್ಜ ಮಾತನಾಡುವಾಗ ಬಳಸುವ ಗಾದೆ ಮಾತುಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಚರ್ಚಿಸಿರಿ.
- ಪಠ್ಯಪುಸ್ತಕದಲ್ಲಿ ಬಳಕೆಯಾಗಿರುವ ಗಾದೆ ಮಾತುಗಳನ್ನು ಸಂಗ್ರಹಿಸಿ, ಅವುಗಳನ್ನು ವಿಸ್ತರಿಸಿ ನಿಮ್ಮ ಸ್ವಂತ ಮಾತುಗಳಲ್ಲಿ ಬರೆಯಿರಿ.
- ಈ ಪಾಠದಲ್ಲಿ ಬಳಕೆಯಾಗಿರುವ ಒಗಟುಗಳನ್ನು ಸಂಗ್ರಹಿಸಿ ಅವುಗಳನ್ನು ಬಿಡಿಸಿರಿ.
- ನಿಮ್ಮ ಶಾಲೆಯ ಗ್ರಂಥಾಲಯದಲ್ಲಿ ಗಾದೆ ಮತ್ತು ಒಗಟುಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಓದಿ ತರಗತಿಯಲ್ಲಿ ಕತೆಯ ರೂಪದಲ್ಲಿ ತಿಳಿಸಿ.

ಮೌಲ್ಯಮಾಪನ

ಓದೋಣ! ಚಿಂತಿಸೋಣ! ಬರೆಯೋಣ!

ಅ. ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ

1. ಮರವೊಂದು ಈ ಪದವನ್ನು ಬಿಡಿಸಿ ಬರೆದಾಗ _____

ಅ) ಮರವು+ಒಂದು ಆ) ಮರ+ಒಂದು.
ಇ) ಮರ+ವೊಂದು ಈ) ಮರವನ್ನು+ಒಂದು

2. ಮೊಳಕೆಯಲ್ಲಿ ಈ ಪದವನ್ನು ಬಿಡಿಸಿ ಬರೆದಾಗ _____.

ಅ) ಮೊಳ + ಅಲ್ಲಿ ಆ) ಮೊಳಕೆ + ಯಲ್ಲಿ
ಇ) ಮೊಳಕೆ+ ಅಲ್ಲಿ ಈ) ಮೊಳಕೆಯ + ಅಲ್ಲಿ

3. ಗಾದೆ+ಅನ್ನು ಈ ಪದವನ್ನು ಸೇರಿಸಿ ಬರೆದಾಗ _____.

ಅ) ಗಾದೆಅನ್ನು ಆ) ಗಾದೆಯವನ್ನು
ಇ) ಗಾದಿಯನ್ನು ಈ) ಗಾದೆಯನ್ನು

4. ಕಣ್ಣು+ಮುಚ್ಚಿ ಈ ಪದವನ್ನು ಸೇರಿಸಿ ಬರೆದಾಗ _____.

ಅ) ಕಣ್ಣನ್ನು ಮುಚ್ಚಿ ಆ) ಕಣ್ಣುಮುಚ್ಚಿ
ಇ) ಕಣ್ಮುಚ್ಚಿ ಈ) ಕಣ್ಣಾಮುಚ್ಚಿ

5. ಗ್ರಂಥ+ಆಲಯ ಈ ಪದವನ್ನು ಸೇರಿಸಿ ಬರೆದಾಗ _____

ಅ) ಗ್ರಂಥಲಾಯ ಆ) ಗ್ರಂಥಾಯಾಲ
ಇ) ಗ್ರಾಂಥಾಲಯ ಈ) ಗ್ರಂಥಾಲಯ

ಆ. ಈ ಪದಗಳನ್ನು ಬಿಡಿಸಿ ಬರೆಯಿರಿ.

ಅ) ಕಾಯಿಯನ್ನು – ---------- + ----------
ಆ) ಹಾಸುಗಲ್ಲು – ---------- + ----------

5th-std_Term 1_Kannada_Reader_CBSE_KM.indd 49 7/9/2019 3:01:11 PM

ಇ. ಸರಿಯಾದ ಪದವನ್ನು ಆರಿಸಿ ಗಾದೆಯನ್ನು ಪೂರ್ತಿ ಮಾಡಿ

ವಿದ್ಯೆ ಕಾಲ ಸಂಕಟ ಆಸೆ ಪೈರು

1. ಬೆಳೆಯು _____ ಮೊಳಕೆಯಲ್ಲಿ.
2. ಅತಿ _____ ಗತಿಕೇಡು.
3. ಅತ್ತೆಗೊಂದು _____ ಸೊಸೆಗೊಂದು ಕಾಲ.
4. ಬೆಕ್ಕಿಗೆ ಚೆಲ್ಲಾಟ, ಇಲಿಗೆ ಪ್ರಾಣ _____
5. ಅಲ್ಪ _____ ಮಹಾಗರ್ವಿ.

ಈ. ಕೊಟ್ಟಿರುವ ಪದಗಳನ್ನು ಸರಿಯಾಗಿ ಹೊಂದಿಸಿ ಗಾದೆಗಳನ್ನು ರಚಿಸಿ

1. ಗಾಳಿ ತೂರಿಕೊ ಬಂದಾಗ _____
2. ನಿಮಿಷ ದೊಣ್ಣೆಗೆ ವರುಷ ಕುಂಬಾರನಿಗೆ _____
3. ತನಗೆ ಪರರಿಗೆ ಬಚ್ಚಿಟ್ಟಿದ್ದು ಕೊಟ್ಟಿದ್ದು _____
4. ಉಪ್ಪಿಗಿಂತ ತಾಯಿಗಿಂತ ರುಚಿಯಿಲ್ಲ ಬಂಧುವಿಲ್ಲ _____
5. ಕಪ್ಪೇ ಹಾಲು ಆಕಳು ಕಪ್ಪಾದರೆ _____

ಉ. ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ಗಾದೆ ಎಂದರೇನು ?
2. 'ಗಿಳಿ'ಯನ್ನು 'ಗಾದೆಯ ಗಿಳಿ' ಎಂದು ಏಕೆ ಕರೆಯುತ್ತಿದ್ದರು ?
3. ಈ ಪಾಠದಲ್ಲಿ ಬಂದಿರುವ ಗಾದೆಗಳನ್ನು ಪಟ್ಟಿ ಮಾಡಿ.

ಊ. ಚಿಂತನಾಶೀಲ ಪ್ರಶ್ನೆ


ಗಾದೆಯ ಗಿಳಿಯಂತೆ ನೀವೂ ಗಾದೆಯನ್ನು ಹೇಳುವುದಾದರೆ, ನೀವು ಹೇಳುವ ಗಾದೆಗೆ ಸಂಬಂಧಿಸಿದ ಚಿತ್ರವನ್ನು ನಿಮ್ಮ ತರಗತಿಯಲ್ಲಿ ಚಿತ್ರಿಸಿ ಪ್ರದರ್ಶಿಸಿ.

5th-std_Term 1_Kannada_Reader_CBSE_KM.indd 50 7/9/2019 3:01:11 PM

ಘಟಕ ಮೂರು

ಅಪಾಯದಿಂದ ಪಾರಾದ ಜಿಂಕೆ

ಉಪಪಠ್ಯ



ಕಾ... ಕಾ... ಎಂದು ಕಾಗೆಯು ತನ್ನ ಸ್ನೇಹಿತನಾದ ಜಿಂಕೆಯನ್ನು ಕೂಗಿತು. ಇದೋ ಬಂದೆ ಎಂದು ಜಿಂಕೆಯು ನೆಗೆಯುತ್ತಾ ಕಾಗೆಯ ಬಳಿ ಓಡಿ ಬಂದಿತು.

ಕಾಗೆ : ಗೆಳೆಯಾ! ಚೆನ್ನಾಗಿದ್ದೀಯಾ?

ಜಿಂಕೆ : ಹೇಗೋ ಇದ್ದೀನಿ ಗೆಳೆಯಾ!

ಕಾಗೆ : ಯಾಕೆ ನಿನ್ನ ಮಾತಿನಲ್ಲಿ ನಿರುತ್ಸಾಹವಿದೆಯಲ್ಲ, ಯಾಕೆ ಗೆಳೆಯಾ ಚಿಂತೆಯಲ್ಲಿರುವೆ?

ಜಿಂಕೆ : ನನಗೆ ತುಂಬಾ ಹಸಿವಾಗಿದೆ ಮಿತ್ರ!

ಕಾಗೆ : ನನ್ನೊಡನೆ ಬಾ! ನಿನ್ನನ್ನು ಹುಲ್ಲುಗಾವಲು ಇರುವ ಪ್ರದೇಶಕ್ಕೆ ಕರೆದುಕೊಂಡು ಹೋಗುತ್ತೇನೆ. ಅಲ್ಲಿ ನೀನು ಹೊಟ್ಟೆ ತುಂಬುವಷ್ಟು ಹುಲ್ಲನ್ನು ಮೇಯಬಹುದು.

ಜಿಂಕೆ : ನೀನು ನನ್ನ ಮೇಲೆ ತುಂಬಾ ಅಕ್ಕರೆಯನ್ನು ಇಟ್ಟಿರುವೆ. ಪ್ರತಿದಿನವೂ ನನಗಾಗಿ ಅಲೆದಾಡಿ ಹುಲ್ಲುಗಾವಲು ಇರುವ ಪ್ರದೇಶವನ್ನು ತಿಳಿದು ಬಂದು ನನಗೆ ಸಹಾಯ ಮಾಡುವೆ. ಧನ್ಯವಾದಗಳು ಗೆಳೆಯಾ!

ಕಾಗೆ : ನೀನು ನನಗೆ ಧನ್ಯವಾದವನ್ನು ಹೇಳುವ ಅವಶ್ಯಕತೆಯಿಲ್ಲ. ನನಗೆ ಅಗತ್ಯವಿರುವಾಗ ನಿನ್ನ ಮೇಲೆ ಕುಳಿತು ಪ್ರಯಾಣ ಮಾಡುವೆ. ನಾವಿಬ್ಬರೂ ಬಾಲ್ಯ ಸ್ನೇಹಿತರು. ಒಬ್ಬರಿಗೊಬ್ಬರು ಜೊತೆಯಾಗಿರುವುದು ಹೊಸದೇನಲ್ಲ.

5th-std_Term 1_Kannada_Reader_CBSE_KM.indd 51 7/9/2019 3:01:11 PM


ಜಿಂಕೆ :ಸರಿ ಗೆಳೆಯಾ! ಮಾತನಾಡಿಕೊಂಡೇ ಬಹುದೂರ ಬಂದೆವು. ಇಲ್ಲಿಯೇ ಊಟವನ್ನು ಮಾಡಿಕೊಂಡು ನಮ್ಮ ಸ್ಥಳಕ್ಕೆ ಹೋಗೋಣ.

(ಕಾಗೆ ಮತ್ತು ಜಿಂಕೆ ಉತ್ತಮ ಗೆಳೆಯರು. ಅವರು ಬಹಳ ದಿನಗಳಿಂದಲೂ ಜೊತೆಯಾಗಿರುವುದನ್ನು ನರಿಯೊಂದು ಗಮನಿಸಿತು. ಅದು ತನ್ನ ಮನಸ್ಸಿನಲ್ಲಿಯೇ ದಷ್ಟಪುಷ್ಟವಾಗಿರುವ ಈ ಜಿಂಕೆಯನ್ನು ಹೇಗಾದರೂ ಮಾಡಿ ಬೇಟೆಯಾಡಿ ಕೊಂದು ತಿನ್ನಬೇಕು ಎಂದು ಯೋಚಿಸಿತು. ಅದಕ್ಕಾಗಿ ಅವರಿಬ್ಬರನ್ನೂ ಬೇರೆಬೇರೆಯಾಗಿ ಮಾಡಲು ಪ್ರಯತ್ನಿಸಿತು. ಆಗ ತಾನೇ ಜಿಂಕೆಯನ್ನು ಕೊಲ್ಲಬಹುದೆಂದು ಯೋಚಿಸಿ ಅವರ ಸಮೀಪಕ್ಕೆ ಬಂತು).

ನರಿ : ಗೆಳೆಯರೇ! ಯಾವಾಗಲೂ ನೀವಿಬ್ಬರೂ ಜೊತೆಯಲ್ಲೇ ಇರುತ್ತೀರಿ. ನನ್ನನ್ನೂ ನಿಮ್ಮ ಗೆಳೆಯನನ್ನಾಗಿ ಸೇರಿಸಿಕೊಳ್ಳುತ್ತೀರಾ?

ಜಿಂಕೆ : ಅದಕ್ಕೇನು... ನೀನೂ ಇಂದಿನಿಂದ ನಮ್ಮ ಗೆಳೆಯನಾಗಿ ನಮ್ಮ ಜೊತೆಯಲ್ಲಿ ಇರಬಹುದು.

ನರಿ : ಧನ್ಯವಾದಗಳು.



ಕಾಗೆ : ಸರಿ... ಸಮಯವಾಯಿತು. ನಮ್ಮ ವಾಸಸ್ಥಳಕ್ಕೆ ಹೋಗೋಣ.

(ನರಿ ತಾನಿರುವ ಸ್ಥಳಕ್ಕೆ ಹೊರಟಿತು)

ಕಾಗೆ : ಗೆಳೆಯಾ! ಯಾರನ್ನೂ ಬೇಗ ನಂಬಬೇಡ! ಅದು ನಮಗೆ ಆಪತ್ತು.

ಜಿಂಕೆ : ಅಂತಹ ಆಪತ್ತು ಏನು ಬಂದಿದೆ ? ನರಿಯನ್ನು ನೋಡಿದರೆ ಒಳ್ಳೆಯ ಗುಣವಂತನಾಗಿ ಕಾಣುತ್ತಾನೆ!

ಕಾಗೆ : ಕಣ್ಣಲ್ಲಿ ಕಾಣುವುದು ಸುಳ್ಳು. ಕಿವಿಯಲ್ಲಿ ಕೇಳುವುದು ಸುಳ್ಳು. ದೀರ್ಘವಾಗಿ ಯೋಚಿಸುವುದು ಸತ್ಯ.

ಜಿಂಕೆ : ಅಯ್ಯಾ, ನಿನ್ನ ತತ್ವ ಸಾಕು. ನಡೆ ಮನೆಗೆ... ನಾನು ನನ್ನ ವಾಸಸ್ಥಳಕ್ಕೆ ಹೋಗುವೆ. ಮತ್ತೆ ನಾಳೆ ಭೇಟಿಯಾಗೋಣ.

(ಮರುದಿನ ಬೆಳಿಗ್ಗೆ ನರಿ ಜಿಂಕೆಯನ್ನು ಭೇಟಿ ಮಾಡಿತು).

ನರಿ : ಗೆಳೆಯಾ, ಕ್ಷೇಮವೇ?

ಜಿಂಕೆ : ಅಯ್ಯಯ್ಯೋ! ನರೀನಾ? ಏಕೆ ನೀನು ನನ್ನನ್ನು ಬೆಳಿಗ್ಗೆಯೇ ಹುಡುಕಿಕೊಂಡು ಬಂದಿರುವೆ.

ನರಿ : ಸ್ನೇಹಿತನನ್ನು ಭೇಟಿ ಮಾಡಲು ಸಮಯವೇಕೆ? ನಿನ್ನನ್ನು ನೋಡಿದರೆ ನನಗೆ ಪಶ್ಚಾತ್ತಾಪವಾಗುತ್ತದೆ.

ಜಿಂಕೆ : ನನಗೇನಾಗಿದೆ? ನೋಡು, ನನ್ನನ್ನು ನೋಡಿ ಏಕೆ ಪಶ್ಚಾತ್ತಾಪ ಪಡುತ್ತೀಯೆ?

ನರಿ : ಆಹಾರವಿಲ್ಲದೆ ಸೊರಗಿರುವ ಹಾಗೆ ಕಾಣುತ್ತೀಯ! ಸರಿಯಾದ ಆಹಾರವು ದೊರಕದೆ ದಷ್ಟಪುಷ್ಟವಾಗಿ ಇರಬೇಕಾಗಿದ್ದ ನೀನು ಹಸಿವಿನಿಂದ ನೊಂದಿರುವ ಹಾಗಿರುವೆಯಲ್ಲ?

ಜಿಂಕೆ : ಎಲ್ಲಾ ಪ್ರಾಣಿಗಳಿಗೂ ಇಲ್ಲಿ ಇದೇ ತರಹ ಆಹಾರದ ಕೊರತೆಯಿದೆ. ಎಲ್ಲಿ ನೋಡಿದರೂ ಭೂಮಿ ಬರಡು ಭೂಮಿಯಾಗಿ ಬದಲಾಗಿದೆ.

5th-std_Term 1_Kannada_Reader_CBSE_KM.indd 52 7/9/2019 3:01:11 PM

ನರಿ : ಇನ್ನಿತರ ಪ್ರಾಣಿಗಳ ಬಗ್ಗೆ ನಮಗ್ಯಾಕೆ ಚಿಂತೆ? ನನಗೆ ಗೊತ್ತಿರುವ ಒಂದು ಸ್ಥಳವಿದೆ. ಅಲ್ಲಿ ನಿನಗೆ ಚೆನ್ನಾಗಿ ತಿನ್ನಲು ಹುಲ್ಲುಗಾವಲು ಇದೆ. ನನ್ನ ಜೊತೆ ಬಾ... ನಿನಗೆ ಮಾತ್ರ ಆ ಸ್ಥಳವನ್ನು ತೋರಿಸುವೆ.

ಜಿಂಕೆ : ನನ್ನ ಗೆಳೆಯನಾದ ಕಾಗೆಯೂ ಬರಲಿ.

ನರಿ : ಕಾಗೆಯನ್ನು ಮತ್ತೊಂದು ದಿನ ಜೊತೆಯಲ್ಲಿ ಕರೆದುಕೊಂಡು ಹೋಗೋಣ. ಇಂದು ನೀನು ಮಾತ್ರ ನನ್ನ ಜೊತೆಯಲ್ಲಿ ಬಾ.

ಜಿಂಕೆ : ನರಿಯೇ, ನೀನು ಇಷ್ಟೊಂದು ಹೇಳುತ್ತಿದ್ದೀಯ. ಆದ್ದರಿಂದ ನಾನು ಬರುವೆ.



(ನರಿಯು ಜಿಂಕೆಯನ್ನು ರೈತನೊಬ್ಬನ ಬೆಳೆಯಿರುವ ಜಮೀನಿಗೆ ಕರೆದುಕೊಂಡು ಹೋಗಿ ಬಿಟ್ಟಿತು. ಜಿಂಕೆಯು ಅಲ್ಲಿ ಚೆನ್ನಾಗಿ ತಿಂದು ತನ್ನ ಹಸಿವನ್ನು ನೀಗಿಸಿಕೊಂಡು ತನ್ನ ವಾಸಸ್ಥಳಕ್ಕೆ ಹಿಂದಿರುಗಿತು. ಈ ವಿಚಾರ ಕಾಗೆಗೆ ತಿಳಿಯದಂತೆ ನರಿ ನೋಡಿಕೊಂಡಿತು).

ರೈತನು ತನ್ನ ಫಸಲನ್ನು ನಾಶ ಮಾಡುವ ಪ್ರಾಣಿಯನ್ನು ಬಲೆ ಹಾಕಿ ಹಿಡಿಯಲು ತೀರ್ಮಾನಿಸಿದನು. ಅದಕ್ಕಾಗಿ ಸಂಜೆಯ ಸಮಯ ಬಲೆಯೊಂದನ್ನು ಹರಡಿ ಮನೆಗೆ ಹೋದನು.

ಮರುದಿನ ಎಂದಿನಂತೆ ಜಿಂಕೆಯು ನರಿಯೊಡನೆ ಜಮೀನಿಗೆ ಹೋಗಿ ಬೆಳೆಯನ್ನು ತಿನ್ನುತ್ತಿತ್ತು. ಆಗ ಜಿಂಕೆಯು ಬಲೆಯಲ್ಲಿ ಸಿಕ್ಕಿಕೊಂಡಿತು. ಇದನ್ನು ತಿಳಿದ ನರಿಯು ತಾನು ಎದುರು ನೋಡುತ್ತಿದ್ದ ಸಂದರ್ಭ ಬಂತೆಂದು ತಿಳಿದು ಸಂತೋಷ ಪಟ್ಟಿತು. ಜಿಂಕೆಯು ಹೀಗೆ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡು ನರಳುವುದನ್ನು ನರಿಯು ಪಕ್ಕದಲ್ಲಿರುವ ಕಬ್ಬಿನ ತೋಟದಲ್ಲಿ ಅಡಗಿಕೊಂಡು ಗಮನಿಸುತ್ತಿತ್ತು...)

ಕಾಗೆ :ಗೆಳೆಯಾ.ಗೆಳೆಯಾ..ನೀನು ಎಲ್ಲಿರುವೆ?

(ಕಾಗೆಯು ಜಿಂಕೆಯನ್ನು ಹುಡುಕಿಕೊಂಡು ಬರುವುದು)

ನನ್ನ ಪ್ರಿಯ ಗೆಳೆಯನೇ! ನೀನು ಎಲ್ಲಿರುವೆ...? ಅಯ್ಯೋ, ಇದೇನು ಕೂಗಲೂ ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ ಹೀಗೆ ಬಲೆಯಲ್ಲಿ ಸಿಕ್ಕಿಕೊಂಡಿರುವೆಯಲ್ಲಾ... ಸರಿಸರಿ. ನೀನು ತಪ್ಪಿಸಿಕೊಳ್ಳಲು ಒಂದು ಉಪಾಯವನ್ನು ಹೇಳುವೆನು. ರೈತನು ಬರುತ್ತಿದ್ದಾನೆ. ಅವನು ನಿನ್ನ ಹತ್ತಿರಕ್ಕೆ ಬಂದಾಗ ನೀನು ಸತ್ತಂತೆ ಅಲುಗಾಡದೆ ಕಣ್ಣುಮುಚ್ಚಿಕೊಂಡು ಮಲಗಿಕೊಂಡಿರುವಂತೆ ನಟಿಸು. ರೈತನು ಬಲೆಯನ್ನು ಬಿಚ್ಚಿಕೊಂಡು ತಿರುಗುವಾಗ ನಾನು ಮರದಲ್ಲಿ ಕುಳಿತು ಕೂಗುತ್ತೇನೆ. ಆಗ ನೀನು ತಕ್ಷಣವೇ ತಪ್ಪಿಸಿಕೊಂಡು ಓಡಿ ಬಿಡು ಎಂದು ಕಾಗೆ ಜಿಂಕೆಗೆ ಉಪಾಯವನ್ನು ಹೇಳಿತು.



5th-std_Term 1_Kannada_Reader_CBSE_KM.indd 53 7/9/2019 3:01:12 PM

ರೈತ : ಓಹೋ...! ಜಿಂಕೆ? ನೀನೇನಾ ಇದುವರೆಗೂ ನನ್ನ ಜಮೀನಿನಲ್ಲಿರುವ ಫಸಲನ್ನು ನಾಶ ಮಾಡುತ್ತಿದ್ದುದು? ಇಂದು ಬಲೆಯಲ್ಲಿ ಸಿಕ್ಕಿ ಸಾವನ್ನಪ್ಪಿದೆಯಾ?

(ಎಂದು ಕೊಂಡು ರೈತನು ಬಲೆಯನ್ನು ಬಿಚ್ಚಿ ಸುತ್ತಿ ಬೇರೆ ಕಡೆ ಇರಿಸಲು ತಿರುಗಿದನು. ಆಗ ಕಾಗೆಯು ಕೂಗಿಕೊಂಡಿತು. ತಕ್ಷಣವೇ ಜಿಂಕೆಯು ಕಣ್ಣುಮುಚ್ಚಿ ತೆರೆಯುವಷ್ಟರಲ್ಲಿ ತನ್ನ ಜೀವವನ್ನು ಉಳಿಸಿಕೊಂಡರೆ ಸಾಕು ಎಂದು ಬಗೆದು ವೇಗವಾಗಿ ಓಡಿ ಹೋಯಿತು).

ಅಯ್ಯಯ್ಯೋ! ಜಿಂಕೆಯು ನನ್ನನ್ನು ಮೋಸಗೊಳಿಸಿಬಿಟ್ಟಿತಲ್ಲಾ!

(ಎಂದು ರೈತನು ಪಶ್ಚಾತ್ತಾಪ ಪಟ್ಟುಕೊಂಡು ಕೂಡಲೇ, ಉದ್ದವಾದ ಕೋಲೊಂದನ್ನು ತೆಗೆದುಕೊಂಡು ಜಿಂಕೆಯು ಓಡುತ್ತಿದ್ದ ಕಡೆ ಬೀಸಿ ಎಸೆದನು. ರೈತನು ಎಸೆದ ಕೋಲು ಅಡಗಿಕೊಂಡಿದ್ದ ನರಿಯ ಮೇಲೆ ಬಿದ್ದು ಅದು ಮೂರ್ಛೆ ಹೋಯಿತು. ಕೆಲ ಸಮಯದ ನಂತರ ನರಿಯು ಮೂರ್ಛೆಯಿಂದ ಎದ್ದಿತು.)



ಕಾಗೆ : ನರಿಯೇ! ನಿನ್ನ ನಯವಂಚಕ ಬುದ್ಧಿಯು ನಿನಗೇ ಕೇಡುಂಟು ಮಾಡಿತು. ನಂಬಿದವರಿಗೆ ಎಂದಿಗೂ ದ್ರೋಹ ಬಗೆಯಬೇಡ.

ನರಿ : (ನರಿ ತಲೆತಗ್ಗಿಸಿ) ಕ್ಷಮಿಸು ಗೆಳೆಯನೇ! ಈ ರೀತಿ ಇನ್ನು ಮುಂದೆ ಎಂದಿಗೂ ನಾನು ನಡೆದುಕೊಳ್ಳುವುದಿಲ್ಲ.

ಕಾಗೆ : ತನ್ನಂತೆ ಇತರರನ್ನೂ ಮಮತೆಯಿಂದ ಕಾಣಬೇಕು, ಗೆಳೆಯರ ಜೊತೆ ನಿಜವಾದ ಸ್ನೇಹವನ್ನು ಬೆಳೆಸಿಕೊಳ್ಳಬೇಕು.

ನೀತಿ : ಆಪತ್ತಿಗಾದವನೇ ನಿಜವಾದ ಗೆಳೆಯ!

5th-std_Term 1_Kannada_Reader_CBSE_KM.indd 54 7/9/2019 3:01:12 PM

ಕಲಿಕಾ ಫಲ

- ಆಪತ್ತಿನಲ್ಲಿ ಸಹಾಯ ಮಾಡುವವನೇ ನಿಜವಾದ ಗೆಳೆಯ ಎಂಬ ಶೀರ್ಷಿಕೆಯನ್ನಿಟ್ಟುಕೊಂಡು ತರಗತಿಯಲ್ಲಿ ಚರ್ಚಿಸಿ.
- ಕೆಟ್ಟವರ ಸಂಗ, ಅವಮಾನಭಂಗ ಎಂಬುದಕ್ಕೆ ಕಥೆಯನ್ನು ಹೇಳಿರಿ.

ಮೌಲ್ಯಮಾಪನ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1. ಕಾಗೆಯ ಜೊತೆಗಾರನಾದ ಜಿಂಕೆಯನ್ನು ಬೇರ್ಪಡಿಸಲು ನರಿಯು ಏಕೆ ಚಿಂತಿಸಿತು ?
2. ನರಿಯನ್ನು ಗೆಳೆಯನನ್ನಾಗಿ ಮಾಡಿಕೊಂಡ ಜಿಂಕೆಯ ಹತ್ತಿರ ಕಾಗೆಯು ಏನೆಂದು ಹೇಳಿತು ?
3. ನರಿಯು ಜಿಂಕೆಯನ್ನು ಎಲ್ಲಿಗೆ ಕರೆದುಕೊಂಡು ಹೋಯಿತು?
4. ಬಲೆಯಲ್ಲಿ ಸಿಕ್ಕಿಕೊಂಡ ಜಿಂಕೆಯನ್ನು ಕಾಗೆಯು ಹೇಗೆ ಕಾಪಾಡಿತು?
5. 'ಅಪಾಯದಿಂದ ಪಾರಾದ ಜಿಂಕೆ' ಈ ಕತೆಯಿಂದ ನೀವು ತಿಳಿದುಕೊಂಡ ನೀತಿಯೇನು?

ಚಿಂತನಾಶೀಲ ಪ್ರಶ್ನೆ

ನಮ್ಮ ಜೊತೆ ಸ್ನೇಹ ಬಯಸುವವರಲ್ಲಿ ಎಂತಹ ಸದ್ಗುಣಗಳು ಇರಬೇಕು? ಪಟ್ಟಿಮಾಡಿ.



5th-std_Term 1_Kannada_Reader_CBSE_KM.indd 55 7/9/2019 3:01:12 PM

ಘಟಕ ಮೂರು

ವಾಕ್ಯಗಳು

ವ್ಯಾಕರಣ

ಕರ್ತೃಪದ, ಕರ್ಮಪದ, ಕ್ರಿಯಾಪದಗಳು ಅವುಗಳ ವಿಶೇಷಣಗಳಿಂದ ಕ್ರಮಬದ್ಧವಾಗಿ ಬರೆದ ಪದಗುಚ್ಛವೇ ವಾಕ್ಯವೆನಿಸುವುದು.

ಅನೇಕ ವಾಕ್ಯಗಳನ್ನು ಪರಸ್ಪರ ಸಂಬಂಧ ಉಂಟಾಗುವಂತೆ ಜೋಡಿಸುವುದೇ ವಾಕ್ಯ ರಚನೆ ಎನ್ನಿಸುವುದು.

ಉದಾಹರಣೆ : ತನುಶ್ರೀಯು ನಾಟ್ಯವನ್ನು ಮಾಡಿದಳು.

ವಾಕ್ಯಗಳಲ್ಲಿ ಪ್ರಮುಖವಾಗಿ ಕರ್ತೃಪದ, ಕರ್ಮಪದ, ಕ್ರಿಯಾಪದಗಳು ಬರುತ್ತವೆ. ಒಂದು ವಾಕ್ಯದಲ್ಲಿ ಯಾರು ಕೆಲಸವನ್ನು ಮಾಡುತ್ತಿದ್ದಾರೆ ಎನ್ನುವುದನ್ನು ಸೂಚಿಸುವುದೇ ಕರ್ತೃ ಪದ.

ಉದಾಹರಣೆ : ಗೌತಮಿಯು ಆಟವನ್ನು ಆಡುತ್ತಿದ್ದಾಳೆ.

ವಾಕ್ಯದಲ್ಲಿ ಯಾವ ಕೆಲಸವನ್ನು ಮಾಡುತ್ತಿದ್ದಾರೆ ಎನ್ನುವುದು ಕರ್ಮಪದ.

ಉದಾಹರಣೆ ಶಿಕ್ಷಕರು ಪಾಠವನ್ನು ಮಾಡುತ್ತಿದ್ದಾರೆ.

ವಾಕ್ಯದಲ್ಲಿ ಕೆಲಸವನ್ನು ಸೂಚಿಸುವ ಪದವು ಕ್ರಿಯಾಪದವಾಗುತ್ತದೆ.

ಉದಾಹರಣೆ : ಗಣೇಶನು ಶಾಲೆಗೆ 'ಹೋಗುತ್ತಿದ್ದಾನೆ'

ಕೆಲವು ಸಂದರ್ಭಗಳಲ್ಲಿ ಕರ್ಮಪದ ಇಲ್ಲದೆಯೂ ವಾಕ್ಯರಚನೆಯನ್ನು ಮಾಡಬಹುದು.

ಉದಾಹರಣೆಗೆ : ರಹೀಮನು ಆಡುತ್ತಿದ್ದಾನೆ.

- ಒಂದು ವಾಕ್ಯವು ಕರ್ತೃಪದ, ಕರ್ಮಪದ, ಕ್ರಿಯಾಪದಗಳನ್ನು ಒಳಗೊಂಡಿರುತ್ತದೆ.
- ರಹೀಮನು ಆಡುತ್ತಿದ್ದಾನೆ. – ಈ ವಾಕ್ಯದಲ್ಲಿ ಯಾವ ಪದ ಇಲ್ಲ.
- ಕರ್ತೃಪದ ಕರ್ಮಪದವನ್ನು ಸೇರಿಸಿ ವಾಕ್ಯ ರಚಿಸಲು ಸಾಧ್ಯವಿಲ್ಲ.

ಕಲಿಕಾ ಫಲ

- ವಾಕ್ಯ ರಚನೆ ಮಾಡುವ ಕ್ರಮವನ್ನು ತಿಳಿಯಿರಿ.
- ಒಂದು ವಾಕ್ಯ ರಚನೆಯಲ್ಲಿ ಕರ್ತೃ, ಕರ್ಮ, ಕ್ರಿಯಾ ಪದಗಳು ಇರಬೇಕು. ಕೆಲವೆಡೆ ಕರ್ಮಪದ ಇಲ್ಲದೆಯೂ ವಾಕ್ಯ ರಚಿಸಬಹುದು. ಈ ವಿಷಯವನ್ನು ತರಗತಿಯಲ್ಲಿ ಚರ್ಚಿಸಿ.

5th-std_Term 1_Kannada_Reader_CBSE_KM.indd 56 7/9/2019 3:01:12 PM

ಮೌಲ್ಯಮಾಪನ

ಓದೋಣ! ಚಿಂತಿಸೋಣ! ಬರೆಯೋಣ!

ಅ. ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ

1. ಕರ್ತೃ ಪದವು ಯಾವಾಗಲೂ _____ ಸೂಚಿಸುತ್ತದೆ.
   - ಅ) ಸರ್ವನಾಮವನ್ನು
   - ಆ) ಹೆಸರನ್ನು ಸೂಚಿಸುತ್ತದೆ
   - ಇ) ಸ್ಥಳವನ್ನು ಸೂಚಿಸುತ್ತದೆ
   - ಈ) ಕ್ರಿಯೆಯನ್ನು ಸೂಚಿಸುತ್ತದೆ

2. 'ಆಟವನ್ನು ಆಡಿದನು' ಈ ವಾಕ್ಯದಲ್ಲಿ _____ ಇಲ್ಲ
   - ಅ) ಕರ್ಮ
   - ಆ) ಕರ್ತೃ
   - ಇ) ಕ್ರಿಯೆ
   - ಈ) ಸಕರ್ಮಕ ಪದ

3. 'ಅಮುದನು ಓಡಿದನು' ಈ ವಾಕ್ಯದಲ್ಲಿ _____ ಇಲ್ಲ.
   - ಅ) ಕರ್ಮ ಪದ
   - ಆ) ಕ್ರಿಯೆ ಪದ
   - ಇ) ಕರ್ತೃ ಪದ
   - ಈ) ಅಕರ್ಮಕ ಪದ

ಆ. ಕರ್ತೃ, ಕರ್ಮ, ಕ್ರಿಯಾಪದವಿರುವ ವಾಕ್ಯಗಳನ್ನು ರಚಿಸಿ. ಅವುಗಳನ್ನು ಪ್ರತ್ಯೇಕವಾಗಿ ಬರೆಯಿರಿ.

1) ಮಾಧವಿಯು ಚಿತ್ರವನ್ನು ಬಿಡಿಸುತ್ತಾಳೆ.

2) ಕುವೆಂಪು 'ಶ್ರೀರಾಮಾಯಣ ದರ್ಶನಂ' ಗ್ರಂಥವನ್ನು ಬರೆದಿದ್ದಾರೆ.

3) ಮುರುಗನು ಸೈಕಲ್ಲನ್ನು ಓಡಿಸುತ್ತಾನೆ.

4) ಗಿಳಿಯು ಹಣ್ಣನ್ನು ತಿಂದಿತು.

ಕ್ರಮಸಂಖ್ಯೆ	ಕರ್ತೃಪದ	ಕರ್ಮಪದ	ಕ್ರಿಯಾಪದ
1.			
2.			
3.			
4.			

ಇ. ಕರ್ತೃ, ಕರ್ಮ, ಕ್ರಿಯಾಪದ ಈ ಮೂರೂ ಪದಗಳನ್ನೂ ಒಳಗೊಂಡ ಎರಡು ವಾಕ್ಯಗಳನ್ನು ರಚಿಸಿರಿ.

1. _____
2. _____

ಈ. ಕರ್ತೃ ಮತ್ತು ಕ್ರಿಯಾಪದಗಳನ್ನು ಬಳಸಿ ಎರಡು ವಾಕ್ಯಗಳನ್ನು ರಚಿಸಿರಿ.

1. _____
2. _____

ಉ. ಕರ್ಮಪದ ಮತ್ತು ಕ್ರಿಯಾಪದಗಳನ್ನು ಬಳಸಿ ಎರಡು ವಾಕ್ಯಗಳನ್ನು ರಚಿಸಿರಿ.

1. _____
2. _____

5th-std_Term 1_Kannada_Reader_CBSE_KM.indd 57 7/9/2019 3:01:12 PM

ಭಾಷಾ ಕೌಶಲ್ಯವನ್ನು ಬೆಳೆಸಿಕೊಳ್ಳೋಣ!

ಅ. ಕೇಳುವುದು

- ತರಗತಿಯಲ್ಲಿ ಪ್ರಕೃತಿಗೆ ಸಂಬಂಧಪಟ್ಟ ಪದ್ಯಗಳನ್ನು ಕೇಳಿಸಿಕೊಂಡು ಅದೇ ರೀತಿ ಹಾಡಿ ಸಂಭ್ರಮಿಸುವುದು.
- ಹೊಸ ಪದಗಳನ್ನು ಸಂಗ್ರಹಿಸಿಕೊಂಡು ಬಂದು ತರಗತಿಯಲ್ಲಿ ನಿಮ್ಮ ಗೆಳೆಯರಿಂದ ಸರಿಯಾದ ಅರ್ಥವನ್ನು ಕೇಳಿ ಸಂಭ್ರಮಿಸಿ.
- ಪ್ರಕೃತಿಯನ್ನು ರಕ್ಷಿಸುವುದು ಎಷ್ಟು ಅವಶ್ಯಕ ಎನ್ನುವುದನ್ನು ಕೇಳಿಕೊಂಡು ತರಗತಿಯಲ್ಲಿ ಚರ್ಚಿಸಿ.

ಆ. ಮಾತನಾಡುವುದು

- ಪ್ರಕೃತಿಗೆ ಸಂಬಂಧಪಟ್ಟ ಪದ್ಯಗಳನ್ನು ಕುರಿತು ಮಾತನಾಡಿ.
- ಗಾದೆ ಮಾತುಗಳನ್ನು ಕುರಿತು ನಿಮ್ಮ ಸ್ವಂತ ಅನುಭವದಿಂದ ಮಾತನಾಡಿರಿ.
- ನೀವು ಕೈಗೊಂಡಿರುವ ಪ್ರವಾಸ ಹಾಗೂ ನೀವು ನೋಡಿರುವ ಊರನ್ನು ವರ್ಣಿಸಿ ಮಾತನಾಡಿ.
- ಮಳೆ ಬೀಳುವುದನ್ನು ವರ್ಣಿಸಿ ತರಗತಿಯಲ್ಲಿ ಮಾತನಾಡಿ.
- ತರಗತಿಯಲ್ಲಿ ನೀವು 'ತೆಂಗು, ಬಾಳೆ, ತಾಳೆ, ನುಗ್ಗೆ ಮರ' ಎಂದು ಕಲ್ಪಿಸಿಕೊಂಡು ಅಭಿನಯಿಸಿ 'ನಾನೇ ಜನರಿಗೆ ಹೆಚ್ಚು ಉಪಯೋಗ' ಎಂದು ಒಬ್ಬೊಬ್ಬರೂ ತರಗತಿಯಲ್ಲಿ ಮಾತನಾಡುವುದು.

ಇ. ಓದುವುದು

- ಗಾದೆ ಮಾತುಗಳನ್ನು ಸಂಗ್ರಹಿಸಿ ಓದಿರಿ.
- ಹೊಸ ಪದಗಳನ್ನು ಸಂಗ್ರಹಿಸಿ ಓದಿರಿ.
- ಗ್ರಂಥಾಲಯಕ್ಕೆ ಭೇಟಿ ನೀಡಿ ಅಲ್ಲಿರುವ ಪುಸ್ತಕಗಳನ್ನು ಓದಿ ನಾಣ್ನುಡಿಗಳನ್ನು ಸಂಗ್ರಹಿಸಿಕೊಂಡು ಬಂದು ಅವುಗಳನ್ನು ವಿವರಿಸಿ.

ಈ. ಬರೆಯುವುದು

1. ಪದಗಳನ್ನು ಕೇಳಿ ಬರೆಯಿರಿ :

1) ಮಾವಿನ ಕಾಯಿಯನ್ನು ಕಿತ್ತು ತರುತ್ತೇನೆ.

2) 'ಗಾಳಿ ಬಂದಾಗ ತೂರಿಕೋ' – ಈ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.

3) ನಿಮಗೆ ತಿಳಿದಿರುವ ಗಾದೆಯೊಂದನ್ನು ಬರೆದು ಅದನ್ನು ವಿಸ್ತರಿಸಿ.

4) ನೀವು ಕಂಡ ದೃಶ್ಯವೊಂದನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.

2. ಈ ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬರೆಯಿರಿ.

1. ತಾಳ್ಮೆ _____
2. ಸಂತಸ _____
3. ಜಾತ್ರೆ _____

5th-std_Term 1_Kannada_Reader_CBSE_KM.indd 58 7/9/2019 3:01:12 PM

4. ಬಸ್ಸು _____

5. ಶಾಲೆ _____

3. ಕೊಟ್ಟಿರುವ ವಾಕ್ಯಗಳಿಗೆ ಸೂಕ್ತ ಲೇಖನ ಚಿಹ್ನೆಯನ್ನು ಗುರುತಿಸಿ ಬರೆಯಿರಿ.

ಆಹಾ ಉತ್ತಮ ಪರಿಶೀಲನೆ ಅವನು ಬಡಗಿಯೇ ಆಗಿರಬೇಕೆಂದು ನಿನಗೆ ಹೇಗೆ ತಿಳಿಯಿತು ನಿನ್ನ ಜಾಣ್ಮೆ ಸಮಯಪ್ರಜ್ಞೆ ನನಗೆ ಸಂತೋಷವನ್ನು ಕೊಟ್ಟಿದೆ. ನೀನು ನಿಜಕ್ಕೂ ಬುದ್ಧಿವಂತೆಯೇ ಸರಿ ಎಂದು ವಾಣಿಯು ತನ್ನ ಗೆಳತಿಯನ್ನು ಹೊಗಳಿದಳು.

4. ಕೊಟ್ಟಿರುವ ಸಂಭಾಷಣೆಯನ್ನು ನಿಮ್ಮ ಮಾತಿನಲ್ಲಿ ಪೂರ್ತಿಗೊಳಿಸಿ ಬರೆಯಿರಿ.

(ಆರೋಗ್ಯ, ಹಲ್ಲುಜ್ಜು, ಹುಳುಕು, ಹಲ್ಲುನೋವು)

ವೈದ್ಯರು : ನಿರ್ಮಲಾ, ಏನಾಗಿದೆ ನಿನಗೆ?

ನಿರ್ಮಲ : ನನಗೆ _____ ಸರ್

ವೈದ್ಯರು : ಎಲ್ಲಿ ಬಾಯಿ ತೆಗೆ, ಹಲ್ಲುಗಳೆಲ್ಲ _____ ಆಗಿವೆ.

ನಿರ್ಮಲ : ಇದಕ್ಕೆ ನಾನು ಏನು ಮಾಡಬೇಕು ವೈದ್ಯರೇ?

ವೈದ್ಯರು : ಸಿಹಿ ತಿಂಡಿಗಳನ್ನು ಅಧಿಕವಾಗಿ ತಿನ್ನಬಾರದು. ಪ್ರತಿದಿನವೂ ಎರಡು ಬಾರಿ ಬೆಳಿಗ್ಗೆ ಮತ್ತು ರಾತ್ರಿ ಸಮಯದಲ್ಲಿ _____ ಬೇಕು. ಆಗಲೇ ಹಲ್ಲುಗಳು _____ವಾಗಿರುತ್ತವೆ.

ನಿರ್ಮಲ : ನೀವು ಹೇಳಿದ ಸಲಹೆಗಳನ್ನು ಪಾಲಿಸುತ್ತೇನೆ. ಧನ್ಯವಾದಗಳು ವೈದ್ಯರೇ!

5. ಕಥೆಯನ್ನು ಪೂರ್ಣಗೊಳಿಸಿ

ಒಂದು ದೊಡ್ಡ ಮರದ ಪೊಟರೆಯಲ್ಲಿ ಒಂದು ಕುರುಡು ಹದ್ದು ವಾಸಿಸುತ್ತಿತ್ತು. ಅದಕ್ಕೆ ಕಣ್ಣು ಕಾಣಿಸುತ್ತಿರಲಿಲ್ಲವಾದ್ದರಿಂದ ಆಹಾರ ತರಲು ಸಾಧ್ಯವಾಗುತ್ತಿರಲಿಲ್ಲ. ಅದೇ ಮರದಲ್ಲಿ ಕಾಗೆಗಳ ಸಂಸಾರವೊಂದು ವಾಸಿಸುತ್ತಿದ್ದವು. ಅವುಗಳು ಹದ್ದಿಗೆ ಆಹಾರ ತಂದು ಕೊಡುತ್ತಿದ್ದವು. ಕಾಗೆಗಳು ಆಹಾರ ತರಲು ಹೋದಾಗ ಹದ್ದು ಅವುಗಳ ಮರಿಗಳನ್ನು ನೋಡಿಕೊಳ್ಳುತ್ತಿತ್ತು. ಹೀಗೆ ಅವುಗಳು ಪರಸ್ಪರ ನೆರವಾಗುತ್ತಿದ್ದವು. ಒಂದು ದಿನ ಒಂದು ಬೆಕ್ಕಿಗೆ ....
.....

6. ಜೋಡಿಸಿ ಹೇಳೋಣ.

ಸಂಬಂಧ ಹೊಂದಿರುವ ಕೆಲವು ಜೋಡಿ ಪದಗಳನ್ನು ಬೇರೆ ಬೇರೆ ರಟ್ಟಿನಲ್ಲಿ ಬರೆದುಕೊಳ್ಳಿ.
ಉದಾಹರಣೆ :

ಆಲಕ್ಕೆ ಹೂವಿಲ್ಲ

ಸಾಲಕ್ಕೆ ಕೊನೆಯಿಲ್ಲ.

- ಎಲ್ಲರೂ ವೃತ್ತಾಕಾರವಾಗಿ ಕುಳಿತುಕೊಳ್ಳಿರಿ.
- ಪ್ರತಿಯೊಬ್ಬರೂ ಒಂದು ರಟ್ಟನ್ನು ತೆಗೆದುಕೊಳ್ಳಿರಿ.
- ಒಬ್ಬರು ಎದ್ದು ಕೈಯಲ್ಲಿರುವ ರಟ್ಟನ್ನು ತೆಗೆದುಕೊಂಡು ಬರೆದಿರುವುದನ್ನು ಓದಿ.
- ಅದರೊಡನೆ ಸಂಬಂಧಪಟ್ಟ ಪದಗಳನ್ನು ಬರೆದಿರುವ ರಟ್ಟನ್ನು ಇಟ್ಟಿರುವವರು ಎದ್ದು ನಿಂತು ಓದಬೇಕು.

5th-std_Term 1_Kannada_Reader_CBSE_KM.indd 59 7/9/2019 3:01:12 PM

7. ಕೆಳಗಿನ ಉತ್ತರಗಳನ್ನು ಓದಿ ಪ್ರಶ್ನೆಗಳನ್ನು ಬರೆಯಿರಿ.

1. ನನ್ನ ಗೆಳೆಯನ ಹೆಸರು ಸುರೇಶ.

   _____

2. ಅಜ್ಜಿ ನನಗೆ ಕಥೆ ಹೇಳುವರು.

   _____

3. ಪ್ರತಿದಿನ ಸಾಯಂಕಾಲ ಆಟವಾಡುತ್ತೇನೆ.

   _____

4. ನನಗೆ ಚೆಂಡು ದಾಂಡು ಆಟವಾಡಲು ತುಂಬಾ ಇಷ್ಟ.

   _____

5. ನಾನು ಸಕಲ ಜೀವಿಗಳಲ್ಲಿಯೂ ಪ್ರೀತಿಯಿಂದ ನಡೆದುಕೊಳ್ಳುತ್ತೇನೆ.

   _____

8. ವಾಕ್ಯ ವೃಂದಗಳನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ.

ಒಂದು ದಿನ ಸಾಯಂಕಾಲ ರವಿಯ ತೋಟಕ್ಕೆ ಅವನ ಗೆಳೆಯರಾದ ಸುರೇಶ್ ಮತ್ತು ನವೀನ ಆಟವಾಡಲು ಬಂದರು. ತೋಟದಲ್ಲಿ ನಾಲ್ಕು ನಾಯಿ ಮರಿಗಳನ್ನು ಅವರು ನೋಡಿದರು. ಆ ಮುದ್ದಾದ ನಾಯಿಮರಿಗಳನ್ನು ಮನೆಗೆ ತೆಗೆದುಕೊಂಡು ಹೋಗಲು ಇಷ್ಟಪಟ್ಟರು. ಇಬ್ಬರೂ ಒಂದೊಂದು ನಾಯಿಮರಿಯನ್ನು ತೆಗೆದುಕೊಂಡರು. ರವಿ ಅವರಲ್ಲಿ, 'ಸ್ನೇಹಿತರೇ, ಹಾಲು ಕುಡಿಯುವ ಈ ನಾಯಿಮರಿಗಳನ್ನು ತಾಯಿಯಿಂದ ದೂರ ಮಾಡಬೇಡಿ. ನಮ್ಮನ್ನು ನಮ್ಮ ಹೆತ್ತವರಿಂದ ದೂರ ಮಾಡಿದರೆ ನಾವು ಎಷ್ಟು ದುಃಖ ಪಡುತ್ತೇವೆ ಎಂದು ಚಿಂತಿಸಿ ನೋಡಿರಿ' ಎಂದು ಹೇಳಿದನು. ಗೆಳೆಯರು ತಮ್ಮ ಸ್ನೇಹಿತನ ಮಾತನ್ನು ಕೇಳಿ ನಾಯಿ ಮರಿಗಳನ್ನು ಬಿಟ್ಟರು. ನಾಯಿಮರಿಗಳು ಸಂತೋಷದಿಂದ ತಮ್ಮ ತಾಯಿಯೊಡನೆ ಆಟವಾಡುತ್ತಿದ್ದವು. ಇದನ್ನು ನೋಡಿದ ಮೂವರೂ ಗೆಳೆಯರು ಸಂತೋಷ ಪಟ್ಟರು.

ಉತ್ತರಿಸಿ

1. ರವಿಯ ತೋಟದಲ್ಲಿ ಎಷ್ಟು ನಾಯಿಮರಿಗಳಿದ್ದವು?
2. ಗೆಳೆಯರಿಬ್ಬರೂ ರವಿಯ ತೋಟಕ್ಕೆ ಹೋಗಲು ಕಾರಣವೇನು?
3. ಸುರೇಶ ಮತ್ತು ನವೀನ್ ಏನು ಮಾಡಲು ಇಷ್ಟಪಟ್ಟರು.
4. ಗೆಳೆಯರಿಗೆ ರವಿಯ ತಿಳುವಳಿಕೆ ಏನು?
5. ಗೆಳೆಯರು ನಾಯಿಮರಿಗಳನ್ನು ಏಕೆ ತೆಗೆದುಕೊಂಡರು?

5th-std_Term 1_Kannada_Reader_CBSE_KM.indd 60 7/9/2019 3:01:12 PM



ಭಾಷೆಯೊಂದಿಗೆ ಆಟ

1. ಕಂಡು ಹಿಡಿದು ಬರೆಯಿರಿ.

1) ಸುವಾಸನೆಯುಳ್ಳ ಹೂವು _____

2) ಚೆಂಡನ್ನು ಹೊಡೆಯಲು ಇದು ಬೇಕು _____

3) ಹಸುವಿನ ಆಹಾರ _____

4) ಮೀನನ್ನು ಹಿಡಿಯಲು ಇದು ಸಹಾಯಕವಾಗಿದೆ _____

5) ಒಂದು ಸಿಹಿ ತಿಂಡಿ _____

ಲ	ಮ	ವ	ಬ	ೆ
ಎಂ	ಡ	ಮ	ಲ್ಲಿ	ಗೆ
ರ	ಯ	ಲಾ	ಡು	ಮ
ದ	ದಾಂ	ಡು	ಹು	ಕ
ಕ	ಜ್ಞಾ	ಯ	ಲ್ಲು	ರ

2. ಆಂಗ್ಲಭಾಷೆಯಲ್ಲಿರುವ ಪದಕ್ಕೆ ಕನ್ನಡದ ಪದಗಳನ್ನು ಬರೆಯಿರಿ.

1) Sea shore _____

2) Morning _____

3) Field _____

4) Mango Tree _____

5) Cyclone _____

6) Nature _____

7) Pearl _____

8) Farmer _____

9) Project _____

10) Circus _____

5th-std_Term 1_Kannada_Reader_CBSE_KM.indd 61 7/9/2019 3:01:13 PM

3. 'ಬೇವಿನ ಮರದ ಹಲಗೆ' ಈ ಪದದಿಂದ ಹೊಸ ಪದಗಳನ್ನು ರಚಿಸೋಣ.

ಉದಾಹರಣೆ : ಬೇವು, ಹಲಗೆ

1) _____ 2) _____

3) _____ 4) _____

5) _____ 6) _____

7) _____ 8) _____

9) _____ 10 _____

11) _____ 12) _____

13) _____ 14) _____

15) _____ 16) _____

4. ಒಂದು ಕಥೆಯ ಮೊದಲ ಆರಂಭದ ವಾಕ್ಯವನ್ನು ಕೊಡಲಾಗಿದೆ. ನೀವು ಪ್ರತಿಯೊಬ್ಬರೂ ಒಂದೊಂದು ವಾಕ್ಯವನ್ನು ಹೇಳಿ ಕಥೆಯನ್ನು ಅಂತ್ಯಗೊಳಿಸಿ.

ಅಂದು ಕಾಡಿನ ರಾಜ ಸಿಂಹದ ಹುಟ್ಟಿದ ದಿನ.....

_____

_____

_____

_____

_____

_____

_____

_____

5th-std_Term 1_Kannada_Reader_CBSE_KM.indd 62 7/9/2019 3:01:13 PM

ತಿಳಿದುಕೊಳ್ಳೋಣ

5. ಕಡಲಿನ ಸಂಪತ್ತುಗಳನ್ನು ಕಂಡು ಹಿಡಿಯಿರಿ.

ಪ	ಮೀ	ನು	ರಾ	ಶಂ
ನ	ಬ	ಆ	ಮೆ	ಖ
ಳ	ಲೆ	ಮು	ಹ	ಕ
ದ	ತ	ತ್ಸು	ನ	ಂ
ಮ	ಅ	ಲೆ	ಳ	ಪ್ಪು

1. ಶಂಖ_____
2. _____
3. _____
4. _____
5. _____
6. _____

6. ಕಡಲನ್ನು ಸೂಚಿಸುವ ಪದಗಳಿಗೆ ವೃತ್ತ ಹಾಕಿ.

1. ಸಮುದ್ರ
2. ಸಾಗರ
3. ನದಿ
4. ಶರಧಿ
5. ಕೆರೆ
6. ನದಿ
7. ಸರೋವರ
8. ಜಲಪಾತ
9. ಜಲಾಶಯ
10. ಅಬ್ಧಿ

ಚಟುವಟಿಕೆ

1) ನನ್ನಿಂದ ಸಾಧ್ಯವಾದಷ್ಟೂ ಪರಿಸರವನ್ನು ಕಾಪಾಡುತ್ತೇನೆ.

2) ನನ್ನ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿ ಇಟ್ಟಿರುತ್ತೇನೆ.



5th-std_Term 1_Kannada_Reader_CBSE_KM.indd 63 7/9/2019 3:01:13 PM

ಘಟಕ ನಾಲ್ಕು

ವಿಜ್ಞಾನ ಮತ್ತು ತಂತ್ರಜ್ಞಾನ

ಪದ್ಯ	:	ಜಲಚಕ್ರ	–	ಹ.ಮ.ಪೂಜಾರ
ಗದ್ಯ	:	ಪ್ರವಾಸ ಹೋಗೋಣ	–	ಸಂಗ್ರಹ
ಉಪಪಠ್ಯ	:	ಕನಸುಗಾರ ಕಲಾಂ!	–	ಸಂಗ್ರಹ
ವ್ಯಾಕರಣ	:	ಸಂಯುಕ್ತಾಕ್ಷರಗಳು	–	



ಕಲಿಕಾ ಉದ್ದೇಶಗಳು

- ಪದ್ಯವನ್ನು ರಾಗಬದ್ಧವಾಗಿ, ಪ್ರಾಸದೊಂದಿಗೆ ಹಾಡಿರಿ.
- ತಂತ್ರಜ್ಞಾನಕ್ಕೆ ಸಂಬಂಧಿಸಿದ ಪದಗಳನ್ನು ಓದಿ ಅರ್ಥೈಸಿಕೊಳ್ಳುವುದು.
- ಪ್ರಕೃತಿಯು ತಂತ್ರಜ್ಞಾನದ ಬೆಳವಣಿಗೆಗೆ ಹೇಗೆ ಸಹಕಾರಿಯಾಗಿದೆ ಎಂಬುದನ್ನು ಅರಿತುಕೊಳ್ಳುವುದು.
- ವಿದ್ಯಾರ್ಥಿಯು ಸಾರಿಗೆ ವ್ಯವಸ್ಥೆಯ ಅನುಕೂಲಗಳನ್ನು ಅರ್ಥ ಮಾಡಿಕೊಳ್ಳುವುದು.

5th-std_Term 2_Kannada_Reader_CBSE_KM.indd 64 7/9/2019 3:26:43 PM

ಘಟಕ ನಾಲ್ಕು


ಜಲಚಕ್ರ

ಪದ್ಯ


–ಹ.ಮ.ಪೂಜಾರ

ಆಶಯ

ಮನುಷ್ಯನ ಜೀವನಾವಶ್ಯಕವಾದ ವಸ್ತುಗಳನ್ನು ಪ್ರಕೃತಿ ಒಂದಲ್ಲಾ ಒಂದು ರೂಪದಲ್ಲಿ ನಿರಂತರವಾಗಿ ಒದಗಿಸುತ್ತಲೇ ಬಂದಿದೆ. ಜೀವ ಜಗತ್ತಿನ ಉಳಿವಿಗೆ ಕಾರಣವಾದ ನೀರನ್ನು ನೈಸರ್ಗಿಕ ಪ್ರಕ್ರಿಯೆಯಾದ 'ಜಲಚಕ್ರ'ದ ಮೂಲಕ ಪೂರೈಸುತ್ತಿರುವುದನ್ನು ಪ್ರಾಸಬದ್ಧವಾಗಿ ಹಿಡಿದಿಟ್ಟಿರುವುದನ್ನು ಈ ಪದ್ಯದಲ್ಲಿ ಕಾಣಬಹುದು.



5th-std_Term 2_Kannada_Reader_CBSE_KM.indd 65 7/9/2019 3:26:44 PM



ಹಳ್ಳವೆಲ್ಲ
ಹರಿದು ಬಂದು
ಹೊನಲ ಸೇರಿತು

ಹೊನಲ ನೀರು
ರಭಸದಿಂದ
ಕಡಲ ಸೇರಿತು

ಕಡಲ ನೀರು
ಮತ್ತೆ ಕಾಯ್ದು
ಆವಿಯಾಯಿತು

ಇನಿತು ಕಾರ್ಯ
ಮತ್ತೆ ಮತ್ತೆ
ಬಿಡದೆ ಸಾಗಿದೆ

ಜಲದ ಚಕ್ರ
ಇಳೆಯ ಮೇಲೆ
ನಿತ್ಯ ತಿರುಗಿದೆ

5th-std_Term 2_Kannada_Reader_CBSE_KM.indd 66 7/9/2019 3:26:44 PM

ಪದಗಳ ಅರ್ಥ

ಇಳೆ–ಭೂಮಿ; ಕಡಲು–ಸಮುದ್ರ, ಸಾಗರ; ಗಗನ–ಆಕಾಶ, ಭಾನು; ಜಲ–ನೀರು; ಹೊನಲು–ಪ್ರವಾಹ.

ಕವಿ – ಕಾವ್ಯ ಪರಿಚಯ

ಹ.ಮ.ಪೂಜಾರ ಇವರು ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಬಿಜಾಪುರ ಜಿಲ್ಲೆಯ ಸಿಂಧಗಿಯಲ್ಲಿ 13.03.1942ರಲ್ಲಿ ಜನಿಸಿದರು. ಇವರು ಮಕ್ಕಳಿಗಾಗಿ 'ಪರಿಸರ ಕಾವ್ಯ', 'ನೀತಿಯ ಬದುಕು', 'ತುಂಟ ಮಂಗ' ಮುಂತಾದ ಪುಸ್ತಕಗಳನ್ನು ಬರೆದಿದ್ದಾರೆ. ಪ್ರಸ್ತುತ ಪದ್ಯವನ್ನು ಹ.ಮ.ಪೂಜಾರ ಅವರ 'ಪರಿಸರ' ಎಂಬ ಕವನ ಸಂಕಲನದಿಂದ ಆರಿಸಿತೆಗೆದುಕೊಳ್ಳಲಾಗಿದೆ.



ಕಲಿಕಾ ಫಲ

- ಪದ್ಯವನ್ನು ಸರಿಯಾದ ಉಚ್ಚಾರಣೆಯೊಂದಿಗೆ ಓದಿ ತಿಳಿದುಕೊಳ್ಳುವುದು.
- ಪದ್ಯವನ್ನು ರಾಗಬದ್ಧವಾಗಿ, ಪ್ರಾಸದೊಂದಿಗೆ ಹಾಡಿರಿ.
- ಪ್ರಾಸದಿಂದ ಕೂಡಿರುವ ಕವಿತೆಗಳನ್ನು ಸಂಗ್ರಹಿಸಿ ಓದಿ.
- ವಿಜ್ಞಾನಕ್ಕೆ ಸಂಬಂಧಿಸಿದ ಪದ್ಯಗಳನ್ನು ಸಂಗ್ರಹಿಸಿ ಓದಿ.



ಮೌಲ್ಯಮಾಪನ

ಓದೋಣ! ಚಿಂತಿಸೋಣ! ಬರೆಯೋಣ!

ಅ. ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ

1. ಇಳೆ ಪದದ ಸಮಾನಾರ್ಥಕ ಪದ _____

ಅ) ಕಳೆ ಆ) ಭೂಮಿ

ಇ) ಮೊಳಕೆ ಈ) ಕಲೆ

2. ಭೂಮಿ ಪದದ ವಿರುದ್ಧ ಪದ

ಅ) ಗಗನ ಆ) ಚಂದ್ರ

ಇ) ನಕ್ಷತ್ರ ಈ) ಆದಿತ್ಯ

3. ಆವಿಯೆಲ್ಲ – ಈ ಪದವನ್ನು ಬಿಡಿಸಿ ಬರೆದಾಗ _____

ಅ) ಆವಿ+ಯೆಲ್ಲ ಆ) ಆವಿ+ಎಲ್ಲ

ಇ) ಆವಿ+ಅಲ್ಲ ಈ) ಅವಿ+ಅಲ್ಲ

5th-std_Term 2_Kannada_Reader_CBSE_KM.indd 67 7/9/2019 3:26:44 PM

ಆ. ಕೆಳಗಿನ ಪದಗಳನ್ನು ಹೊಂದಿಸಿ ಬರೆಯಿರಿ.

1. ಮೋಡ – ನೀರು = _____
2. ಕಡಲ – ಸೇರಿತು = _____
3. ಹೊನಲ – ತಿರುಗಿದೆ = _____
4. ನಿತ್ಯ – ಕರಗಿ = _____

ಇ. ಈ ಪದ್ಯದಲ್ಲಿ ಕಂಡು ಬರುವ ಪ್ರಾಸ ಪದಗಳನ್ನು ಬರೆಯಿರಿ.

_____ _____

_____ _____

_____ _____

ಈ. ಈ ಪದ್ಯದಲ್ಲಿ ಬರುವ ಒತ್ತಕ್ಷರಗಳನ್ನು ಬರೆಯಿರಿ.

_____ _____

_____ _____

_____ _____

ಉ. ಈ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1) 'ಜಲಚಕ್ರ'ದಲ್ಲಿ ಆವಿಯು ಹೇಗೆ ಆಗುತ್ತದೆ?
2) ತಂಪಾದ ಮೋಡ ಕರಗಿ ಏನಾಯಿತು ?
3) ಕವಿ ತಿಳಿಸಿರುವಂತೆ ಬಿಡದೆ ನಿರಂತರವಾಗಿ ನಡೆಯುತ್ತಿರುವ ಪ್ರಕೃತಿ ಕಾರ್ಯ ಯಾವುದು?
4) 'ಜಲಚಕ್ರ'ದಲ್ಲಿ ಯಾವುದು ಕಡಲನ್ನು ಸೇರುತ್ತದೆ?

5th-std_Term 2_Kannada_Reader_CBSE_KM.indd 68 7/9/2019 3:26:44 PM

ಘಟಕ ನಾಲ್ಕು

ಪ್ರವಾಸ ಹೋಗೋಣ

ಗದ್ಯ

– ಸಂಗ್ರಹ



ಹೊಸೂರಿನ ಪ್ರಾಥಮಿಕ ಶಾಲೆಯ ಮಕ್ಕಳನ್ನು ಶಿಕ್ಷಕರು ಪ್ರವಾಸಕ್ಕೆ ಕರೆದುಕೊಂಡು ಹೋಗಲು ತೀರ್ಮಾನಿಸಿದರು. ಮಕ್ಕಳ ಇಚ್ಛೆಯಂತೆ ರೈಲಿನಲ್ಲಿ ಶ್ರವಣಬೆಳಗೊಳಕ್ಕೆ ಪ್ರವಾಸ ಹೊರಡಲು ಸಿದ್ಧರಾಗಿ ರೈಲು ನಿಲ್ದಾಣದ ಹತ್ತಿರ ಬಂದರು.

5th-std_Term 2_Kannada_Reader_CBSE_KM.indd 69 7/9/2019 3:26:45 PM

ಶಿಕ್ಷಕರು : ಮಕ್ಕಳೇ! ಇಬ್ಬಿಬ್ಬರಂತೆ ಸಾಲಾಗಿ ಕೈ ಹಿಡಿದುಕೊಂಡು ನನ್ನ ಹಿಂದೆಯೇ ಬನ್ನಿರಿ. ಈಗ ರೈಲು ನಿಲ್ದಾಣದ ಒಳಗೆ ಹೋಗೋಣ.

ಶಾಲಿನಿ : ಗುರುಗಳೇ, ಇದೇನು? ಇಷ್ಟುದ್ದದ ಜನರ ಸಾಲು ಇದೆ!

ಶಿಕ್ಷಕರು : ಅದು ಟಿಕೆಟ್ ತೆಗೆದುಕೊಳ್ಳಲು ನಿಂತಿರುವವರ ಸಾಲು. ನಾನು ಸಹ ನಿಮ್ಮೆಲ್ಲರಿಗೂ ಟಿಕೆಟ್ ತೆಗೆದುಕೊಳ್ಳಲು ಹೋಗುತ್ತೇನೆ.

ಥಾಮಸ್ : ಗುರುಗಳೇ, ಇವರೆಲ್ಲರೂ ನಮ್ಮಂತೆಯೇ ಪ್ರವಾಸಕ್ಕೆ ಹೊರಟಿರುವವರೇ?

ಶಿಕ್ಷಕರು : ಅವರೆಲ್ಲಾ ಬೇರೆ ಬೇರೆ ಸ್ಥಳಗಳಿಗೆ ಹೋಗಲು ಟಿಕೆಟ್ ತೆಗೆದುಕೊಳ್ಳಲು ನಿಂತಿದ್ದಾರೆ.

ಕೌಸ್ತುಭ : ಎಲ್ಲರಿಗೂ ಒಂದೇ ಕಡೆ ಟಿಕೆಟ್ ಹೇಗೆ ಕೊಡುತ್ತಾರೆ?

ಶಿಕ್ಷಕರು : ಅಲ್ಲಿ ನೋಡಿ, ಟಿಕೆಟ್ ಕೌಂಟರ್‌ನಲ್ಲಿ ಕುಳಿತಿರುವವರು ಕಂಪ್ಯೂಟರ್ ಮೂಲಕ ಕೇಳಿದ ಸ್ಥಳಗಳಿಗೆ ಟಿಕೆಟ್ ನೀಡುತ್ತಿದ್ದಾರೆ.

ಅಬ್ದುಲ್ : ಎಲ್ಲರೂ ಒಂದೇ ಕಡೆಯೇ ರೈಲು ಹತ್ತಬೇಕೇ ಗುರುಗಳೇ?

ಶಿಕ್ಷಕರು : ಇಲ್ಲ, ಇಲ್ಲ. ಬೇರೆ ಬೇರೆ ರೈಲುಗಳಿಗೆ ನಿಗದಿತ ಫ್ಲಾಟ್‌ಫಾರಂಗಳಿರುತ್ತವೆ. ಅಲ್ಲಿಗೆ ರೈಲುಗಳು ಬಂದು ನಿಲ್ಲುತ್ತವೆ.

ಶಾಲಿನಿ : ಗುರುಗಳೇ! ಫ್ಲಾಟ್‌ಫಾರಂ ಎಂದರೇನು ?

ಶಿಕ್ಷಕರು : ರೈಲು ಬಂದು ನಿಲ್ಲಲು ಮತ್ತು ಹೊರಡಲು ನಿಗದಿಪಡಿಸಿರುವ ಸ್ಥಳವನ್ನು ಫ್ಲಾಟ್‌ಫಾರಂ ಎನ್ನುತ್ತಾರೆ.

ಥಾಮಸ್ : ಯಾವ ರೈಲು ಯಾವ ಫ್ಲಾಟ್‌ಫಾರಂನಲ್ಲಿ ನಿಲ್ಲುತ್ತದೆ ಎಂದು ಹೇಗೆ ತಿಳಿಯುವುದು?

ಶಿಕ್ಷಕರು : ರೈಲು ಬರುವ ಮೊದಲು ಧ್ವನಿವರ್ಧಕದಲ್ಲಿ ಯಾವ ರೈಲು, ಯಾವ ಫ್ಲಾಟ್‌ಫಾರಂನಲ್ಲಿ ನಿಲ್ಲುತ್ತದೆ ಎಂಬುದನ್ನು ಬಿತ್ತರಿಸುತ್ತಿರುತ್ತಾರೆ. ಜೊತೆಗೆ ಆಧುನಿಕ ತಂತ್ರಜ್ಞಾನದ ಮೂಲಕ ಹೊರಗಡೆ ಇರುವ ಸೂಚನಾಫಲಕದಲ್ಲಿಯೂ ನಮೂದಿಸಿರುತ್ತಾರೆ.

ಶಾಲಿನಿ : ಎಲ್ಲರೂ ನಾಲ್ಕನೆಯ ಫ್ಲಾಟ್‌ಫಾರಂಗೆ ನಡೆಯಿರಿ. ಅಲ್ಲಿಂದ ನಮ್ಮ ರೈಲು ಹೊರಡುತ್ತದೆ.

ಶಿಕ್ಷಕರು : ಇಲ್ಲಿ ನೋಡಿ. ಪ್ರಯಾಣಿಕರ ಅನುಕೂಲಕ್ಕಾಗಿ ವಿಶ್ರಾಂತಿ ಕೊಠಡಿ, ಲಗೇಜು ರೂಂ, ಶೌಚಾಲಯ, ಕುಡಿಯುವ ನೀರು, ಹೋಟೆಲ್ ಇತ್ಯಾದಿ ವ್ಯವಸ್ಥೆಗಳೂ ಇವೆ.

ಥಾಮಸ್ : ಗುರುಗಳೇ! ಈ ರೀತಿ ಕಬ್ಬಿಣದ ಕಂಬಿಗಳನ್ನು ಒಂದರ ಪಕ್ಕ ಒಂದರಂತೆ ಏಕೆ ಜೋಡಿಸಿದ್ದಾರೆ?

ಶಿಕ್ಷಕರು : ಅವು ರೈಲು ಕಂಬಿಗಳು. ಆ ಕಂಬಿಗಳ ಮೇಲೆಯೇ ರೈಲು ಚಲಿಸುವುದು.

ಮಕ್ಕಳು : ಹಾಗಾದರೆ ರೈಲು ಹೋಗಬೇಕಾದರೆ ಕಂಬಿ ಇರಲೇ ಬೇಕೇ ಗುರುಗಳೇ?

ಶಿಕ್ಷಕರು : ಹೌದು. ಬಸ್ಸುಗಳಂತೆ ಇವು ರಸ್ತೆಯಲ್ಲಿ ಚಲಿಸುವುದಿಲ್ಲ. ರೈಲುಗಳಿಗೆ ಕಂಬಿಗಳು ಬೇಕೇ ಬೇಕು.

ಪಲ್ಲವಿ : ಕಂಬಿಗಳು ಇದ್ದಿದ್ದರೆ ನಮ್ಮ ಊರಿಗೂ ರೈಲು ಬರುತ್ತಿತ್ತು ಅಲ್ಲವೇ ಗುರುಗಳೇ?

ಶಿಕ್ಷಕರು : ಹೌದು ಪಲ್ಲವಿ! ನೀನು ಹೇಳುತ್ತಿರುವುದು ಸರಿಯಾಗಿದೆ.

5th-std_Term 2_Kannada_Reader_CBSE_KM.indd 70 7/9/2019 3:26:45 PM



ಬೇಗಂ : ಗುರುಗಳೇ, ನಾನು ಇದುವರೆಗೂ ರೈಲನ್ನೇ ನೋಡಿರಲಿಲ್ಲ. ಅದರ ಶಬ್ದವನ್ನೂ ಕೇಳಿರಲಿಲ್ಲ! ಅಬ್ಬಬ್ಬಾ! ಎಷ್ಟು ಉದ್ದವಾಗಿದೆ ಈ ರೈಲು!

(ಮಕ್ಕಳ ಮಾತುಗಳನ್ನು ಕೇಳುತ್ತಿದ್ದ ಕೆನಡಿ, ಮಧು, ರಾಜು ಮಕ್ಕಳೊಂದಿಗೆ ಸಂಭಾಷಣೆಯಲ್ಲಿ ತೊಡಗಿದರು)

ಕೆನಡಿ : ನಿಮ್ಮದು ಯಾವ ಊರು ಮಕ್ಕಳೇ? ಎಲ್ಲಿಗೆ ಪ್ರವಾಸ ಹೊರಟಿರುವಿರಿ?

ಕಾವ್ಯ : ನಾವು ಹೊಸೂರು ಶಾಲೆಯವರು. ಶ್ರವಣಬೆಳಗೊಳಕ್ಕೆ ಪ್ರವಾಸ ಹೊರಟಿದ್ದೇವೆ.

ಕೆನಡಿ : ಹೌದೇ? ಎಲ್ಲರೂ ನೋಡಲೇ ಬೇಕಾದ ಸ್ಥಳ. ನಾನೂ ರಾಜು ಮತ್ತು ಮಧು ಈಗಾಗಲೇ ಶ್ರವಣಬೆಳಗೊಳಕ್ಕೆ ಹೋಗಿ ಬಂದಿದ್ದೇವೆ.

ಅಬ್ದುಲ್ : ನಾವು ಇದೇ ಮೊದಲ ಬಾರಿಗೆ ಅಲ್ಲಗೆ ಹೋಗುತ್ತಿರುವುದು.

ಮಧು : ಎಂತಹ ಅದ್ಭುತವಾದ ತಾಣ. ನನಗಂತೂ ತುಂಬ ಖುಷಿಯಾಯಿತು.

ಕೆನಡಿ : ಅಲ್ಲಿನ ಏಕಶಿಲಾ ಗೊಮ್ಮಟಮೂರ್ತಿ ಆ ಬೆಟ್ಟದ ಮೇಲಿಂದ ಕಾಣುವ ಪ್ರಕೃತಿ ಸೌಂದರ್ಯ... ಗಳನ್ನು ನೋಡಲು ಎರಡು ಕಣ್ಣುಗಳು ಸಾಲವು.

ಮಕ್ಕಳು : ಬೆಟ್ಟ ಹತ್ತುವಾಗ ನಿಮಗೆ ಕಷ್ಟ ಅನ್ನಿಸಲಿಲ್ಲವೇ?

ಮಧು : ಬೆಟ್ಟ ಹತ್ತುವ ಹುಮ್ಮಸ್ಸಿನಲ್ಲಿ ಕಷ್ಟ ಗೊತ್ತಾಗಲೇ ಇಲ್ಲ.

ಬೇಗಂ : ಅಣ್ಣಾ! ಬೆಟ್ಟಕ್ಕೆ ಎಷ್ಟು ಮೆಟ್ಟಿಲುಗಳಿವೆ ?

ಮಧು : 650 ಮೆಟ್ಟಿಲುಗಳಿವೆ ಎಂದು ಅಲ್ಲಿ ಬರೆದಿದ್ದಾರೆ

ಕೌಸ್ತುಭ : ಬೆಟ್ಟದ ಮೇಲೆ ನೀವು ಏನೇನು ನೋಡಿದಿರಿ?

ಮಧು : ಮಕ್ಕಳೇ, ಬೆಳಗೊಳ ಬೆಟ್ಟದಲ್ಲಿ ಭರತ ಬಾಹುಬಲಿ ಹಾಗೂ ಇತರ ತೀರ್ಥಂಕರರ ಮೂರ್ತಿಗಳನ್ನು ನೋಡಿದೆವು. ಅವುಗಳನ್ನು ನೋಡುತ್ತಿದ್ದರೆ ಭಕ್ತಿಯು ಉಕ್ಕಿ ಬರುತ್ತದೆ. ಆ ಮೂರ್ತಿಗಳ ಮುಖದಲ್ಲಿ ಶಾಂತತೆಯ ಭಾವನೆಯು ಎದ್ದು ಕಾಣುತ್ತದೆ. ಅಲ್ಲಿ ಬಸದಿಗಳು ಸಹ ಇವೆ.

5th-std_Term 2_Kannada_Reader_CBSE_KM.indd 71 7/9/2019 3:26:45 PM



ಕಾವ್ಯ : ಗುರುಗಳೇ ಇವರು ಹೇಳಿದ ಸ್ಥಳಗಳ ಬಗ್ಗೆ ನಮಗೆ ಅಲ್ಲಿಗೆ ಹೋದ ಮೇಲೆ ವಿವರಿಸುವಿರಾ?

ಶಿಕ್ಷಕರು : ನಾವು ಈಗ ಅಲ್ಲಿಗೇ ಹೋಗುತ್ತಿದ್ದೇವಲ್ಲಾ! ಇನ್ನೂ ಚೆನ್ನಾಗಿ ನಿಮಗೆ ತಿಳಿಸುತ್ತೇನೆ!

ಕಾರ್ತಿಕ್ : ಅದೋ, ರೈಲು ಬಂದೇ ಬಿಟ್ಟಿತು.

ನಿರಂಜನ್ : ನಿಧಾನವಾಗಿ ಹೋಗಿ. ಅವಸರ ಮಾಡಬೇಡಿ. ರೈಲು ಇನ್ನೂ ಹತ್ತು ನಿಮಿಷ ಇಲ್ಲೇ ನಿಲ್ಲುತ್ತದೆ.

ಶಿಕ್ಷಕರು : ನಿಲ್ಲಿ... ನಿಲ್ಲಿ...! ನಾವು ಆರನೇ ಭೋಗಿ ಹತ್ತಬೇಕು. ಅದು ಎಲ್ಲಿ ನಿಲ್ಲುತ್ತದೆ ಎಂದು ನೋಡೋಣ!

ಮಕ್ಕಳು : ಇಲ್ಲಿ ನೋಡಿ ಗುರುಗಳೇ, ಆರು ಎಂದು ಬರೆದಿರುವ ಭೋಗಿ ಮುಂದೆ ಹೋಗುತ್ತಿದೆ.

ಶಿಕ್ಷಕರು : ಸರಿ ಬನ್ನಿ, ಅಲ್ಲಿಗೇ ಹೋಗಿ ಹತ್ತಿಕೊಳ್ಳೋಣ.

(ಎಲ್ಲರೂ ರೈಲು ಹತ್ತಿದರು. ಚುಕ್‌ಬುಕ್... ಚುಕ್‌ಬುಕ್... ಎಂದು ಶಬ್ದ ಮಾಡುತ್ತಾ ರೈಲು ಹೊರಟಿತು).

ದೇಶ ಸುತ್ತು, ಕೋಶ ಓದು

5th-std_Term 2_Kannada_Reader_CBSE_KM.indd 72 7/9/2019 3:26:46 PM

ಕಲಿಕಾ ಫಲ

- ನೀವು ಪ್ರವಾಸದಲ್ಲಿ ನೋಡಿದ ಸ್ಥಳಗಳ ಹೆಸರನ್ನು ಪಟ್ಟಿ ಮಾಡಿ.
- ನೀವು ನೋಡಿರುವ ವಾಹನಗಳ ಚಿತ್ರಗಳನ್ನು ಸಂಗ್ರಹಿಸಿ ಚಿತ್ರಕೋಶ ಸಿದ್ಧಪಡಿಸಿ.
- ನೀವು ಕೈಗೊಂಡ ಪ್ರವಾಸವನ್ನು ಕುರಿತು ನಿಮ್ಮ ಗೆಳೆಯ ಗೆಳತಿಯರ ಜೊತೆಗೆ ಸಂಭಾಷಣೆಯನ್ನು ಮಾಡಿ ಊಹಿಸಿ ಬರೆಯಿರಿ.

ಮೌಲ್ಯಮಾಪನ

ಓದೋಣ! ಚಿಂತಿಸೋಣ! ಬರೆಯೋಣ!

ಅ. ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.

1. ಇವರೆಲ್ಲರೂ ನಮ್ಮಂತೆಯೇ _____ ಹೊರಟಿರುವವರೇ ಗುರುಗಳೇ?

   ಅ) ಪ್ರಯಾಣಕ್ಕೆ ಆ) ಕೆಲಸಕ್ಕೆ
   ಇ) ಪ್ರವಾಸಕ್ಕೆ ಈ) ಶಾಲೆಗೆ

2. ಕಂಬಿಗಳ ಮೇಲೆ _____ ಚಲಿಸುತ್ತದೆ.

   ಅ) ಬಸ್ಸು ಆ) ವಿಮಾನ
   ಇ) ದೋಣಿ ಈ) ರೈಲು

3. ಮೂರ್ತಿಗಳ ಮುಖದಲ್ಲಿ _____ಯ ಭಾವನೆಯು ಎದ್ದು ಕಾಣುತ್ತದೆ!

   ಅ) ಶಾಂತತೆ ಆ) ವಿಧೇಯತೆ
   ಇ) ಕ್ರೂರತೆ ಈ) ಗಂಭೀರತೆ

4. **ಶೌಚಾಲಯ** ಪದವನ್ನು ಬಿಡಿಸಿ ಬರೆಯಿರಿ _____

   ಅ) ಶೌಚ + ಆಲಯ ಆ) ಶುಚಿ + ಆಲಯ
   ಇ) ಶೌಚಾ + ಲಯ ಈ) ಶೌಚ + ಲಾಯ

5. **ಆಯಾಸ** ಈ ಪದದ ಸಮಾನಾರ್ಥಕ ಪದ _____

   ಅ) ಅನಾಯಾಸ ಆ) ಆಸರೆ
   ಇ) ಬಳಲಿಕೆ ಈ) ಸೋಮಾರಿತನ

ಆ. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

ಅ) ಶಬ್ದವನ್ನು – -------- + ---------

ಆ) ಖುಷಿಯಾಯಿತು – -------- + ---------

5th-std_Term 2_Kannada_Reader_CBSE_KM.indd 73 7/9/2019 3:26:46 PM

ಇ. ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1) ಮಕ್ಕಳೆಲ್ಲರೂ ಎಲ್ಲಿಗೆ ಪ್ರವಾಸ ಹೋಗಲು ಸಿದ್ಧರಾದರು ?

2) 'ಫ್ಲಾಟ್‌ಫಾರಂ' ಎಂದರೇನು ?

3) ರೈಲ್ವೆ ನಿಲ್ದಾಣದಲ್ಲಿ ಮಕ್ಕಳು ಯಾರ ಜೊತೆ ಸಂವಾದ ನಡೆಸಿದರು?

4) ರೈಲು ಯಾವ ರೀತಿ ಶಬ್ದ ಮಾಡುತ್ತ ಚಲಿಸುತ್ತದೆ?

ಈ. ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು ?

1) 'ನಿಮ್ಮದು ಯಾವ ಊರು ಮಕ್ಕಳೇ?'

ಯಾರು _____

ಯಾರಿಗೆ _____

2) 'ಬೆಟ್ಟ ಹತ್ತುವಾಗ ನಿಮಗೆ ಕಷ್ಟ ಅನ್ನಿಸಲಿಲ್ಲವೇ?'

ಯಾರು _____

ಯಾರಿಗೆ _____

3) 'ಅದೋ, ರೈಲು ಬಂದೇ ಬಿಟ್ಟಿತು!'

ಯಾರು _____

ಯಾರಿಗೆ _____

ಉ. ಚಿಂತನಾಶೀಲ ಪ್ರಶ್ನೆ.

1) ನೀವು ಶಾಲೆಗೆ ಬರುವಾಗ ಕಂಡ ಸನ್ನಿವೇಶಗಳಲ್ಲಿನ ಸಂಭಾಷಣೆ ಮತ್ತು ಸಂವಾದಗಳನ್ನು ಆಲಿಸಿ ಅರ್ಥ ಮಾಡಿಕೊಂಡು ಬರೆಯಿರಿ.



5th-std_Term 2_Kannada_Reader_CBSE_KM.indd 74 7/9/2019 3:26:46 PM

ಘಟಕ ನಾಲ್ಕು

ಕನಸುಗಾರ ಕಲಾಂ!

ಉಪಪಠ್ಯ

– ಸಂಗ್ರಹ



ಹೈದರಾಬಾದ್‌ನಲ್ಲಿರುವ ನಿಜಾಂ ವೈದ್ಯಕೀಯ ವಿಜ್ಞಾನ ಸಂಶೋಧನಾ ಸಂಸ್ಥೆಯ ನಿರ್ವಾಹಕರಾದ ಡಾಕ್ಟರ್ ಬಿ.ಎನ್.ಪ್ರಸಾದ್ ಒಮ್ಮೆ ಕಲಾಂ ಅವರ ಭೇಟಿಗೆ ಬಂದಿದ್ದರು. ಆಗ ರಾಕೆಟ್ ತಯಾರಿಕೆಯಲ್ಲಿ ಕಲಾಂ ತುಂಬಾ ಕಾರ್ಯಪ್ರವೃತ್ತರಾಗಿದ್ದರು. ರಾಕೆಟ್‌ನ ಮುಂದಿನ ಮೂಗಿನಂತಹ ಚೂಪಾದ ಭಾಗ ಕಡಿಮೆ ತೂಕ ಇರಬೇಕು, ಉಷ್ಣವನ್ನು ತಾಳಿಕೊಳ್ಳುವಷ್ಟು ಗಟ್ಟಿಯಾಗಿಯೂ ಇರಬೇಕು. ಇದಕ್ಕಾಗಿ ಕಾರ್ಬನ್–ಕಾಂಪೋಸಿಟ್ ಮೆಟೀರಿಯಲ್‌ನಲ್ಲಿ ಅದನ್ನು ತಯಾರಿಸಿದ್ದರು. ಪ್ರಸಾದ್ ಅವರು ಅಲ್ಲಿಗೆ ಬಂದಾಗ ಆ ಲೋಹದ ಒಂದು ತುಂಡು ಕಲಾಂ ಅವರ ಕೊಠಡಿಯಲ್ಲಿತ್ತು.

ಕಲಾಂ ತಮ್ಮ ಪ್ರಯೋಗಾಲಯದಲ್ಲಿದ್ದ ವಸ್ತುಗಳನ್ನು ಒಂದೊಂದಾಗಿ ತೋರಿಸುತ್ತಾ ವಿವರಿಸಿದರು. ಕ್ಷಿಪಣಿಯಲ್ಲಿ ಬಳಸುವುದಕ್ಕಾಗಿ ತಾವು ತಯಾರಿಸಿದ ಹಗುರವಾದ ಆ ವಸ್ತುವನ್ನು ಅವರು ಆ ಮೂಳೆ ತಜ್ಞರಾದ ಆ ಡಾಕ್ಟರಿಗೆ ತೋರಿಸಿದರು. ನೋಡಲು ದೊಡ್ಡದಾಗಿದ್ದರೂ ತೂಕ ಕಡಿಮೆ ಇದ್ದ ಆ ವಸ್ತುವನ್ನು ಕೈಯಲ್ಲಿ ಎತ್ತಿ ನೋಡಿದ ಪ್ರಸಾದ್ ಅವರು, 'ಬಲು ಹಗುರವಾಗಿದೆಯಲ್ಲಾ!' ಎಂದು ಉದ್ಗರಿಸಿದರು. ಕೂಡಲೇ ಅವರು ಕಲಾಂ ಅವರನ್ನು ಹೈದರಾಬಾದಿನಲ್ಲಿರುವ ತಮ್ಮ 'ನಿಜಾಂ ಆಸ್ಪತ್ರೆ'ಗೆ ಬರುವಂತೆ ಹೇಳಿ, ಅಂದೇ ಅವರನ್ನು ಜೊತೆಯಲ್ಲಿ ಕರೆದುಕೊಂಡು ಹೋದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ರೋಗಿಗಳನ್ನು ತೋರಿಸಿದರು. ಅಲ್ಲಿದ್ದವರಲ್ಲಿ ಹೆಚ್ಚಿನವರು ಮಕ್ಕಳು. ಅವರಲ್ಲಿ ಕೆಲವರು ಪೋಲಿಯೋ ಅಥವಾ ಇನ್ನಿತರ ಬೇರೆ ಬೇರೆ ಕಾರಣಗಳಿಂದ ಕಾಲಿನ ನ್ಯೂನತೆಗೆ

5th-std_Term 2_Kannada_Reader_CBSE_KM.indd 75 7/9/2019 3:26:46 PM

ಒಳಗಾಗಿದ್ದರು. 'ಈ ಮಕ್ಕಳಿಗೆ ನಾಲ್ಕು ಕೆಜಿ ತೂಕದಲ್ಲಿ ಕ್ಯಾಲಿಬರ್ ಶೂಗಳನ್ನು ಕೊಡುತ್ತಿದ್ದೇವೆ. ಅವರು ಅದನ್ನು ಎತ್ತಿಕೊಂಡು ನಡೆಯಲು ತುಂಬ ಕಷ್ಟ ಪಡುತ್ತಿದ್ದಾರೆ' ಎಂದು ಕಲಾಂ ಅವರ ಮುಂದೆ ಹಪಹಪಿಸಿದರು. ಮಕ್ಕಳು ಭಾರವಾದ ಕಾಲನ್ನು ಎತ್ತಿ ಇಟ್ಟು ನಡೆಯಲು ಬಲು ಕಷ್ಟಪಡುತ್ತಿದ್ದರು. 'ಇವರ ಕಷ್ಟವನ್ನು ನಿವಾರಿಸಲು ನಿಮ್ಮಿಂದ ಸಾಧ್ಯವಿಲ್ಲವೇ?' ಎಂದು ಕೇಳಿದರು ಡಾಕ್ಟರ್.



ರೋಗಿಗಳ ವೇದನೆ, ವೈದ್ಯರ ಕಾಳಜಿ ಇವು ಕಲಾಂ ಅವರ ಮನಸ್ಸನ್ನು ಕಲಕಿದವು. 'ಜನರ ನೆರವಿಗೆ ಬಾರದ ವಿಜ್ಞಾನ, ತಂತ್ರಜ್ಞಾನಗಳಿಂದ ಏನು ಪ್ರಯೋಜನ?' ಎನ್ನಿಸಿತು ಅವರಿಗೆ. ಆ ಕ್ಷಣದಿಂದಲೇ ಅದರ ಬಗ್ಗೆ ಅವರು ಚಿಂತಿಸಲು ತೊಡಗಿದರು. ಪ್ರಯೋಗಾಲಯಕ್ಕೆ ಹೋಗಿ ರಾಕೆಟ್‌ಗೆ ಬಳಸುವ ಆ ಮೆಟೀರಿಯಲ್‌ನಲ್ಲಿ ಕ್ಯಾಲಿಬರ್‌ಗಳನ್ನು ತಯಾರಿಸುವ ಪ್ರಯೋಗವನ್ನಾರಂಭಿಸಿದರು. ಕೇವಲ ಮೂರು ವಾರಗಳಲ್ಲೇ ಅದನ್ನು ತಯಾರಿಸಲು ಅವರಿಂದ ಸಾಧ್ಯವಾಯಿತು! ಅದು ತಯಾರಾದ ಕೂಡಲೇ ನಿಜಾಂ ಆಸ್ಪತ್ರೆಗೆ ಅವುಗಳನ್ನು ತೆಗೆದುಕೊಂಡು ಹೋದರು. ಕೇವಲ ಮುನ್ನೂರು ಗ್ರಾಂ ತೂಕವಿದ್ದ ಆ ಕ್ಯಾಲಿಬರ್‌ಗಳನ್ನು ಧರಿಸಿ ಪೋಲಿಯೋ ಪೀಡಿತ ಮಕ್ಕಳು ನಡೆದಾಗ ಅವರು ಪಟ್ಟ ಸಂತೋಷಕ್ಕೆ ಅಳತೆಯೇ ಇರಲಿಲ್ಲ. ಇದು ಅವರು ಮೊದಲು ಧರಿಸುತ್ತಿದ್ದುದರಲ್ಲಿ ಹತ್ತರಲ್ಲಿ ಒಂದು ಅಂಶಕ್ಕಿಂತಲೂ ಕಡಿಮೆ ತೂಕವಿತ್ತು. ಇದನ್ನು ಧರಿಸಿದ ಹುಡುಗನ ಕಣ್ಣಿನಲ್ಲಿದ್ದ ಸಂತೋಷವನ್ನು ಕಂಡು ವೈದ್ಯರ ಹೃದಯ ತುಂಬಿ ಬಂತು! ಕಲಾಂ ಅವರ ಆನಂದಕ್ಕಂತೂ ಪಾರವೇ ಇರಲಿಲ್ಲ. ಭಾರತದಲ್ಲಿ ಈಗ ಒಂದು ಲಕ್ಷಕ್ಕಿಂತ ಹೆಚ್ಚು ಮಕ್ಕಳಿಗೆ ಈ ಕ್ಯಾಲಿಬರ್ ಶೂಗಳನ್ನು ಅಳವಡಿಸಲಾಗಿದೆ.



ರಾಕೆಟ್, ಉಪಗ್ರಹ, ಅಣುಗುಂಡುಗಳಿಗಿಂತ ತಮ್ಮ ಅತ್ಯುತ್ತಮ ಸಾಧನೆಯಾಗಿ ಕಲಾಂ ಪರಿಭಾವಿಸುವುದು ಈ ಸಂಶೋಧನೆಯನ್ನೇ!

ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರು ತಮಿಳುನಾಡಿನ ರಾಮೇಶ್ವರಂನಲ್ಲಿ ಜನಿಸಿದ ಒಬ್ಬ ಅದ್ಭುತ ಕನಸುಗಾರ. ಇವರು ಬಾಲಕರಾಗಿದ್ದಾಗ ಕಡಲ ತೀರದಲ್ಲಿ ಕುಳಿತು ತೀರವನ್ನು ವೀಕ್ಷಿಸುತ್ತಿದ್ದರು. ದಡದಲ್ಲಿದ್ದ ಹಕ್ಕಿಗಳು ನೆಲದಿಂದ ಮೇಲಕ್ಕೆ ಹಾರುತ್ತಿದ್ದವು. ಪಟಪಟನೆ ರಕ್ಕೆ ಬಡಿದು ಒಂದು ಕ್ಷಣ ಹಾಗೆಯೇ ಅವು ತೇಲುತ್ತಿದ್ದವು. ಮತ್ತೆ ಮೇಲೆ ಹಾರುತ್ತಿದ್ದವು. ಇದನ್ನು ನೋಡುತ್ತಿದ್ದ ಅವರು, 'ಮುಂದೊಂದು ದಿನ ನಾನೂ ಆಕಾಶದಲ್ಲಿ ಇವುಗಳಂತೆ ಹಾರಾಡುತ್ತೇನೆ' ಎಂದು ಕನಸು ಕಾಣುತ್ತಿದ್ದರು.

5th-std_Term 2_Kannada_Reader_CBSE_KM.indd 76 7/9/2019 3:26:47 PM

ಈ ಕನಸುಗಾರನೇ ಮುಂದೆ ಭಾರತದ ಶ್ರೇಷ್ಠ ವಿಜ್ಞಾನಿಯಾಗಿ ಬೆಳೆದರು. ರಾಕೆಟ್ ಹಾಗೂ ಕ್ಷಿಪಣಿ ಉಡಾವಣೆಯಲ್ಲಿ ಮಹತ್ವದ ಸಾಧನೆ ಮಾಡಿದರು. ತಂತ್ರಜ್ಞಾನದ ಕ್ಷೇತ್ರದಲ್ಲಿ ಭಾರತದ ಸಾಧನೆಯನ್ನು ಗಗನದೆತ್ತರಕ್ಕೆ ಏರಿಸಿದರು. ದೇಶದ ಅತ್ಯುನ್ನತ ಸ್ಥಾನವಾದ ರಾಷ್ಟ್ರಪತಿ ಹುದ್ದೆಯನ್ನೂ ಅಲಂಕರಿಸಿದರು.

ಕಲಾಂ ಅವರ ತಂದೆ ಜೈನುಲ್ಲಾಬುದ್ದೀನ್; ತಾಯಿ ಆಶಿಯಮ್ಮ. ಕಲಾಂ ಅವರು ತಮ್ಮ ಜೀವನದ ಅನುಭವಗಳನ್ನು 'ಅಗ್ನಿಯ ರೆಕ್ಕೆಗಳು' ಎಂಬ ಆತ್ಮಕಥನದಲ್ಲಿ ದಾಖಲಿಸಿದ್ದಾರೆ. ಗುರು ಹಿರಿಯರು ಇವರಲ್ಲಿ ಕನಸುಗಳನ್ನೂ, ಆತ್ಮವಿಶ್ವಾಸವನ್ನೂ ಬಾಲ್ಯದಲ್ಲಿ ತುಂಬುತ್ತಿದ್ದರು. ಆದುದರಿಂದ ಕಲಾಂ ಇಂದಿನ ಮಕ್ಕಳಿಗೆ 'ಕನಸು ಕಾಣಿರಿ' ಎಂದು ಪ್ರೋತ್ಸಾಹಿಸುತ್ತಿದ್ದರು. ಇವರ ಸಾಧನೆಯನ್ನು ಗಮನಿಸಿ, ಜಗತ್ತಿನ ಸುಮಾರು 20ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳು ಇವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಸನ್ಮಾನಿಸಿವೆ. ಭಾರತ ಸರ್ಕಾರ ಪದ್ಮಭೂಷಣ, ಪದ್ಮವಿಭೂಷಣ, ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿದೆ. ಇವರು ದಿನಾಂಕ 27.07.2015ರಂದು ವಿಧಿವಶರಾದರು.

ಕನಸುಗಳೇ ಆಲೋಚನೆಗಳು, ಕೃತಿ ಆಲೋಚನೆಗಳ ಫಲ

ಪದಗಳ ಅರ್ಥ

ಹೆಮ್ಮೆ–ಹಿರಿಮೆ, ಅಭಿಮಾನ; ವೇದನೆ–ನೋವು, ಯಾತನೆ; ಶ್ರಮಿಸು–ದುಡಿ, ಕಷ್ಟಪಡು; ವೀಕ್ಷಿಸು–ನೋಡು, ಅವಲೋಕಿಸು; ಗಗನ–ಆಕಾಶ, ಆಗಸ, ಭಾನು; ತೀರ–ದಡ; ಉಡಾವಣೆ–ಹಾರಿಸು; ಪ್ರೋತ್ಸಾಹಿಸು–ಹುರಿದುಂಬಿಸು, ಉತ್ತೇಜಿಸು.

ಟಿಪ್ಪಣಿ

ಕ್ಷಿಪಣಿ : ದೂರದಿಂದ ನಿಯಂತ್ರಿಸಲ್ಪಡುವ ಸ್ಫೋಟಕವಾಗಿ ಉಡಾಯಿಸುವ ಸಾಧನ

ಕ್ಯಾಲಿಬರ್ : ಕೈಕಾಲುಗಳಿಗೆ ಜೋಡಿಸುವ ಕೃತಕ ಸಾಧನ

ಚಿಕಿತ್ಸೆ : ರೋಗವನ್ನು ಗುಣಪಡಿಸಲು ಮಾಡುವ ವೈದ್ಯೋಪಚಾರ

ಪ್ರಯೋಗಾಲಯ : ಸಂಶೋಧನೆಯನ್ನು ಮಾಡುವ ಕೊಠಡಿ, ವೈಜ್ಞಾನಿಕ ಪರೀಕ್ಷೆಗಳನ್ನು ನಡೆಸುವ ಸ್ಥಳ.

ಮೌಲ್ಯಮಾಪನ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಅಬ್ದುಲ್ ಕಲಾಂರವರ ತಂದೆ–ತಾಯಿಗಳ ಹೆಸರೇನು ?

2) ರೋಗಿಗಳ ಕಾಲಿಗೆ ಏನನ್ನು ಅಳವಡಿಸಲಾಗಿತ್ತು ?

3) ಆಸ್ಪತ್ರೆಯಲ್ಲಿದ್ದ ರೋಗಿಗಳಿಗೆ ಏನಾಗಿತ್ತು ?

4) ವಿಜ್ಞಾನಿಯನ್ನು ವೈದ್ಯರು ಯಾವ ಆಸ್ಪತ್ರೆಗೆ ಕರೆದುಕೊಂಡು ಹೋದರು ?

5) ಪ್ರಯೋಗಾಲಯಕ್ಕೆ ಭೇಟಿ ಕೊಟ್ಟವರು ಯಾರು ?

6) ಕಲಾಂ ಅವರ ಆತ್ಮಕಥನ ಕೃತಿಯ ಹೆಸರೇನು ?

ಚಿಂತನಾಶೀಲ ಪ್ರಶ್ನೆ.

ಅಬ್ದುಲ್ ಕಲಾಂ ಅವರ ಬದುಕಿನ ಸಂಗತಿಗಳನ್ನು ತಿಳಿದುಕೊಂಡು ಬರೆಯಿರಿ.

5th-std_Term 2_Kannada_Reader_CBSE_KM.indd 77 7/9/2019 3:26:47 PM

ಘಟಕ ನಾಲ್ಕು

ವ್ಯಾಕರಣ

ಸಂಯುಕ್ತಾಕ್ಷರಗಳು

ಅಪ್ಪ, ಅಮ್ಮ, ಅಕ್ಷರ, ಸ್ತ್ರೀ ಮುಂತಾದ ಪದಗಳನ್ನು ನಾವು ಮಾತನಾಡುವಾಗ ಬಳಸುತ್ತೇವೆ. 'ಅಪ್ಪ' ಪದದಲ್ಲಿ ಅ, ಪ್, ಪ್, ಅ – ಎಂಬ ನಾಲ್ಕು ಅಕ್ಷರಗಳು ಸೇರಿಕೊಂಡಿವೆ. ಮೇಲ್ನೋಟಕ್ಕೆ ಎರಡೇ ಅಕ್ಷರಗಳು ಇವೆಯೆನ್ನಿಸುತ್ತವೆಯಾದರೂ, ಮೊದಲನೇ ಅಕ್ಷರ. ಸ್ವರಾಕ್ಷರ. ಎರಡನೇ ಅಕ್ಷರದಲ್ಲಿ ಪ್, ಪ್, ಅ ಎಂಬ ಮೂರು ಅಕ್ಷರಗಳಿವೆ. ಅವುಗಳಲ್ಲಿ ಎರಡು ವ್ಯಂಜನ ಹಾಗೂ ಒಂದು ಸ್ವರಾಕ್ಷರ. ಹೀಗೆ ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳಿಗೆ ಒಂದು ಸ್ವರ ಸೇರಿ ಆಗುವ ಅಕ್ಷರವೇ ಸಂಯುಕ್ತಾಕ್ಷರ. ಇದನ್ನು ದ್ವಿತ್ವಾಕ್ಷರ ಅಥವಾ ಒತ್ತಕ್ಷರ ಎಂತಲೂ ಕರೆಯುವರು.

ಸಂಯುಕ್ತಾಕ್ಷರಗಳಲ್ಲಿ ಸಜಾತೀಯ ಸಂಯುಕ್ತಾಕ್ಷರ ಹಾಗೂ ವಿಜಾತೀಯ ಸಂಯುಕ್ತಾಕ್ಷರ ಎಂದು ಎರಡು ವಿಧಗಳುಂಟು.

ಸಜಾತೀಯ ಸಂಯುಕ್ತಾಕ್ಷರ

ಅಪ್ಪ, ಅಮ್ಮ, ಲೆಕ್ಕ, ಹಗ್ಗ... ಮೊದಲಾದ ಪದಗಳನ್ನು ಗಮನಿಸಿದಾಗ ಇಲ್ಲಿರುವ ಪ್ರತಿಯೊಂದು ಸಂಯುಕ್ತಾಕ್ಷರದಲ್ಲೂ ಒಂದೇ ಜಾತಿಯ ಎರಡೆರಡು ವ್ಯಂಜನಗಳಿವೆ. ಹೀಗೆ ಒಂದೇ ಜಾತಿಯ ಎರಡು ವ್ಯಂಜನಗಳು ಒಟ್ಟಿಗೆ ಸೇರಿ ಆಗುವ ಸಂಯುಕ್ತಾಕ್ಷರವೇ ಸಜಾತೀಯ ಸಂಯುಕ್ತಾಕ್ಷರ.

ವಿಜಾತೀಯ ಸಂಯುಕ್ತಾಕ್ಷರ

ಅಷ್ಟ, ರಾಷ್ಟ್ರ, ಆರ್ಯ, ಅಕ್ಷರ, ದ್ವಾರ, ಕ್ಷಿಪಣಿ, ಅಸ್ತ್ರ ಈ ಪದಗಳಲ್ಲಿರುವ ಪ್ರತಿಯೊಂದು ಸಂಯುಕ್ತಾಕ್ಷರದಲ್ಲೂ ಬೇರೆ ಬೇರೆ ಜಾತಿಯ ವ್ಯಂಜನಗಳು ಒಟ್ಟಿಗೆ ಸೇರಿ ಆಗುವ ಸಂಯುಕ್ತಾಕ್ಷರವೇ ವಿಜಾತೀಯ ಸಂಯುಕ್ತಾಕ್ಷರ.

5th-std_Term 2_Kannada_Reader_CBSE_KM.indd 78 7/9/2019 3:26:47 PM

ಘಟಕ ಐದು

ಕಲೆ ಮತ್ತು ಸಂಸ್ಕೃತಿಯ ಪರಂಪರೆ

ಪದ್ಯ	:	ನಮ್ಮೂರು	– ಜೋಳದರಾಶಿ ದೊಡ್ಡನಗೌಡರು
ಗದ್ಯ	:	ಮೆಚ್ಚಿನ ಗೊಂಬೆ	– ಸಂಗ್ರಹ
ಉಪಪಠ್ಯ	:	ಕರಗ ಉತ್ಸವ	– ಡಾ. ಎಂ. ಸುಮಿತ್ರ
ವ್ಯಾಕರಣ	:	ಲೇಖನ ಚಿಹ್ನೆಗಳು	



ಕಲಿಕಾ ಉದ್ದೇಶಗಳು

- ಪದ್ಯವನ್ನು ತಪ್ಪಿಲ್ಲದೆ ಸರಿಯಾಗಿ ರಾಗಬದ್ಧವಾಗಿ ಹಾಡುವುದು
- ವಿದ್ಯಾರ್ಥಿಗಳು ಕಲೆ ಮತ್ತು ವಾಸ್ತುಶಿಲ್ಪವನ್ನು ಅರ್ಥೈಸಿಕೊಳ್ಳುವರು.
- ಮಕ್ಕಳು ವಿವಿಧ ಕಲಾ ಪ್ರಕಾರಗಳನ್ನು ತಿಳಿದುಕೊಳ್ಳುವರು.
- ಮಕ್ಕಳು ವಿವಿಧ ಗೊಂಬೆಗಳನ್ನು ಸಂಗ್ರಹಿಸುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವರು.

5th-std_Term 2_Kannada_Reader_CBSE_KM.indd 79 7/9/2019 3:26:47 PM

ಘಟಕ ಐದು

ನಮ್ಮೂರು

ಪದ್ಯ

– ಜೋಳದರಾಶಿ ದೊಡ್ಡನಗೌಡರು

ನಮ್ಮೂರು ಇದು ನಮ್ಮೂರು
ಮುತ್ತಿಗಿಂತ ಲೇಸು ನಮ್ಮ ಜೋಳದ ರಾಶಿ
ಬಡವಿಗೆ ಮುತ್ತು ಲಕ್ಷಣ
ಒಡಲಿಗೆ ಜೋಳ ಪ್ರಾಣ
ಕಡುಬಡವ ಮೊದಲಾಗಿ ಶ್ರೀಮಂತ ಕಡೆಯಾಗಿ
ಎಲ್ಲರಿಗೆ ಜೀವಶಕ್ತಿ ನೀಡುವ ಜೋಳದ ರಾಶಿ ॥1॥

ನಮ್ಮೂರು ನೀರು ತೀರ್ಥ
ನಮ್ಮೂರು ನೆಲ ಕ್ಷೇತ್ರ
ನಮ್ಮೂರು ದೈವ ರಾಮೇಶ್ವರನು ಕಾಶಿ ವಿಶ್ವೇಶ್ವರನು
ನಮ್ಮೂರು ರೈತರು ಶಿವಶರಣ ಕಾಯಕದವರು ॥2॥

ಲಲಿತ ಕಲೆ ನಾಟ್ಯಗಳು
ಬೈಲಾಟ ಭಜನೆಗಳು
ಒಲವಿಂದ ಅರಬರು ಬಂದರು ಲೆಕ್ಕಿಸದೆ
ಕಲೆಯ ಪೋಷಿಸಿ ನಲಿದ ರಸಿಕರು ನಮ್ಮವರು ॥3॥

ಸಣ್ಣ ಊರಾದರೇನು
ಮಣ್ಣಿನ ಗುಣ ಘನ
ಗಣ್ಯ ಗಾಯಕ ನಟ ಕವಿ ಗಮಕಿಯನ್ನಿತ್ತ
ಗಣ್ಯ ದೇಶದ ಖ್ಯಾತಿ ನಮ್ಮೂರಿತ್ತುದು ನೋಡ ॥4॥

ಪ್ರಶ್ನೆ ಫಲಾನುಭವರು
ಜ್ಯೋತಿರ್ವಿದ್ವಾಂಸರು
ಆಂಧ್ರ ಕರ್ನಾಟಕದ ಗಡಿನಾಡ ಖ್ಯಾತರು
ಸುಂದರ ರಾಮೇಶ್ವರನ ಜೋಳದ ರಾಶಿಯವರು ॥5॥

ನಮ್ಮೂರೇ ನಮಗೆ ಸ್ವಗತ
ಬಕಾಸುರರಿದ್ದರೂ
ಏಕಚಕ್ರ ನಗರಿಯ ಜನ ಅಲ್ಲಿಯೇ ನೆಲೆಸಿರಲಿಲ್ಲವೇ?
ಅದು ನಮ್ಮೂರೆಂಬ ಅಭಿಮಾನ! ॥6॥

5th-std_Term 2_Kannada_Reader_CBSE_KM.indd 80 7/9/2019 3:26:47 PM

ಪದಗಳ ಅರ್ಥ

ಕ್ಷಾಮ–ಬರಗಾಲ, ದುರ್ಭಿಕ್ಷ, ಅಭಾವ, ಕೊರತೆ; ಒಡಲು–ಹೊಟ್ಟೆ, ಗರ್ಭ, ದೇಹ, ಶರೀರ; ಬೈಲಾಟ–ಬಯಲಾಟ, ಒಂದು ಜಾನಪದ ಕಲಾಪ್ರಕಾರ; ರಸಿಕ–ರಸಾನುಭವ ಹೊಂದಬಲ್ಲವ, ರಸಜ್ಞ, ಕಲೆಯನ್ನು ಆಸ್ವಾದಿಸುವವ.

ಕವಿ – ಕಾವ್ಯ ಪರಿಚಯ

ಶರಣ ಕವಿ ಎಂದೇ ಹೆಸರಾಗಿರುವ ಜೋಳದ ರಾಶಿ ದೊಡ್ಡನಗೌಡರು ಕವಿ, ಗಮಕಿ ಹಾಗೂ ನಟರೂ ಆಗಿದ್ದರು. ಇವರು ಬಳ್ಳಾರಿ ಜಿಲ್ಲೆಯ ಜೋಳದ ರಾಶಿ ಗ್ರಾಮದಲ್ಲಿ 27.03.1910ರಲ್ಲಿ ಜನಿಸಿದರು. 'ನಂದೇ ನಾನೋದಿದೆ' ಇದು ಇವರ ಆತ್ಮಕಥೆ. 'ನೀವೇನಂತೀರಿ?' ವಿಚಾರ ಚಿಂತನೆ. ತುಕಾರಾಮ, ಕನಕದಾಸ, ಕ್ರಾಂತಿಪುರುಷ ಬಸವಣ್ಣ ಇವು ಇವರ ನಾಟಕಗಳು. ನಗ್ನ ಹಂಪೆ, ರಸವರ್ಷ, ರಾಮೇಶನ ವಚನಗಳು, ಬಯಲ ಗಳಿಕೆಯ ಬೆಳಕು ಮುಂತಾದವು ಇವರ ಪ್ರಮುಖ ಕೃತಿಗಳು. ರಾಜ್ಯ ಸಂಗೀತ ಅಕಾಡೆಮಿ ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಇವರಿಗೆ ಲಭ್ಯವಾಗಿವೆ. ಇವರು 1994ರಲ್ಲಿ ನಿಧನರಾದರು.

ಕಲಿಕಾ ಫಲ

- ಈ ಪದ್ಯವನ್ನು ಸರಿಯಾದ ಉಚ್ಚಾರಣೆಯೊಂದಿಗೆ ಓದಿ ತಿಳಿದುಕೊಳ್ಳುವುದು.
- ಈ ಕವಿತೆಯನ್ನು ರಾಗಬದ್ಧವಾಗಿ ಹಾಡಿರಿ.
- ಪದ್ಯದಲ್ಲಿ ಕಂಡು ಬರುವ ಕಲೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಪದಗಳನ್ನು ಸಂಗ್ರಹಿಸಿ.
- ನಾಡಿನ ಸಂಸ್ಕೃತಿಗೆ ಸಂಬಂಧಿಸಿದಂತೆ ಇನ್ನಿತರ ಕವನಗಳನ್ನು ಸಂಗ್ರಹಿಸುವುದು.

ಮೌಲ್ಯಮಾಪನ

ಓದೋಣ! ಚಿಂತಿಸೋಣ! ಬರೆಯೋಣ!

ಅ. ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ

1. ನಮ್ಮೂರು ಈ ಪದವನ್ನು ಬಿಡಿಸಿ ಬರೆದಾಗ

   ಅ) ನಮ್ಮ+ಊರು ಆ) ನಮ್ಮವು+ಊರು

   ಇ) ನಮ್ಮು+ಊರು ಈ) ನಮ್ಮಾ+ಊರು

2. ಕಡೆ+ಆಗಿ ಈ ಪದವನ್ನು ಸೇರಿಸಿ ಬರೆದಾಗ_____

   ಅ) ಕಡೆವಾಗಿ ಆ) ಕಡೆಹಾಗಿ

   ಇ) ಕಡೆಯಾಗಿ ಈ) ಕಡೆಆಗಿ

3. ಬಡವಿಗೆ _____ ಲಕ್ಷಣ.

   ಅ) ಹತ್ತು ಆ) ತುತ್ತು

   ಇ) ಮುತ್ತು ಈ) ಕತ್ತು

5th-std_Term 2_Kannada_Reader_CBSE_KM.indd 81 7/9/2019 3:26:48 PM

4 ಸಣ್ಣ ಊರಾದರೇನು ಮಣ್ಣಿನ ಗುಣ _____

ಅ) ರಣ ಆ) ಗಣ

ಇ) ಕಣ ಈ) ಘನ

5 ಒಡಲು ಪದದ ಸಮಾನಾರ್ಥಕ ಪದ _____

ಅ) ನೇಹ ಆ) ದೇಹ

ಇ) ಗಿಡಲು ಈ) ದಾಹ

ಆ. ಹೊಂದಿಸಿ ಬರೆಯಿರಿ.

1. ಮುತ್ತಿಗಿಂತ ಲೇಸು – ಬೈಲಾಟ
2. ನಮ್ಮೂರು ನೀರು – ಘನ
3. ಮಣ್ಣಿನ ಗುಣ – ತೀರ್ಥ
4. ನಮ್ಮೂರ ನೆಲೆ – ಜೋಳದ ರಾಶಿ
5. ಬಯಲಾಟ – ಕ್ಷೇತ್ರ

ಇ. ಈ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ನಮ್ಮೂರು ಪದ್ಯದಲ್ಲಿ ಮುತ್ತಿಗಿಂತಲೂ ಲೇಸಾದ ಊರು ಯಾವುದು ಎಂದು ಹೇಳಲಾಗಿದೆ ?
2. ದೊಡ್ಡನಗೌಡರು ಬಡವಿಗೆ ಯಾವುದು ಲಕ್ಷಣವೆಂದು ಹೇಳಿದ್ದಾರೆ ?
3. ಕವಿಯ ಪ್ರಕಾರ ಜೋಳದ ರಾಶಿಯ ರೈತರು ಯಾವ ಕಾಯಕದವರು ?

ಈ. ಚಿಂತನಾಶೀಲ ಪ್ರಶ್ನೆ.

1. ನಿಮ್ಮೂರಿನಲ್ಲಿರುವ ವಿಶೇಷತೆಯನ್ನು ಕುರಿತು ಒಂದು ಕವಿತೆಯನ್ನು ಬರೆಯಿರಿ.

5th-std_Term 2_Kannada_Reader_CBSE_KM.indd 82 7/9/2019 3:26:48 PM

ಘಟಕ ಐದು

ಮೆಚ್ಚಿನ ಗೊಂಬೆ

ಗದ್ಯ

– ಸಂಗ್ರಹ

ಅಮ್ಮ ನಂಗೆ ಪುಟ್ಟದೊಂದು ಗೊಂಬೆ ತಂದ್ಕೊಡೆ
ಗೊಂಬೆ ಜೊತೆ ಆಡುವೆ, ಆಡಿ–ಪಾಡಿ ನಲಿಯುವೆ!



ಗೊಂಬೆ ಎಂದರೆ ಮಕ್ಕಳಿಗೆ ಬಲು ಪ್ರೀತಿ. ಚಿಕ್ಕ ಮಕ್ಕಳಿಗೆ ಪ್ರಮುಖ ಆಸ್ತಿಯೆಂದರೆ ಗೊಂಬೆಗಳೇ. ದೊಡ್ಡವರೂ ಸಹ ಗೊಂಬೆಗಳನ್ನು ಆಡಿಸಿ ನಲಿಯುತ್ತಾರೆ. ಹಠ ಮಾಡಿ ಅಳುವ ಮಕ್ಕಳಿಗೆ ಗೊಂಬೆ ಕೊಟ್ಟರೆ ಸಾಕು, ಅವು ಗಪ್‌ಚುಪ್ ಆಗುತ್ತವೆ. ಗೊಂಬೆಗಳು ಮಕ್ಕಳ ಕೈಯಲ್ಲಿ ಮಕ್ಕಳಾಗಿ ಬಿಡುತ್ತವೆ. ಗೊಂಬೆ ಕಂಡರೆ ಸಾಕು, ಮಕ್ಕಳ ಮುಖದಲ್ಲಿ ನಗು ಮೂಡುತ್ತದೆ. ಚಿಕ್ಕ ಮಕ್ಕಳು ಎತ್ತಿ ಬಿಸಾಡಿ ನೂಕಿ ಎಳೆದು ಜಗ್ಗಿ ನಲಿಯುತ್ತಾರೆ. ಸ್ವಲ್ಪ ದೊಡ್ಡವರಾದಂತೆ ಗೊಂಬೆಗಳನ್ನು ಮುದ್ದಿಸುತ್ತಾರೆ. ತಾಯಿ ತಮ್ಮನ್ನೆಲ್ಲ ಹೇಗೆ ಪೋಷಣೆ ಮಾಡುತ್ತಾಳೋ ಹಾಗೆಯೇ ಮಕ್ಕಳೂ ಗೊಂಬೆಗಳನ್ನು ನೋಡಿಕೊಳ್ಳುತ್ತಾರೆ. ಅವುಗಳಿಗೆ ತಿಂಡಿ ತಿನ್ನಿಸುವುದು, ಸ್ನಾನ ಮಾಡಿಸುವುದು, ಮಲಗಿಸಿ ಲಾಲಿ ಹಾಡುವುದು, ಬಟ್ಟೆ ತೊಡಿಸುವುದು, ಶೃಂಗಾರ ಮಾಡುವುದು ಹೀಗೆ ಎಲ್ಲವನ್ನೂ ಪ್ರೀತಿಯಿಂದ ಮಾಡುತ್ತಾರೆ.

ಮಕ್ಕಳ ಕೈಯಲ್ಲಿ ಗೊಂಬೆಗಳಿಗೆ ಜೀವ ಬರುತ್ತದೆ. ಯಾರಾದರೂ ತಮ್ಮ ಗೊಂಬೆಗಳಿಗೆ ಕೀಟಲೆ ಮಾಡಿದರೆ ಮಕ್ಕಳು ಸುಮ್ಮನಿರುವುದಿಲ್ಲ. ಗೊಂಬೆಗೆ ನೋವಾಯಿತೆಂದು ಎತ್ತಿ ಮುದ್ದಾಡಿ ಸಮಾಧಾನ ಮಾಡುತ್ತಾರೆ. ಕೈ ಜಾರಿದ ಗೊಂಬೆ ಕೆಳಕ್ಕೆ ಬಿದ್ದರಂತೂ ಮಕ್ಕಳು ಅತ್ತೇ ಬಿಡುತ್ತಾರೆ. ಅದನ್ನು ಎತ್ತಿಕೊಂಡು ಹಾಡು ಹೇಳಿ ಸಮಾಧಾನ ಮಾಡುತ್ತಾರೆ.

5th-std_Term 2_Kannada_Reader_CBSE_KM.indd 83 7/9/2019 3:26:48 PM

ಅಳಬೇಡ ಅಳಬೇಡ ಗೊಂಬವ್ವ ನೀನು

ಜರತಾರಿ ಲಂಗ ಕೊಡಿಸುವೆನು ನಾನು!

ಗೊಂಬೆಗಳನ್ನು ವಿವಿಧ ವಸ್ತುಗಳಿಂದ ತಯಾರಿಸುತ್ತಾರೆ. ಮರ, ಮಣ್ಣು, ಪ್ಲಾಸ್ಟಿಕ್, ರಬ್ಬರ್, ಪಿಂಗಾಣಿ, ಪಟ್ಟೆ, ಹತ್ತಿ, ಬಿದಿರು, ಕಾಗದಗಳಿಂದ ಗೊಂಬೆಗಳು ಸಿದ್ಧವಾಗುತ್ತಿವೆ. ಇತ್ತೀಚೆಗೆ ಗೊಂಬೆಗಳು ವಿವಿಧ ರೂಪಗಳನ್ನು ಪಡೆಯುತ್ತಿವೆ. ಮನುಷ್ಯ, ಪ್ರಾಣಿ, ಪಕ್ಷಿ..... ಎಲ್ಲ ರೂಪಗಳಲ್ಲೂ ರೂಪುಗೊಳ್ಳುತ್ತಿವೆ. ವಿವಿಧ ವಸ್ತುಗಳಲ್ಲೂ ಗೊಂಬೆಗಳ ರೂಪ...! ಗೊಂಬೆಯ ಪೆನ್ಸಿಲ್, ಗೊಂಬೆಯ ಪೆನ್ನು, ಗೊಂಬೆಯ ತಿಂಡಿ ತಿನಿಸುಗಳು... ಹೀಗೆ ಎಲ್ಲದರಲ್ಲೂ ಗೊಂಬೆಗಳು ಕಾಣಿಸಿಗುತ್ತವೆ.





ಜಾತ್ರೆ, ಉತ್ಸವಗಳಲ್ಲಿ ಗೊಂಬೆಗಳದೇ ಆಕರ್ಷಣೆ. ವೈವಿಧ್ಯಮಯ ಗೊಂಬೆಗಳು ಅಂಗಡಿಗಳಲ್ಲಿ ಕೈಬೀಸಿ ಕರೆಯುತ್ತವೆ. ಉತ್ಸವಗಳಲ್ಲಿ ಕುಣಿಯುವ ಗೊಂಬೆಗಳನ್ನು ನೋಡುವುದು ಎಲ್ಲಿಲ್ಲದ ಆನಂದ! ಅವುಗಳನ್ನು ನೋಡಿದರೆ ಹರ್ಷ, ನಗು, ಒಟ್ಟಿಗೇ ಬರುತ್ತವೆ. ಜೋಕರ್ ಗೊಂಬೆಗಳಂತೂ ತಾನೂ ನಗುತ್ತಾ ಎಲ್ಲರನ್ನೂ ನಗಿಸುತ್ತವೆ.

ನಮ್ಮ ನಾಡಹಬ್ಬ ದಸರಾದಲ್ಲಿ ಮನೆಮನೆಗಳಲ್ಲೂ ಗೊಂಬೆಗಳನ್ನು ಇಟ್ಟು ಅಲಂಕರಿಸುತ್ತಾರೆ. ಅಲಂಕರಿಸಿದ ನೂರಾರು ಗೊಂಬೆಗಳನ್ನು ನೋಡುವುದೇ ಕಣ್ಣಿಗೆ ಒಂದು ಹಬ್ಬ! ಅವುಗಳ ಶೃಂಗಾರ, ಜೋಡಣೆ, ಅಲಂಕಾರ ಬಲು ಸುಂದರ. ಸ್ಪ್ರಿಂಗ್ ಗೊಂಬೆಗಳು, ಕೀ ಗೊಂಬೆಗಳು, ಕೀಲು ಗೊಂಬೆಗಳು, ಯಂತ್ರದ ಗೊಂಬೆಗಳು, ಸಣ್ಣ–ದೊಡ್ಡ ವಿವಿಧ ರಂಗಿನ ಗೊಂಬೆಗಳು, ವಿವಿಧ ಆಟಗಳ ಮೂಲಕ ಸಂತೋಷ ಕೊಡುತ್ತವೆ. ನಿಜವಾಗಿ ಜೀವವಿದ್ದವುಗಳಂತೆ ಅವು ವರ್ತಿಸುತ್ತವೆ.

ಎಲ್ಲರ ಮನೆಗಳಲ್ಲೂ ಗೊಂಬೆಗಳು ಸ್ಥಾನ ಪಡೆದಿವೆ. ಗೊಂಬೆಗಳು ಮನುಷ್ಯನಿಗೆ ಅನೇಕ ರೀತಿಯಲ್ಲಿ ಜೀವನ ಪಾಠವನ್ನು ಹೇಳಿ ಕೊಡುತ್ತವೆ. ಗೊಂಬೆಗಳು ಯಾರ ಹೊಗಳಿಕೆಗೂ ತೆಗಳುವಿಕೆಗೂ ಜಗ್ಗುವುದಿಲ್ಲ.

ಆಡಿಸಿ ನೋಡು, ಬೀಳಿಸಿ ನೋಡು ಉರುಳಿ ಹೋಗದು

ಏನೇ ಬರಲಿ ಯಾರಿಗು ಸೋತು ತಲೆಯ ಬಾಗದು!

5th-std_Term 2_Kannada_Reader_CBSE_KM.indd 84 7/9/2019 3:26:48 PM

ಕಲಿಕಾ ಫಲ

- ನಿಮಗೆ ಸಿಗುವ ವಿವಿಧ ರೀತಿಯ ಗೊಂಬೆಗಳನ್ನು ಸಂಗ್ರಹಿಸಿ.
- ಪ್ರಾಣಿ, ಪಕ್ಷಿ, ಕೀಟಗಳಿಗೆ ಸಂಬಂಧಿಸಿದ ಗೊಂಬೆಗಳನ್ನು ಸಂಗ್ರಹಿಸಿ ಪ್ರತ್ಯೇಕಿಸಿ.
- ಹಾಸ್ಯಕ್ಕೆ ಸಂಬಂಧಿಸಿದ ಗೊಂಬೆಯಾಟ ಪ್ರದರ್ಶನದಲ್ಲಿ ನೀವು ಪಾಲ್ಗೊಳ್ಳಿ.

ಮೌಲ್ಯಮಾಪನ

ಓದೋಣ! ಚಿಂತಿಸೋಣ! ಬರೆಯೋಣ!

ಅ. ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.

1. ಶೃಂಗಾರ ಪದದ ಅರ್ಥ _____

ಅ) ಅಂಗಾರ ಆ) ಬಂಗಾರ

ಇ) ಅಲಂಕಾರ ಈ) ಶೃಂಗೇರಿ

2. ತಂದ್ಕೊಡೆ ಈ ಪದವನ್ನು ಬಿಡಿಸಿ ಬರೆದಾಗ _____

ಅ) ತೆಗೆದು + ಕೊಡೆ ಆ) ತಗೊಂಡು + ಕೊಡೆ

ಇ) ತಂದು + ಕೊಡೆ ಈ) ತಂದ್ + ಕೊಡೆ

3. ನಗು ಪದದ ವಿರುದ್ಧ ಪದ _____

ಅ) ಅಳು ಆ) ಆಳು

ಇ) ಹಳು ಈ) ಬಿಗು

4. ಸಂತೋಷ ಪದದ ತದ್ಭವ ಪದ _____

ಅ) ಸಂತಸ ಆ) ಸಂತೋಸ

ಇ) ಗಿಂತೋಷ ಈ) ಪಾರಿತೋಷಕ

5. ಗೊಂಬೆ+ಇಗೆ ಈ ಪದವನ್ನು ಸೇರಿಸಿ ಬರೆದಾಗ _____

ಅ) ಗೊಂಬೀಗೆ ಆ) ಗೊಂಬೆಗೆ

ಇ) ಗೊಂಬಿಗೆ ಈ) ಗೊಂಬೇಗೆ

ಅ. ಈ ಪದಗಳನ್ನು ಸೇರಿಸಿ ಬರೆಯಿರಿ.

1. ಪುಟ್ಟದು+ಒಂದು = _____
2. ಜೀವ+ಇದ್ದ = _____

5th-std_Term 2_Kannada_Reader_CBSE_KM.indd 85 7/9/2019 3:26:48 PM

ಆ. ಈ ಗಾದೆ ಮಾತನ್ನು ಪೂರ್ಣಗೊಳಿಸಿ

(ಬಾಳಿಯಾನು, ಬಾಯಿಮೊಸರು, ಭೂಷಣ)

1. ಕೈ ಕೆಸರಾದರೆ _____.
2. ವಿದ್ಯಾರ್ಥಿಗೆ ವಿನಯವೇ _____.
3. ತಾಳಿದವನು _____.

ಇ. ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ಗೊಂಬೆಗಳನ್ನು ಯಾವ ಯಾವ ವಸ್ತುಗಳಿಂದ ತಯಾರಿಸುತ್ತಾರೆ ?
2. ಗೊಂಬೆಗಳು ಯಾವ ಯಾವ ರೂಪಗಳಲ್ಲಿ ಜನ್ಮ ತಾಳಿವೆ ?
3. ಗೊಂಬೆಗೆ ನೋವಾದರೆ ಮಕ್ಕಳು ಏನು ಮಾಡುತ್ತಾರೆ ?
4. ಯಾವ ಹಬ್ಬದಂದು ಮನೆಗಳಲ್ಲಿ ಗೊಂಬೆಗಳನ್ನು ಅಲಂಕರಿಸುತ್ತಾರೆ ?

ಈ. ಚಿಂತನಾಶೀಲ ಪ್ರಶ್ನೆ.


1. ವಿವಿಧ ಕಲಾ ಪ್ರಕಾರದ ಗೊಂಬೆಗಳನ್ನು ಸಂಗ್ರಹಿಸಿ ಬರೆಯಿರಿ.



ಭಾಷೆಯೊಡನೆ ಆಟವಾಡು


ಅ. ಶೃಂಗದಲ್ಲಿರುವ ನಾನು ಇಬ್ಬರಿಗೂ ಗೆಳೆಯ. ಎರಡೂ ಕಡೆಯಿಂದ ಓದಿ

1.




5th-std_Term 2_Kannada_Reader_CBSE_KM.indd 86 7/9/2019 3:26:48 PM

2.




ಉತ್ತರ: ರ

3.



ಉತ್ತರ: ಗ ಅಥವಾ ರ

4.




ಉತ್ತರ: ರಿ


5th-std_Term 2_Kannada_Reader_CBSE_KM.indd 87 7/9/2019 3:26:48 PM

ಆ. ಮಾದರಿಯಂತೆ ಪದ ರಚಿಸಿ ಆನಂದಿಸಿ

1. **ಮಾದರಿ** : ನುಡಿಹಬ್ಬ



2. **ಮಾದರಿ** : ನೇತ್ರದಾನ



5th-std_Term 2_Kannada_Reader_CBSE_KM.indd 88 7/9/2019 3:26:49 PM

ಘಟಕ ಐದು

ಉಪಪಠ್ಯ

ಕರಗ ಉತ್ಸವ

– ಡಾ. ಎಂ. ಸುಮಿತ್ರ

ಆಶಯ

ಕರ್ನಾಟಕವು ವಿವಿಧ ಕಲೆ ಮತ್ತು ಸಂಸ್ಕೃತಿಯ ತವರಾಗಿದೆ. ಶ್ರೀಮಂತ ಪರಂಪರೆಯನ್ನು ಹೊಂದಿದೆ. ಅನೇಕ ಹಬ್ಬ ಮತ್ತು ಜಾತ್ರೆಗಳು ಇಂದಿಗೂ ನಾಡಿನ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಬರುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ಸಾಂಪ್ರದಾಯಿಕವಾಗಿ ಆಚರಿಸುವ ಇಂತಹ ಉತ್ಸವಗಳಲ್ಲಿ ನಾವೂ ಭಾಗವಹಿಸಬೇಕು. ಇದರಿಂದ ಬಂಧುಗಳು, ಸ್ನೇಹಿತರು, ಎಲ್ಲರೂ ಒಂದುಗೂಡುತ್ತಾರೆ. ಈ ಹಬ್ಬ, ಜಾತ್ರೆಗಳ ಮಹತ್ವವನ್ನು ಹಿರಿಯರು, ಕಿರಿಯರಿಗೆ ತಿಳಿಸುತ್ತಾರೆ. ಇಂತಹ ಜಾತ್ರೆಗಳಲ್ಲಿ ಕರಗ ಉತ್ಸವವೂ ಒಂದು. ಕರಗ ಉತ್ಸವವನ್ನು ತಮಿಳುನಾಡಿನಲ್ಲಿ ಮತ್ತು ಕರ್ನಾಟಕದ ಕೋಲಾರ, ಬೆಂಗಳೂರು ಜಿಲ್ಲೆಗಳಲ್ಲಿ ಪ್ರಧಾನವಾಗಿ ಆಚರಿಸುತ್ತಾರೆ.



ಬೆಂಗಳೂರು ಮಹಾನಗರವಾದರೂ ಅದು ಅನೇಕ ಹಳ್ಳಿಗಳಿಂದ ಕೂಡಿದೆ. ಹೀಗಾಗಿ ಬೆಂಗಳೂರಿನಲ್ಲಿ ನಡೆಯುವ ಅನೇಕ ಧಾರ್ಮಿಕ, ಸಾಂಸ್ಕೃತಿಕ ಆಚರಣೆಗಳಲ್ಲಿ ಜನಪದ ಸೊಗಡು ಇನ್ನೂ ಉಳಿದುಕೊಂಡಿದೆ. ಇಂತಹ ಆಚರಣೆಗಳಲ್ಲಿ ಬಸವನಗುಡಿ ಬಡಾವಣೆಯಲ್ಲಿ ನಡೆಯುವ ಕಡಲೆಕಾಯಿ ಪರಿಸೆ, ಅಣ್ಣಮ್ಮದೇವಿಯ ಉತ್ಸವಗಳು ಹಾಗೂ ಕರಗ ಮಹೋತ್ಸವಗಳು ಮುಖ್ಯವಾಗಿವೆ.

ಬೆಂಗಳೂರಿನ ಕರಗ ಉತ್ಸವವು ವಿಶ್ವವಿಖ್ಯಾತವಾಗಿದೆ. ಪ್ರತಿವರ್ಷ ಚೈತ್ರ ಮಾಸದ ಹುಣ್ಣಿಮೆಯಂದು ಈ ಕರಗ ಉತ್ಸವವು ನಡೆಯುತ್ತದೆ. 'ಕರಗ' ಎಂದರೆ ಕಳಸ, ಕುಂಭ ಎಂಬ ಅರ್ಥವಿದೆ. ಈ ಕರಗವನ್ನು ಮಲ್ಲಿಗೆ ಹೂವಿನಿಂದ ಸಿಂಗರಿಸುತ್ತಾರೆ. ಕರಗ ಉತ್ಸವವು ಪಂಚ ಪಾಂಡವರ ಪತ್ನಿಯಾಗಿದ್ದ ದ್ರೌಪದಿಯನ್ನು ಕುರಿತ

5th-std_Term 2_Kannada_Reader_CBSE_KM.indd 89 7/9/2019 3:26:49 PM

ಆಚರಣೆಯಾಗಿದೆ. ಕರಗ ಉತ್ಸವವನ್ನು ಕರ್ನಾಟಕದಲ್ಲಿ 'ತಿಗಳ' ಜನಾಂಗದವರು ಆಚರಿಸುತ್ತಾರೆ. ತಿಗಳರನ್ನು ವಹ್ನಿಕುಲ ಕ್ಷತ್ರಿಯರು, ಪಳ್ಳಿಗರು ಎಂದು ಕೂಡ ಕರೆಯುತ್ತಾರೆ. ದ್ರೌಪದಿಯು ತಿಗಳರ ಕುಲದೇವತೆಯಾಗಿದ್ದಾಳೆ. ದ್ರೌಪದಿಯನ್ನು ಶಕ್ತಿ ದೇವತೆಯೆಂದೂ ಅವರು ಭಾವಿಸಿ ಭಯಭಕ್ತಿಗಳಿಂದ ಪೂಜಿಸುತ್ತಾರೆ.

ಬೆಂಗಳೂರಿನ ಹೃದಯ ಭಾಗದಲ್ಲಿರುವ ಕೆ.ಆರ್.ಮಾರುಕಟ್ಟೆ ವ್ಯಾಪ್ತಿಯ ನಗರ್ತ ಪೇಟೆಯಲ್ಲಿ ಧರ್ಮರಾಯ ದೇವಸ್ಥಾನವಿದೆ. ದೇವಸ್ಥಾನದ ಒಳ ಪ್ರಾಂಗಣದಲ್ಲಿ ಸುಂದರವಾದ ಕಲ್ಲಿನ ಆನೆಗಳನ್ನು ಕಾಣಬಹುದು. ದೊಡ್ಡದಾದ ರಾಜ ಗೋಪುರ ಇಲ್ಲಿದೆ. ಗರ್ಭಗುಡಿಯಲ್ಲಿ ಶ್ರೀಧರ್ಮರಾಯ ಮತ್ತು ಶ್ರೀಕೃಷ್ಣರ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಮುಂಭಾಗದ ಮಧ್ಯೆ ಶಕ್ತಿಪೀಠವನ್ನು ಸ್ಥಾಪಿಸಲಾಗಿದೆ. ಅದರ ಎಡಬಲದಲ್ಲಿ ಅರ್ಜುನ ಮತ್ತು ದ್ರೌಪದಿಯ ಪಂಚಲೋಹದ ಉತ್ಸವ ಮೂರ್ತಿಗಳನ್ನು ಇಡಲಾಗಿದೆ.

ಕರಗದ ಬಗ್ಗೆ ಅನೇಕ ಪುರಾಣ ಕಥೆಗಳಿವೆ. ಅದರಲ್ಲಿ ಒಂದು ಕಥೆ ಹೀಗಿದೆ: ಮಹಾಭಾರತದ ಕುರುಕ್ಷೇತ್ರ ಯುದ್ಧ ಮುಗಿದ ನಂತರ ಪಾಂಡವರು ಸ್ವರ್ಗಕ್ಕೆ ಹೋಗುತ್ತಿರುತ್ತಾರೆ. ಆಗ ಪಂಚ ಪಾಂಡವರನ್ನು ಹಿಂಬಾಲಿಸುತ್ತಿದ್ದ ದ್ರೌಪದಿಯು ಪ್ರಜ್ಞೆ ತಪ್ಪಿ ಕೆಳಗೆ ಬೀಳುತ್ತಾಳೆ. ಪುನಃ ಎಚ್ಚರವಾದಾಗ ತನ್ನ ಪತಿಗಳು ಇಲ್ಲದ್ದನ್ನು ನೋಡಿ ಭಯದಿಂದ ಅಳುತ್ತಾಳೆ. ಈ ಸಂದರ್ಭದಲ್ಲಿ ದ್ರೌಪದಿ ಒಬ್ಬಳೇ ಇರುವುದನ್ನು ಕಂಡು ತಿಮಿರಾಸುರ ಎಂಬ ರಾಕ್ಷಸ ಅವಳನ್ನು ಪೀಡಿಸುತ್ತಾನೆ. ಇದರಿಂದ ಕೋಪಗೊಂಡ ದ್ರೌಪದಿ ಆದಿಶಕ್ತಿಯ ರೂಪ ತಾಳಿ ವೀರಕುಮಾರರನ್ನು ಸೃಷ್ಟಿಸಿ ರಾಕ್ಷಸನನ್ನು ಸಂಹರಿಸುತ್ತಾಳೆ. ಈ ವಿಜಯದ ಸಂಕೇತವಾಗಿ ಅವಳು ಕರಗ ಹೊತ್ತು ಕುಣಿಯುತ್ತಾಳೆ. ದ್ರೌಪದಿ ಇಲ್ಲಿಯೇ ನೆಲೆಸಬೇಕೆಂದು ವೀರಕುಮಾರರು ಬೇಡಿಕೊಂಡಾಗ 'ವರ್ಷಕ್ಕೊಮ್ಮೆ ಮೂರು ದಿನ ಕರಗ ಉತ್ಸವ ಮಾಡಿ, ಆಗ ಬರುತ್ತೇನೆ' ಎಂದು ಅವಳು ಅವರಿಗೆ ಭರವಸೆ ನೀಡುತ್ತಾಳೆ. ಇದು ತಿಗಳರ ನಂಬಿಕೆ. ಈ ಹಿನ್ನೆಲೆಯಲ್ಲಿ ಪ್ರತಿವರ್ಷವೂ ಕರಗ ಉತ್ಸವವು ನಡೆಯುತ್ತಾ ಬಂದಿದೆ.

ತಿಗಳರು ಪ್ರಸಿದ್ಧ ಕರಗ ಉತ್ಸವವನ್ನು ಆಚರಿಸುವುದು ಹೀಗೆ: ಹುಣ್ಣಿಮೆಯ ಮಧ್ಯೆ ರಾತ್ರಿಯಲ್ಲಿ, ಬೆಳದಿಂಗಳಲ್ಲಿ ತಿಗಳ ಸಮುದಾಯದ ವ್ಯಕ್ತಿ ನಿಷ್ಠೆಯಿಂದ ಉಪವಾಸವಿದ್ದು ಕರಗ ಹೊರುತ್ತಾನೆ. ಆತ ಹಳದಿ ಬಣ್ಣದ ಸೀರೆಯುಟ್ಟು, ಹಣೆಯಲ್ಲಿ ಕುಂಕುಮವಿಟ್ಟು, ಕೊರಳಿಗೆ ಸರ, ಕೈಗಳಲ್ಲಿ ಬಳೆಗಳನ್ನು ತೊಟ್ಟು ಸ್ತ್ರೀಯಂತೆ ವೇಷ ಧರಿಸುತ್ತಾನೆ. ಮಲ್ಲಿಗೆ ಹೂವಿನಿಂದ ಅಲಂಕೃತವಾದ ಗೋಪುರಾಕಾರದ ಕರಗವನ್ನು ಆತ ಹೊರುತ್ತಾನೆ. ಆತನನ್ನು ದ್ರೌಪದಿಯ ಪ್ರತಿರೂಪ ಎಂದು ಭಾವಿಸಲಾಗುತ್ತದೆ. ಈ ಉತ್ಸವದಲ್ಲಿ ಗಣಾಚಾರಿ, ಗಂಟೆ ಪೂಜಾರಿ, ಕುಲ ಪುರೋಹಿತ ಮತ್ತು ವೀರಕುಮಾರರು ಮುಖ್ಯವಾಗಿ ಭಾಗವಹಿಸುತ್ತಾರೆ. ಇವರೆಲ್ಲರೂ ತಿಗಳ ಜನಾಂಗದವರೇ ಆಗಿರುತ್ತಾರೆ. ಅಲ್ಲಿ ನೆರೆದಿರುವ ಸಾವಿರಾರು ಭಕ್ತರು 'ಗೋವಿಂದಾ, ಗೋವಿಂದಾ.....' ಎಂದು ಕೂಗುತ್ತಾರೆ. ಕರಗ ಹೊತ್ತ ವ್ಯಕ್ತಿಯ ಮೇಲೆ ಮಲ್ಲಿಗೆ ಹೂಗಳನ್ನು ಎರಚುತ್ತಾರೆ. ಮಹಿಳೆಯರು ತಂಬಿಟ್ಟನ್ನು ತಯಾರಿಸಿ, ದೀಪದಾರತಿ ಮಾಡುತ್ತಾರೆ. ಈ ತಂಬಿಟ್ಟನ್ನು ಹೂಗಳಿಂದ ಅಲಂಕರಿಸುತ್ತಾರೆ. ಇವುಗಳು ನೋಡಲು ಸುಂದರವಾಗಿರುತ್ತವೆ. ತಂಬಿಟ್ಟು ಎಂದರೆ ಅಕ್ಕಿ ಮತ್ತು ಬೆಲ್ಲದಿಂದ ತಯಾರಿಸಿದ ಸಿಹಿ ದೀಪದಾಕಾರದ ಉಂಡೆ. ಕರಗ ಹೊತ್ತಿರುವ ವ್ಯಕ್ತಿಯ ಮೇಲೆ ದ್ರೌಪದೀದೇವಿ ಆವಾಹನೆಯಾಗುತ್ತಾಳೆ ಎಂಬ ನಂಬಿಕೆ ಇದೆ. ಕತ್ತಿ ಹಿಡಿದು ಕರಗ ಹೊರುವವನ ಜೊತೆ ಇರುವ ವೀರಕುಮಾರರು ದೇವಿಯನ್ನು ಶಾಂತಗೊಳಿಸಲು ಡೀ–ಡಿಕ್ ಎಂದು ಅಲಗು ಸೇವೆ ಮಾಡುತ್ತಾರೆ. ದೇವಸ್ಥಾನದಿಂದ ಹೊರಟ ಕರಗ ಊರಿನ ಪ್ರಮುಖ ಭಾಗಗಳಲ್ಲಿ ಪ್ರದಕ್ಷಿಣೆ ಹಾಕುತ್ತದೆ.

ಶಕ್ತಿ ದೇವಿಯ ಪ್ರತೀಕವಾದ ಕರಗವನ್ನು ನಂಬಿದರೆ ಇಷ್ಟಾರ್ಥವೆಲ್ಲ ಸಿದ್ಧಿಸುತ್ತದೆ ಎಂದು ಜನರು ಇದಕ್ಕೆ ಹರಕೆ ಹೊರುತ್ತಾರೆ. ಭಕ್ತಿಯಿಂದ ಪೂಜೆ ಮಾಡುತ್ತಾರೆ. ಧ್ವಜಾರೋಹಣ, ಮಡಿವಂತಿಕೆ, ಪುಣ್ಯಸ್ನಾನ, ದೀಪದಾರತಿ, ಪೊಂಗಲ್ ಸೇವೆ, ಹೂವಿನ ಕರಗ, ಕೊಂಡ ಹಾಯುವುದು, ಓಕುಳಿ ಮುಂತಾದ ವಿವಿಧ ಮುಖ್ಯ ಆಚರಣೆಗಳನ್ನು ಅಂದು ಮಾಡುತ್ತಾರೆ.

5th-std_Term 2_Kannada_Reader_CBSE_KM.indd 90 7/9/2019 3:26:49 PM

ಈ ಉತ್ಸವದಲ್ಲಿ ವಿವಿಧ ರೀತಿಯ ಸಕ್ಕರೆ ಮಿಠಾಯಿ ಅಂಗಡಿಗಳಿರುತ್ತವೆ. ವಿವಿಧ ನಮೂನೆಯ ಆಕರ್ಷಕ ಬಳೆಗಳನ್ನು ಮಾರುವ ಅಂಗಡಿಗಳೂ ಇರುತ್ತವೆ. ವ್ಯಾಪಾರಿಗಳು ಹೂ ಹಣ್ಣುಗಳನ್ನು ಮಾರುತ್ತಾರೆ. ಮಕ್ಕಳನ್ನು ಆಕರ್ಷಿಸಲು ವಿವಿಧ ರೀತಿಯ ಮಕ್ಕಳ ಆಟಿಕೆಗಳನ್ನು ಮಾರುವವರೂ ಇರುತ್ತಾರೆ.

ಬೆಂಗಳೂರು ಕರಗದಂತಹ ಜಾತ್ರೆಗಳು, ಜನರಲ್ಲಿ ಭಕ್ತಿ ಭಾವವನ್ನೂ, ಮನರಂಜನೆಯನ್ನೂ ಒಟ್ಟಿಗೆ ಮೂಡಿಸುತ್ತವೆ. ಭಕ್ತಿ–ವ್ಯಾಪಾರ–ಮನರಂಜನೆಯನ್ನು ಒಳಗೊಂಡ ಈ ಉತ್ಸವವು ಮಾನವ ಸಂಬಂಧಗಳಲ್ಲಿ ಪ್ರೀತಿ ಸೌಹಾರ್ದತೆ ಬೆಳೆಯಲು ಅವಕಾಶ ಮಾಡಿಕೊಡುತ್ತದೆ. ಜನರ ಬಾಂಧವ್ಯವನ್ನು ಬೆಸೆಯುವ ಆಚರಣೆಯಾಗಿ ಇದು ಉಳಿದುಕೊಂಡಿದೆ.

ಕೃತಿ–ಕರ್ತೃ ಪರಿಚಯ

ಡಾ. ಎಂ. ಸುಮಿತ್ರ ಅವರು ಕೋಲಾರ ಜಿಲ್ಲೆಯ ಮಾಲೂರಿನವರು. ಇವರು ಮಾರ್ಚ್ 2, 1968ರಂದು ಜನಿಸಿದರು. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕಿಯಾಗಿದ್ದಾರೆ. ಇವರ ಪ್ರಮುಖ ಕೃತಿಗಳು 'ಕರಗ ಸಂಪ್ರದಾಯ', 'ಕಣಿಯರ ಸಂಸ್ಕೃತಿ', 'ವಿಮರ್ಶಾ ಲೇಖನಗಳು', 'ಮಾಲೂರು ತಿಗಳರ ಸಂಸ್ಕೃತಿ' ಮುಂತಾದ ಕೃತಿಗಳನ್ನು ಇವರು ರಚಿಸಿದ್ದಾರೆ.

ಮೌಲ್ಯಮಾಪನ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1. ಕರಗ ಆಚರಣೆಯನ್ನು ವಿಶೇಷವಾಗಿ ಯಾವ ಪ್ರದೇಶಗಳಲ್ಲಿ ಕಾಣಬಹುದು.
2. ದ್ರೌಪದಿ ಯಾರು ?
3. ದ್ರೌಪದಿಯು ವೀರಕುಮಾರರನ್ನು ಸೃಷ್ಟಿಸಲು ಕಾರಣವೇನು ?
4. ಬೆಂಗಳೂರಿನ ಧರ್ಮರಾಯ ದೇವಸ್ಥಾನದಲ್ಲಿ ಏನೇನನ್ನು ಕಾಣಬಹುದು ?
5. ಕರಗವನ್ನು ಯಾರು ಹೊರುತ್ತಾರೆ? ಅವರ ವೇಷಭೂಷಣಗಳನ್ನು ತಿಳಿಸಿರಿ.

5th-std_Term 2_Kannada_Reader_CBSE_KM.indd 91 7/9/2019 3:26:49 PM

ಘಟಕ ಐದು

ವ್ಯಾಕರಣ

ಲೇಖನ ಚಿಹ್ನೆಗಳು

ಬರವಣಿಗೆಯಲ್ಲಿ ಲೇಖನ ಚಿಹ್ನೆಗಳ ಪಾತ್ರ ಅತ್ಯಂತ ಪ್ರಮುಖವಾದುದು. ಲೇಖನ ಚಿಹ್ನೆಗಳಿಲ್ಲದ ಬರವಣಿಗೆಯ ಸ್ಪಷ್ಟಾರ್ಥವನ್ನು ಕೊಡದೆ ಅನೇಕ ತೊಡಕುಗಳಿಗೆ ಕಾರಣವಾಗುತ್ತದೆ. ಆದುದರಿಂದ ಲೇಖನ ಚಿಹ್ನೆಗಳ ಕಡೆಗೆ ಗಮನ ಕೊಡುವುದು ಅವಶ್ಯಕ. ಬರವಣಿಗೆಯಲ್ಲಿ ಲೇಖನ ಚಿಹ್ನೆಗಳನ್ನು ಉಪಯೋಗಿಸುವುದರಿಂದ ಬರವಣಿಗೆಗೆ ಒಂದು ಬೆಲೆ ಬರುತ್ತದೆ.

1. ಪೂರ್ಣ ವಿರಾಮ (.)

ಒಂದು ಪೂರ್ಣ ಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ '.' – ಈ ಚಿಹ್ನೆಯನ್ನು ಉಪಯೋಗಿಸಬೇಕು.

2. ಅರ್ಧವಿರಾಮ (;)

ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ, ಉಪವಾಕ್ಯಗಳು ಮುಗಿದಲ್ಲೆಲ್ಲ 'ಅರ್ಧವಿರಾಮ'ದ ';' – ಈ ಚಿಹ್ನೆಯನ್ನು ಉಪಯೋಗಿಸಬೇಕು.

3. ಅಲ್ಪ ವಿರಾಮ (,)

ಇವುಗಳನ್ನು ಮುಖ್ಯವಾಗಿ ಅಲ್ಪ ವಿರಾಮ ಬರುವ ಸ್ಥಳಗಳಲ್ಲಿ ಬಳಸಬೇಕು.

1) ಕರ್ತೃ, ಕರ್ಮ, ಕ್ರಿಯಾ ಪದಗಳಿಗೆ ಅನೇಕ ವಿಶೇಷಣಗಳಿದ್ದಾಗ ಕೊನೆಯ ವಿಶೇಷಣವನ್ನುಳಿದು ಉಳಿದವುಗಳ ಮುಂದೆ, ',' – ಈ ಚಿಹ್ನೆಯನ್ನು ಉಪಯೋಗಿಸಬೇಕು.

2) ಸಂಬೋಧನೆಗಳ ಮುಂದೆ ಹಾಗೂ ಅನೇಕ ಕರ್ತೃಗಳು ಅಥವಾ ಕರ್ಮಗಳು ಬಂದಾಗ ಕೊನೆಯದನ್ನುಳಿದು ಉಳಿದವುಗಳ ಮುಂದೆ ಅಲ್ಪವಿರಾಮದ ',' – ಈ ಚಿಹ್ನೆಯನ್ನು ಬರೆಯಬೇಕು.

4. ಪ್ರಶ್ನಾರ್ಥಕ ಚಿಹ್ನೆ (?)

ಪ್ರಶ್ನಾರ್ಥಕ ಪದ ಮತ್ತು ವಾಕ್ಯಗಳ ಕೊನೆಯಲ್ಲಿ '?' – ಈ ಚಿಹ್ನೆಯನ್ನು ಉಪಯೋಗಿಸಬೇಕು.

5. ಭಾವಸೂಚಕ ಚಿಹ್ನೆ (!)

ಆಶ್ಚರ್ಯ, ಸಂತೋಷ, ವಿಷಾದ, ದುಃಖ, ಕೋಪ, ಆನಂದ ಇತ್ಯಾದಿ ಭಾವಸೂಚಕ ಶಬ್ದಗಳ ಮುಂದೆ '!' – ಈ ಚಿಹ್ನೆಯನ್ನು ಉಪಯೋಗಿಸಬೇಕು. ಈ ರೀತಿಯ ಚಿಹ್ನೆ ಬರೆದರೆ ಆ ಮಾತುಗಳ ಅರ್ಥ ಸ್ಪಷ್ಟವಾಗುವುದು.

6. ಉದ್ಧರಣ ಚಿಹ್ನೆ (" ")

ಇನ್ನೊಬ್ಬರು ಹೀಗೆ ಹೇಳಿದರೆಂದು ಒಬ್ಬರ ಮಾತನ್ನು ಉದ್ಧರಿಸಿ ಬರೆಯುವಾಗ ಅಥವಾ ಇನ್ನೊಬ್ಬರ ನೇರ ಮಾತುಗಳನ್ನು ತೋರಿಸುವಾಗ " " – ಈ ಚಿಹ್ನೆಯನ್ನು ಉಪಯೋಗಿಸಬೇಕು.

7. ವಾಕ್ಯವೇಷ್ಟನ ಚಿಹ್ನೆ (' ')

ಬರವಣಿಗೆಯಲ್ಲಿ ಪಾರಿಭಾಷಿಕ ಪದಗಳನ್ನೂ, ವಿಶಿಷ್ಟ ಪದಗಳನ್ನು ಬಳಸಿದಾಗ ' ' – ಈ ಚಿಹ್ನೆಯನ್ನು ಉಪಯೋಗಿಸಬೇಕು.

5th-std_Term 2_Kannada_Reader_CBSE_KM.indd 92 7/9/2019 3:26:49 PM

ಘಟಕ ಆರು

ವೃತ್ತಿ,ವಾಣಿಜ್ಯ ಮತ್ತು ನಾಗರೀಕತೆ

ಪದ್ಯ	:	ದುಡಿಮೆ	– ಚನ್ನವೀರ ಕಣವಿ
ಗದ್ಯ	:	ಮಲ್ಲಜ್ಜಿಯ ಮಳಿಗೆ	– ಸಂಗ್ರಹ
ಉಪಪಠ್ಯ	:	ಮಾಸ್ತಿಯವರ ಮಾತೃಪ್ರೇಮ	– ಬೆಳಗೆರೆ ಕೃಷ್ಣಶಾಸ್ತ್ರಿಗಳು
ವ್ಯಾಕರಣ	:	ಕಾಲಗಳು	





ಕಲಿಕಾ ಉದ್ದೇಶಗಳು

- ವಿದ್ಯಾರ್ಥಿಗಳು ವಿವಿಧ ವೃತ್ತಿಗಳ ಬಗ್ಗೆ ಅರ್ಥ ಮಾಡಿಕೊಳ್ಳುವುದು.
- ವಿದ್ಯಾರ್ಥಿಗಳು ವೃತ್ತಿ ಗೌರವವನ್ನು ತಿಳಿದುಕೊಳ್ಳುವುದು.
- ವಿದ್ಯಾರ್ಥಿಗಳು ಅಂಚೆ ಪತ್ರದ ಬಗ್ಗೆ ಆಸಕ್ತಿಯನ್ನು ಹೊಂದುವುದು.
- ವಿದ್ಯಾರ್ಥಿಗಳು ಮಾತೃಪ್ರೇಮದ ಮಹತ್ವವನ್ನು ಅರಿತುಕೊಳ್ಳುವುದು.

5th-std_Term 2_Kannada_Reader_CBSE_KM.indd 93 7/9/2019 3:26:50 PM

ಘಟಕ ಆರು

ದುಡಿಮೆ

ಪದ್ಯ

– ಚನ್ನವೀರ ಕಣವಿ

ಆಶಯ

'ಕೈ ಕೆಸರಾದರೆ ಬಾಯಿ ಮೊಸರು', 'ಕಾಯಕವೇ ಕೈಲಾಸ' ಎಂಬ ಅನುಭವದ ನುಡಿಗಳಿವೆ. ಇವು ಮಾನವ ಜೀವನದಲ್ಲಿ ದುಡಿಮೆಯ ಮಹತ್ವವನ್ನು ಹೇಳುತ್ತವೆ. ಕಷ್ಟಪಟ್ಟು ಕೆಲಸ ಮಾಡುವುದರಿಂದ ಆಗುವ ಅನುಭವವನ್ನು ಪಡೆದು ಒಳ್ಳೆಯ ಫಲದೊಂದಿಗೆ ಗುರಿಯನ್ನು ಮುಟ್ಟಬಹುದು. ನಿರಂತರ ದುಡಿಮೆಯಿಂದ ಸ್ವಾವಲಂಬನೆಯನ್ನು ಪಡೆಯುವುದರೊಂದಿಗೆ ಸ್ವಾತಂತ್ರ್ಯದ ಸವಿಯನ್ನು ಸವಿಯಬಹುದು. ಕಣವಿಯವರ ಈ ಕವಿತೆಯು ದುಡಿಮೆಯ ಪ್ರಯೋಜನಗಳನ್ನು ಸುಂದರವಾದ ನಿದರ್ಶನಗಳ ಮೂಲಕ ಹೇಳುತ್ತಿದೆ. ದೇಶವನ್ನು ಕಟ್ಟುವುದಕ್ಕೆ ಸಹ ಜನರ ದುಡಿಮೆಯೇ ಕಾರಣವಾಗುವುದು ಎಂದು ಸೂಚಿಸುತ್ತದೆ.



ಸಿಪ್ಪೆಯ ಸುಲಿದು ತೆಗೆದರೆ ಮಾತ್ರ
ಹಣ್ಣಿನ ತಿರುಳನು ಮೆಲಬಹುದು
ತೆಂಗಿನ ಕಾಯಿಯ ಚಿಪ್ಪನು ಒಡೆದರೆ
ಕೊಬ್ಬರಿ ತಿರುಳನು ತಿನಬಹುದು ‖1‖

ಅಕ್ಕಿಯ ಸುಡುಸುಡು ನೀರೊಳು ಕುದಿಸಲು
ಗಮಗಮ ಅನ್ನವನುಣಬಹುದು
ಅರಿವೆಯ ತಂದು ರಾಟೆಗೆ ಹೊಲಿದರೆ
ಚಂದದ ಅಂಗಿಯ ತೊಡಬಹುದು ‖2‖

ಅಕ್ಷರ ಓದಲು ಬರೆಯಲು ಕಲಿತರೆ
ಕವಿತಾ ಕತೆಗಳು ತಿಳಿಯುವುವು
ದಿನವೂ ತಪ್ಪದೆ ಶಾಲೆಗೆ ಹೋದರೆ
ಪ್ರಶ್ನೆಗೆ ಉತ್ತರ ಹೊಳೆಯುವುವು ‖3‖



ದಿನದಿನ ಹೂವಿನ ಬಂಡನು ಹೀರಲು
ಜೇನುತುಪ್ಪದ ಕೊಡ ತುಂಬುವುದು
ಹನಿಹನಿ ಸೆಳಕಿನ ಮಳೆ ಸುರಿದಾಗಲೆ
ಹಳ್ಳ ಬಾವಿ ಕೆರೆ ತುಳುಕುವುವು ‖4‖

ಎಲ್ಲರು ತಮ್ಮಯ ಕೆಲಸವ ತಾವೇ
ಮಾಡಲು ದೇಶವು ಬೆಳೆಯುವುದು
ದುಡಿದರೆ ಮಾತ್ರವೆ ದೊಡ್ಡವನಾಗುವೆ
ಸ್ವಾತಂತ್ರ್ಯದ ಸವಿ ತಿಳಿಯುವುದು ‖5‖

5th-std_Term 2_Kannada_Reader_CBSE_KM.indd 94 7/9/2019 3:26:50 PM

ಪದಗಳ ಅರ್ಥ

ಅರಿವೆ–ಬಟ್ಟೆ; ಚಿಪ್ಪು–ತೆಂಗಿನ ಕರಟ; ತಿರುಳು–ಸತ್ವ, ಸಾರ; ತುಳುಕು–ತುಂಬಿಚೆಲ್ಲು, ಹೊರಚೆಲ್ಲು; ಬಂಡು–ಮಕರಂದ; ಮೆಲು–ತಿನ್ನು; ರಾಟೆ–ನೂಲುವ ಸಾಧನ; ಸೆಳಕು–ಒಂದು ಬಾರಿ ಬಂದು ನಿಲ್ಲುವ ಮಳೆಯ ಅವಧಿ.

ಕವಿ – ಕಾವ್ಯ ಪರಿಚಯ



ಚನ್ನವೀರ ಕಣವಿಯವರು 28.06.1928ರಲ್ಲಿ ಈಗಿನ ಗದಗ ಜಿಲ್ಲೆಯ ಹೊಂಬಳದಲ್ಲಿ ಜನಿಸಿದರು. ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ಮತ್ತು ಪ್ರಕಟನ ವಿಭಾಗದ ನಿರ್ದೇಶಕರಾಗಿ ಇವರು ಸೇವೆ ಸಲ್ಲಿಸಿರುತ್ತಾರೆ. ಇವರು 'ಕಾವ್ಯಾಕ್ಷಿ', 'ಭಾವಜೀವಿ', 'ಆಕಾಶಬುಟ್ಟಿ', ದೀಪಧಾರಿ', 'ನೆಲಮುಗಿಲು, 'ಚಿರಂತನ ದಾಹ', 'ಮಣ್ಣಿನ ಮೆರವಣಿಗೆ' ಮೊದಲಾದ ಕವನ ಸಂಕಲನಗಳನ್ನು ರಚಿಸಿದ್ದಾರೆ.

'ಹಕ್ಕಿ ಪುಚ್ಚ' ಇವರ ಶಿಶುಕಾವ್ಯ ಸಂಕಲನ. 'ಸಾಹಿತ್ಯ ಚಿಂತನ', 'ಕಾವ್ಯಾನುಸಂಧಾನ' ಇವರ ವಿಮರ್ಶಾ ಕೃತಿ. 1996ರಲ್ಲಿ ಹಾಸನದಲ್ಲಿ ನಡೆದ 65ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರ 'ಜೀವ ಧ್ವನಿ' ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಇವರು ಪಂಪ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ.

ಪ್ರಸ್ತುತ 'ದುಡಿಮೆ' ಕವನವನ್ನು 'ಕಣವಿ' ಸಮಗ್ರ ಕಾವ್ಯ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

ಮೌಲ್ಯಮಾಪನ

ಓದೋಣ! ಚಿಂತಿಸೋಣ! ಬರೆಯೋಣ!

1. ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.

1. ಸ್ವಾತಂತ್ರ್ಯದ ಸವಿಯನ್ನು ತಿಳಿಯಲು ಏನನ್ನು ಮಾಡಿದಾಗ ಮಾತ್ರ ಸಾಧ್ಯ?

ಉತ್ತರ : _____

(ಊಟ, ನಿದ್ರೆ, ಪಾಠ, ದುಡಿಮೆ).

5th-std_Term 2_Kannada_Reader_CBSE_KM.indd 95 7/9/2019 3:26:50 PM

2 ಕವಿತೆ, ಕಥೆಗಳನ್ನು ತಿಳಿಯಲು ಏನನ್ನು ಕಲಿಯಬೇಕು?

ಉತ್ತರ : _____

(ಓದು–ಬರಹ, ಆಟ–ಪಾಠ, ಹಾಡು–ಹಸೆ, ನಾಟಕ–ನೃತ್ಯ).

3 ಅಕ್ಕಿಯನ್ನು ಸುಡುಸುಡು ನೀರಿನಲ್ಲಿ ಏನು ಮಾಡಿದಾಗ ಊಟ ಮಾಡಲು ಘಮಘಮ ಅನ್ನವು ದೊರೆಯುತ್ತದೆ ?

ಉತ್ತರ : _____

(ಕುದಿಸಿದಾಗ, ಆರಿಸಿದಾಗ, ನೆನೆಸಿದಾಗ, ಸುರಿದಾಗ).

4 ಹಳ್ಳ, ಬಾವಿ, ಕೆರೆಗಳು ತುಂಬಿ ತುಳುಕಲು ಹನಿಹನಿ ಸೆಳಕಿನ ಯಾವುದು ಸುರಿಯಬೇಕು?

ಉತ್ತರ : _____

(ಹಾಲು, ಹಿಮ, ಜೇನು, ಮಳೆ).

2. ಹೊಂದಿಸಿ ಬರೆಯಿರಿ.

1. ಅಕ್ಷರ – ಜೇನುತುಪ್ಪ
2. ಅರಿವೆ – ಕೊಬ್ಬರಿ
3. ಅಕ್ಕಿ – ಕವಿತೆ
4. ತೆಂಗು – ಬಟ್ಟೆ
5. ಬಂಡು – ಅನ್ನ

3 ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೇ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.

1) ಹಣ್ಣಿನ ತಿರುಳು : ಸಿಪ್ಪೆಯ ಸುಲಿದರೆ : : ಕೊಬ್ಬರಿ : _____

2) ಗಮಗಮ ಅನ್ನ : ಅಕ್ಕಿಯ ಕುದಿಸಲು : : ಚಂದದ ಅಂಗಿ : _____

3) ಕವಿತಾ ಕಥೆ : ಅಕ್ಷರ ತಿಳಿದರೆ : : ಪ್ರಶ್ನೆಗೆ ಉತ್ತರ : _____

4 ಈ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1) ಹಣ್ಣಿನ ತಿರುಳನ್ನು ಸವಿಯಲು ಯಾವಾಗ ಸಾಧ್ಯವಾಗುತ್ತದೆ ?

2) 'ದುಡಿಮೆ' ಪದ್ಯದಲ್ಲಿ ಹೇಳಿರುವಂತೆ ಕೊಬ್ಬರಿಯನ್ನು ನಾವು ಯಾವಾಗ ತಿನ್ನಬೇಕು?

3) 'ದುಡಿಮೆ' ಕವನದಲ್ಲಿ ಹೇಳಿರುವಂತೆ ಓದಲು ಬರೆಯಲು ಕಲಿಯುವುದರಿಂದ ಆಗುವ ಪ್ರಯೋಜನವೇನು ?

5th-std_Term 2_Kannada_Reader_CBSE_KM.indd 96 7/9/2019 3:26:50 PM

4) ಜೇನಿನ ಕೊಡ ಯಾವಾಗ ತುಂಬುವುದೆಂದು ಚೆನ್ನವೀರ ಕಣವಿಯವರು ಹೇಳಿದ್ದಾರೆ ?

5) ಸ್ವಾತಂತ್ರ್ಯದ ಸವಿ ಯಾವಾಗ ತಿಳಿಯುವುದೆಂದು ಕವಿ ಕಣವಿಯವರು ಹೇಳಿದ್ದಾರೆ ?

6) 'ದುಡಿಮೆ' ಕವನದಲ್ಲಿ ಹೇಳಿರುವಂತೆ ಹಳ್ಳ ಬಾವಿ ಕೆರೆಗಳು ತುಳುಕುವುದು ಯಾವಾಗ ?

7) ಪ್ರಶ್ನೆಗೆ ಉತ್ತರ ಯಾವಾಗ ಹೊಳೆಯುವುದೆಂದು 'ದುಡಿಮೆ' ಕವನದಲ್ಲಿ ಹೇಳಲಾಗಿದೆ ?

5. ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.

1) 'ದುಡಿಮೆ' ಪದ್ಯದಲ್ಲಿ ಹೇಳಿರುವಂತೆ ಅನ್ನವನ್ನು ಉಣ್ಣಲು ಅಂದದ ಅಂಗಿಯನ್ನು ತೊಡಲು ಏನು ಮಾಡಬೇಕು ?

2) ಹಳ್ಳ, ಬಾವಿ, ಕೆರೆ, ಜೇನುತುಪ್ಪದ ಕೊಡ ಯಾವಾಗ ತುಂಬುವುದೆಂದು 'ದುಡಿಮೆ' ಪದ್ಯದಲ್ಲಿ ಕವಿ ಚೆನ್ನವೀರ ಕಣವಿಯವರು ಹೇಳಿದ್ದಾರೆ ?

3) 'ದುಡಿಮೆ'ಯಿಲ್ಲದೆ ಬಾಳಿಲ್ಲ, ದೇಶದ ಪ್ರಗತಿಗೆ ದುಡಿಮೆಯೇ ಮೂಲ ಎಂಬ ಭಾವನೆ 'ದುಡಿಮೆ' ಪದ್ಯದಲ್ಲಿ ಹೇಗೆ ವ್ಯಕ್ತವಾಗಿದೆ ?

ಚಿಂತನಾಶೀಲ ಪ್ರಶ್ನೆ.

1) ಸತತ ಪ್ರಯತ್ನದಿಂದ ಉತ್ತಮವಾದುದನ್ನು ಪಡೆಯಬಹುದು ಎಂಬುದನ್ನು ಈ ಪದ್ಯದ ಮೂಲಕ ಓದಿ ಚಿಂತಿಸಿ, ಉತ್ತರಿಸಿ.



ಭಾಷೆಯೊಂದಿಗೆ ಆಟ

1. ಕೆಳಗಿನ ಅಕ್ಷರಗಳನ್ನು ಕ್ರಮವಾಗಿ ಜೋಡಿಸಿ ಅರ್ಥಪೂರ್ಣ ಪದವನ್ನು ರಚಿಸಿರಿ.

ಮಾದರಿ : ಗಿಕಾತೆಂಯಿನ = ತೆಂಗಿನ ಕಾಯಿ

1) ನುಪ್ಪಜೇತು : _____

2) ಬಂನಹೂಡುವಿ : _____

3) ಸತಂದವಿತ್ರ್ಯಸ್ವಾ : _____

5th-std_Term 2_Kannada_Reader_CBSE_KM.indd 97 7/9/2019 3:26:51 PM

2. ಕೆಳಗಿನ ಚೌಕದಲ್ಲಿರುವ ಅಕ್ಷರಗಳನ್ನು ಎಡಕ್ಕೂ, ಬಲಕ್ಕೂ, ಮೇಲಕ್ಕೂ, ಕೆಳಕ್ಕೂ, ಓರೆಯಾಗಿ ಜೋಡಿಸಿ, ಚೌಕದಲ್ಲಿ ಅಡಗಿರುವ ವೃತ್ತಿಪರ ಶ್ರಮಜೀವಿಗಳನ್ನು ಮಾದರಿಯಲ್ಲಿ ತೋರಿಸಿರುವಂತೆ ಕಂಡು ಹಿಡಿದು ಗುರುತಿಸಿರಿ.

ಮಾದರಿ: ನೇಕಾರ

ಬ	ಚ	ನ	ಯ	ಶ	ನ	ಲ	ಜ	ತ
ಡ	ಪ	ಮ್ಮಾ	ವ	ಸ	ಬ	ಬ	ಲ	ಪಾ
ಗಿ	ಒ	ಸ	ರ	ರೈ	ಗ	ಶ	ಗಾ	ಸ
ಖು	ಗ	ಅಂ	ದ	ತ	ಳ	ವಾ	ರ	ನೆ
ಅ	ಕ	ಮ	ಕ	ಚ	ಕುಂ	ನಿ	ಜೋ	ಕ್ಷಾ
ಟ	ಚ	ತ	ಧ	ಮ್ಮಾ	ಬಾ	ನಾ	ಮಿ	ಎ
ಕ್ಕ	ಹ	ನೇ	ಕಾ	ರ	ರ	ಗು	ಮ	ಕ
ಗ	ಮಾ	ರ	ಸ	ಮ	ಕೆ	ಗಾ	ಣಿ	ಗ
ಕೂ	ಲಿ	ಕಾ	ರ	ಣ	ಲ	ದೆ	ಹಾ	ರ

3. ದುಡಿಮೆಯ ಮಹತ್ವವನ್ನು ತಿಳಿಸುವ ಈ ಕೆಳಗಿನ ಗಾದೆಗಳನ್ನು ಓದಿ ಅವುಗಳ ಒಳಾರ್ಥವನ್ನು ತಿಳಿಯಿರಿ.

1) ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು.

2) ಕೈ ಕೆಸರಾದರೆ ಬಾಯಿ ಮೊಸರು.

3) ಮಾಡಿದವ ಉಂಡ, ಮಲಗಿದವ ಕೆಟ್ಟ.

4) ರಟ್ಟೆ ಮುರಿಯಬೇಕು, ರೊಟ್ಟಿ ತಿನ್ನಬೇಕು.

5) ಆಳಾಗಿ ದುಡಿ, ಅರಸಾಗಿ ಉಣ್ಣು.

6) ಕಾಯಕವೇ ಕೈಲಾಸ.

7) 'ಮಾಡಿದ್ದುಣ್ಣೋ ಮಹರಾಯ.

5th-std_Term 2_Kannada_Reader_CBSE_KM.indd 98 7/9/2019 3:26:51 PM

ಘಟಕ ಆರು

ಮಲ್ಲಜ್ಜಿಯ ಮಳಿಗೆ

ಗದ್ಯ

– ಸಂಗ್ರಹ

ಆಶಯ

ಸಮಾಜದಲ್ಲಿ ಕೆಲವರ ಜೀವನ ಆದರ್ಶಪ್ರಾಯ. ಅಂತಹವರು ಇತರರ ಸಹಾಯಕ್ಕಾಗಿಯೇ ನಾವು ಇರುವುದು ಎಂಬಂತೆ ಜೀವನ ನಡೆಸುತ್ತಾರೆ. ಅವರು ಸಾಮಾನ್ಯ ಜನರ ನಡುವೆ ಸಾಮಾನ್ಯರಂತೆ ಬಾಳುತ್ತಾರೆ. ಆದರೆ ದಾರ್ಶನಿಕ ಗುಣಗಳನ್ನು ಮೈಗೂಡಿಸಿಕೊಂಡಿರುತ್ತಾರೆ. ಅಂಥ ವ್ಯಕ್ತಿಗಳನ್ನು ಗುರುತಿಸಿ ಮೆಚ್ಚಿ, ಪ್ರಶಂಸಿಸಬೇಕೆಂಬುದೇ ಇಲ್ಲಿನ ಆಶಯ.



ದಿನಾಂಕ : 03.06.2019

ಸ್ಥಳ : ತಾಳವಾಡಿ

ಪ್ರೀತಿಯ ಸಹೋದರಿ ಸೌಜನ್ಯಳಿಗೆ,

ನಿನ್ನ ಅಣ್ಣನು ಮಾಡುವ ಆಶೀರ್ವಾದಗಳು. ನಾವು ಮನೆಯಲ್ಲಿ ಎಲ್ಲರೂ ಕ್ಷೇಮವಾಗಿದ್ದೇವೆ. ನೀನು, ಚಿಕ್ಕಮ್ಮ, ಚಿಕ್ಕಪ್ಪ ಎಲ್ಲರೂ ಕ್ಷೇಮವಾಗಿರುವಿರಿ ಎಂದು ಭಾವಿಸುತ್ತೇನೆ. ನಿನ್ನ ಪತ್ರ ತಲುಪಿತು. ನೀನು ಬರೆದ ಮಾಲ್‌ಗಳ ವಿಷಯ ಅದರಲ್ಲಿ ವಿಶೇಷವಾಗಿತ್ತು. ನನ್ನೂರಿನಲ್ಲೂ ಒಂದು ಮಳಿಗೆ ಇದೆ. ಅದು ನೀನು ತಿಳಿಸಿದ ಮಾಲ್‌ಗಿಂತ ವಿಶೇಷವಾಗಿದೆ. ಅದುವೇ 'ಮಲ್ಲಜ್ಜಿಯ ಮಳಿಗೆ!' ಏನು ಅದರ ವಿಶೇಷ ಅಂತೀಯಾ? ಮುಂದೆ ಓದು ಗೊತ್ತಾಗುತ್ತದೆ...

5th-std_Term 2_Kannada_Reader_CBSE_KM.indd 99 7/9/2019 3:26:52 PM

ಮಿಠಾಯಿ ಎಂದರೆ ಎಲ್ಲರಿಗೂ ಇಷ್ಟ. ಅದರಲ್ಲೂ ಮಕ್ಕಳಿಗಂತೂ ಬಲು ಇಷ್ಟ. ಹಾಗೆಯೇ ಮಲ್ಲಜ್ಜಿ ಕೂಡ. ಆಕೆ ನಮ್ಮೂರಿನ ಎಲ್ಲರಿಗೂ ಗೊತ್ತು. ಸುತ್ತಮುತ್ತಲಿನ ಊರಿನವರಿಗೂ ಚಿರಪರಿಚಿತಳು. ಮಲ್ಲಜ್ಜಿಯಿಂದ ಮಿಠಾಯಿ ಪ್ರಸಿದ್ಧವೋ, ಮಿಠಾಯಿಯಿಂದ ಮಲ್ಲಜ್ಜಿ ಪ್ರಸಿದ್ಧಳೋ ಗೊತ್ತಿಲ್ಲ. ಮಲ್ಲಜ್ಜಿ ಮತ್ತು ಮಿಠಾಯಿ ಎರಡೂ ಇರುವ 'ಮಳಿಗೆ' ಎಲ್ಲರಿಗೂ ಒಂದು ರೀತಿಯ 'ತಂಗುದಾಣ'ವೇ ಸರಿ.

ಮಲ್ಲಜ್ಜಿಯ ಮಳಿಗೆ ನೋಡಲು ಚಿಕ್ಕದಾದರೂ ಅಲ್ಲಿ ಎಲ್ಲವೂ ದೊರಕುತ್ತದೆ. ಕಡಲೆ, ಪುರಿ, ಕೊಬ್ಬರಿ, ಮಿಠಾಯಿಗಳಿಂದ ಹಿಡಿದು ಇತ್ತೀಚಿನ ಪ್ಯಾಕೆಟ್ ತಿನಿಸುಗಳೂ ಸಿಗುತ್ತವೆ. ಮಲ್ಲಜ್ಜಿಗೆ ಬೇಕಾದ ಎಲೆ ಅಡಿಕೆ, ಸಿಂಗಾರಪ್ಪನಿಗೆ ಸಕ್ಕರೆ–ಚಹಾಪುಡಿ, ಪೂಜಾರಪ್ಪನಿಗೆ ಊದುಕಡ್ಡಿ–ಕರ್ಪೂರ, ಬೀಗರಿಗೆ ಬಿಸ್ಕೇಟು–ಖಾರ, ಹೆಣ್ಣುಮಕ್ಕಳಿಗೆ ಸ್ನೋ–ಪೌಡರ್, ಚಿಕ್ಕಮಕ್ಕಳಿಗೆ ಚಾಕಲೇಟು–ಪೆಪ್ಪರಮಿಂಟು, ಅಮ್ಮನಿಗೆ ಕುಂಕುಮಬೊಟ್ಟು, ಅಪ್ಪನ ವಾಚಿಗೆ ಬೇಕಾದ ಷೆಲ್ಲು... ಹೀಗೆ ಎಲ್ಲರಿಗೂ ಬೇಕಾಗುವ ವಸ್ತುಗಳು ಇಲ್ಲಿ ಲಭ್ಯ. ಆದ್ದರಿಂದ ಜನರು ಪ್ರತಿದಿನ ಒಂದಿಲ್ಲೊಂದು ಬಾರಿ ಈ ತಂಗುದಾಣವನ್ನು ದರ್ಶನ ಮಾಡುತ್ತಾರೆ.

ಮಕ್ಕಳ ಕೈಗೆ ದುಡ್ಡು ಸಿಕ್ಕಿದರೆ ಸಾಕು, ಮಲ್ಲಜ್ಜಿಯ ಅಂಗಡಿಗೇ ಓಟ! ಅಳುತ್ತಾ ಬಂದ ಪುಟಾಣಿ ಮಕ್ಕಳೂ ಅಲ್ಲಿ ಸುಮ್ಮನಾಗಿ ಬಿಡುತ್ತಾರೆ. ದುಡ್ಡಿಲ್ಲದೆ ಬಂದ ಪುಟ್ಟ ಮಕ್ಕಳಿಗೂ ಮಲ್ಲಜ್ಜಿ ನಗುತ್ತಾ ಪ್ರೀತಿಯಿಂದ ಮಿಠಾಯಿ ಕೊಡುತ್ತಾಳೆ. ನಾನು ಪುಟಾಣಿಯಾಗಿದ್ದಾಗ ಹೀಗೆಯೇ ಮಿಠಾಯಿ ತೆಗೆದುಕೊಂಡಿದ್ದೇನಂತೆ!

'ಈಗ ದುಡ್ಡಿಲ್ಲಜ್ಜೀ...' ಎಂದು ಹೇಳಿ ದೊಡ್ಡವರೂ ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಾರೆ. ಹಣವಿದ್ದಾಗ ತಪ್ಪದೇ ತಂದು ಕೊಡುತ್ತಾರೆ. ತುರ್ತಾಗಿ ಬೇಕಾದಾಗ ಸಾಲವಾಗಿ ಹಣವನ್ನೂ ಪಡೆದು ಹೋಗುತ್ತಾರೆ. ಹೀಗಾಗಿ ಮಲ್ಲಜ್ಜಿಯ ಮಳಿಗೆ ಒಂದು ಪ್ರೀತಿಯ 'ಸಹಕಾರಿ ಬ್ಯಾಂಕ್' ಇದ್ದಂತೆ!

ನನ್ನೂರಿಗೆ ಯಾರು ಹೊಸಬರು ಬಂದರೂ ಮೊದಲು ಮಾತನಾಡಿಸುವುದು ಮಲ್ಲಜ್ಜಿಯನ್ನೇ. ಯಾರ ಮನೆ ಬೇಕೋ ತೋರಿಸುತ್ತಾಳೆ. ಯಾವ ವಿಷಯ ಬೇಕೋ ತಿಳಿಸುತ್ತಾಳೆ. ಇಲ್ಲಿಯ ಎಲ್ಲಾ ಕುಟುಂಬಗಳೂ ಜನರೂ ಮಕ್ಕಳೂ ಮಲ್ಲಜ್ಜಿಗೆ ಗೊತ್ತು! ಮದುವೆಯಾಗುವ ಹುಡುಗ ಹುಡುಗಿಯರ ಬಗ್ಗೆ ಕೇಳಿದರೆ ಸಾಕು, ಅವರ ಜಾತಕ ಸಮೇತ ವಿವರಿಸಿ ಬಿಡುತ್ತಾಳೆ. ಯಾರಾದರೂ ಯಾರಿಗಾದರೂ ಯಾವ ವಿಷಯವನ್ನಾದರೂ ತಿಳಿಸಲು ಹೇಳಿದರೆ ಅವರಿಗೆ ಆ ವಿಷಯವನ್ನು ಯಥಾವತ್ತಾಗಿ ತಿಳಿಸಿಬಿಡುತ್ತಾಳೆ ಮಲ್ಲಜ್ಜಿ. ಪತ್ರಿಕೆ, ಪತ್ರಗಳನ್ನು ಸಂಬಂಧಿಸಿದವರಿಗೆ ತಪ್ಪದೇ ತಲುಪಿಸುತ್ತಾಳೆ. ಯಾರು ಎಲ್ಲಿಗೆ ಏಕೆ ಹೋಗಿದ್ದಾರೆ, ಯಾವಾಗ ಬರುತ್ತಾರೆ ಎಂಬುದೆಲ್ಲವೂ ಮಲ್ಲಜ್ಜಿಗೆ ತಿಳಿದಿರುತ್ತದೆ. ಟೆಂಪೋ, ಜೀಪು, ಬಸ್ಸುಗಳು ಬಂದು ಹೋಗುವ ಸಮಯದ ವಿವರವೂ ಇಲ್ಲಿ ಲಭ್ಯ. ಹಾಗಾಗಿ ಮಲ್ಲಜ್ಜಿಯ ಮಳಿಗೆ ಒಂದು ಉಚಿತ 'ಸಂಪರ್ಕ ಕೇಂದ್ರ' ಇದ್ದಂತೆ!



5th-std_Term 2_Kannada_Reader_CBSE_KM.indd 100 7/9/2019 3:26:52 PM

ಮಲ್ಲಜ್ಜಿ ಯಾರ ಮೇಲೂ ಸಿಟ್ಟು ಮಾಡಿಕೊಳ್ಳುವುದಿಲ್ಲ. ಎಲ್ಲರೊಂದಿಗೂ ನಗುನಗುತ್ತಾ ಮಾತನಾಡುತ್ತಾಳೆ. ಜನರ ಸಮಸ್ಯೆಗಳನ್ನು ಸುಲಭವಾಗಿ ಪರಿಹರಿಸಿ ಬಿಡುತ್ತಾಳೆ. ಮಕ್ಕಳಿಂದ ಹಿಡಿದು ಮುದುಕರವರೆಗಿನ ದುಃಖವನ್ನು ದೂರ ಮಾಡಿ ಬಿಡುತ್ತಾಳೆ. ಮಳಿಗೆಯ ಮುಂದಿರುವ ಚಪ್ಪಡಿ ಕಲ್ಲುಗಳೇ ಇಲ್ಲಿ ಕಟಕಟೆ. ಮಲ್ಲಜ್ಜಿಯ ಕೋರ್ಟಿನಲ್ಲಿ ಯಾವ ವಕೀಲರ ಸಾಕ್ಷಿಗಳೂ ಬೇಕಿಲ್ಲ. ಎಷ್ಟೋ ಬಾರಿ ದೂರು ನ್ಯಾಯಾಲಯದಲ್ಲಿಯೂ ಬಗೆ ಹರಿಯುವುದಿಲ್ಲ. ಕೋರ್ಟು, ಶುಲ್ಕ, ವಕೀಲರ ಫೀಸು, ಯಾವುದೂ ಇಲ್ಲಿಲ್ಲ. ಮಲ್ಲಜ್ಜಿ ನೀಡುವ ತೀರ್ಪು ಯಾವ ನ್ಯಾಯಾಧೀಶರ ತೀರ್ಪಿಗೂ ಕಡಿಮೆ ಇಲ್ಲ. ಆದ್ದರಿಂದ ಮಲ್ಲಜ್ಜಿಯ ಮಳಿಗೆ ಒಂದು ಜನಪ್ರಿಯ 'ಜನತಾ ನ್ಯಾಯಾಲಯ' ಇದ್ದಂತೆ.

ನನಗಂತೂ ಈ ಮಳಿಗೆ ಆಶ್ಚರ್ಯದಾಯಕವಾಗಿದೆ. ಇದರ ಬಾಗಿಲು ಸದಾ ತೆರೆದೇ ಇರುತ್ತದೆ. ಮಲ್ಲಜ್ಜಿ ಅಂಗಡಿಯಲ್ಲಿಯೇ ಇರುತ್ತಾಳೆ. ಯಾವ ಹೊಸ ಮಿಠಾಯಿ ಚಾಕೊಲೇಟ್ ಕೇಳಿದರೂ ಕೊಟ್ಟು ಬಿಡುತ್ತಾಳೆ. ಯಾವಾಗ ವ್ಯಾಪಾರ ಮಾಡುತ್ತಾಳೋ, ವಸ್ತುಗಳನ್ನು ಯಾವಾಗ ತರುತ್ತಾಳೋ? ನನಗೆ ಬಲು ಸೋಜಿಗವಾಗಿದೆ. ಹೀಗಾಗಿ ಮಲ್ಲಜ್ಜಿಯ ಮಳಿಗೆ ನನಗೆ ಒಂದು 'ಜಾದೂ ಜಗತ್ತಿ'ದ್ದಂತೆ!

ಮಲ್ಲಜ್ಜಿಯ ಮಳಿಗೆ ಈಗ ಸ್ವಲ್ಪ ದೊಡ್ಡದಾಗಿದೆ. ಹೊಸದಾದ ಪುಸ್ತಕ, ಪೆನ್ನು ಇನ್ನೂ ತುಂಬಾ ವಸ್ತುಗಳು ಬಂದಿವೆ. ಮಲ್ಲಜ್ಜಿಯ ಮಳಿಗೆಯ ಬಗ್ಗೆ ಎಷ್ಟು ಹೇಳಿದರೂ ಸಾಲದೆನ್ನಿಸುತ್ತದೆ. ಈಗ ಇಷ್ಟಕ್ಕೆ ಸಾಕು ಮಾಡುತ್ತೇನೆ. ಮುಂದಿನ ಪತ್ರದಲ್ಲಿ ಮತ್ತಷ್ಟು ವಿವರ ಬರೆಯುತ್ತೇನೆ. ನನ್ನ ಊರಿಗೆ ಬಂದಾಗ ನಿನಗೆ ಈ 'ತಂಗುದಾಣ'ದ ದರ್ಶನ ಮಾಡಿಸುತ್ತೇನೆ. ನಿನಗಿಷ್ಟವಾದ ಮಿಠಾಯಿಯನ್ನು ಕೊಡಿಸುತ್ತೇನೆ.

ಇಂತೀ

ಅಣ್ಣನು ಮಾಡುವ ಆಶೀರ್ವಾದಗಳು

ನಿನ್ನ ಪ್ರೀತಿಯ ಸಹೋದರ

ನಿರಂಜನ್.ಜಿ

ಇವರಿಗೆ,

ಕುಮಾರಿ ಸೌಜನ್ಯ

5ನೆಯ ತರಗತಿ

ಹಿರಿಯ ಪ್ರಾಥಮಿಕ ಶಾಲೆ

ಹಾಸನೂರು, ತಾಳವಾಡಿ ತಾಲ್ಲೂಕು

ಈರೋಡು ಜಿಲ್ಲೆ.

ಪದಗಳ ಅರ್ಥ

ಆಶೀರ್ವಾದ– ಹಾರೈಕೆ; ಕೋರ್ಟ್–ನ್ಯಾಯಾಲಯ, ನ್ಯಾಯಕ್ಕಾಗಿ ವಿಚಾರಣೆ ನಡೆಯುವ ಸ್ಥಳ; ನ್ಯಾಯಾಲಯ; ಚಪ್ಪಡಿಕಲ್ಲು–ಹಾಸುಗಲ್ಲು; ತಲುಪು–ಸೇರು, ಮುಟ್ಟು; ತೀರ್ಪು–ನ್ಯಾಯ ತೀರ್ಮಾನ; ಪತ್ರ–ಓಲೆ, ಕಾಗದ; ಪ್ರಕರಣ–ಪ್ರಸಂಗ, ಸಂಭವ, ಘಟನೆ, ಸಂಗತಿ; ಪ್ರಸಿದ್ಧ–ಹೆಸರು ಗಳಿಸಿದ, ಖ್ಯಾತ, ಕೀರ್ತಿಪಡೆದ; ಮಾಲ್–ದೊಡ್ಡ ಮಳಿಗೆ, ಅಂಗಡಿಗಳ ಸಂಕೀರ್ಣ; ಶುಲ್ಕ–ಸುಂಕ, ಫೀ; ಸೋಜಿಗ–ಆಶ್ಚರ್ಯ, ಕುತೂಹಲ; ಹೊಸಬರು–ಅಪರಿಚಿತರು, ಗುರುತಿಲ್ಲದವರು;

5th-std_Term 2_Kannada_Reader_CBSE_KM.indd 101 7/9/2019 3:26:52 PM

ಕಲಿಕಾ ಫಲ

- ನಿಮ್ಮ ಊರಿನಲ್ಲಿ ಕಂಡು ಬರುವ ಮಳಿಗೆ ಅಂಗಡಿಗಳನ್ನು ಪಟ್ಟಿ ಮಾಡಿರಿ.
- ಅಂಗಡಿಗಳಲ್ಲಿ ದೊರೆಯುವ ವಸ್ತುಗಳ ಹೆಸರುಗಳನ್ನು ಬರೆಯಿರಿ.
- ನಿಮ್ಮ ಊರಿನಲ್ಲಿ ವಯಸ್ಸಾದ ಅಜ್ಜಿಯು ಮಳಿಗೆಯನ್ನು ತೆರೆದಿದ್ದರೆ ಅವರನ್ನು ಭೇಟಿ ಮಾಡಿ ಮಾತನಾಡಿರಿ.

ಮೌಲ್ಯಮಾಪನ

ಓದೋಣ! ಚಿಂತಿಸೋಣ! ಬರೆಯೋಣ!

ಅ. ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.

1. ಮಲ್ಲಜ್ಜಿಯು ನಗುತ್ತಾ ಪ್ರೀತಿಯಿಂದ _____ ಕೊಡುತ್ತಾಳೆ.

   ಅ) ಮಿಠಾಯಿ ಆ) ಎಲೆ

   ಇ) ಅಡಿಕೆ ಈ) ಖಾರ

2. ವರ _____ ಸಮೇತ ವಿವರಿಸಿ ಬಿಡುತ್ತಾಳೆ.

   ಅ) ವಯಸ್ಸು ಆ) ಜಾತಕ

   ಇ) ಊರು ಈ) ಕುಟುಂಬ

3. ಮಕ್ಕಳಿಂದ ಮುದುಕರವರೆಗಿನ _____ ದೂರ ಮಾಡಿ ಬಿಡುತ್ತಾಳೆ.

   ಅ) ದೂರುಗಳನ್ನು ಆ) ದುಃಖವನ್ನು

   ಇ) ಊರುಗಳನ್ನು ಈ) ಬೀದಿಗಳನ್ನು

4. ಇದರ ಬಾಗಿಲು ಸದಾ _____ ಇರುತ್ತದೆ.

   ಅ) ಮುಚ್ಚಿಯೇ ಆ) ಬಿರಿಕುಬಿಟ್ಟೇ

   ಇ) ತೆರೆದೇ ಈ) ಒಡೆದೇ

5. ಮಲ್ಲಜ್ಜಿಯ ಮಳಿಗೆ ಒಂದು _____ ಇದ್ದಂತೆ.

   ಅ) ಮಾರುಕಟ್ಟೆ ಆ) ಆಸ್ಪತ್ರೆ

   ಇ) ಶಾಲೆ ಈ) ಜನತಾ ನ್ಯಾಯಾಲಯ

ಆ. ಈ ಪದಗಳನ್ನು ಬಿಡಿಸಿ ಬರೆಯಿರಿ.

ಅ) ನ್ಯಾಯಾಲಯ – ---------- + ----------

ಆ) ಯಾರಿಗಾದರೂ – ---------- + ----------

ಇ. ಈ ಪದಗಳನ್ನು ಸೇರಿಸಿ ಬರೆಯಿರಿ.

ಅ) ನನ್ನ+ಊರಿಗೆ = ----------

ಆ) ವಸ್ತುಗಳು+ಅನ್ನು = ----------

5th-std_Term 2_Kannada_Reader_CBSE_KM.indd 102 7/9/2019 3:26:52 PM

ಈ. ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1) ನಿರಂಜನ್ ಯಾರಿಗೆ ಪತ್ರವನ್ನು ಬರೆದನು ?

2) ಯಾರಿಗೆ ಮಿಠಾಯಿ ಎಂದರೆ ಇಷ್ಟ ?

3) ಮಲ್ಲಜ್ಜಿ ಎಲ್ಲರೊಂದಿಗೆ ಹೇಗೆ ಮಾತನಾಡುತ್ತಾಳೆ ?

4) ಮಲ್ಲಜ್ಜಿಯ ಕೋರ್ಟಿನಲ್ಲಿ ವಕೀಲರ ಶುಲ್ಕ ಎಷ್ಟು ?

5) ನಿರಂಜನ್‌ಗೆ ಮಲ್ಲಜ್ಜಿಯ ಮಳಿಗೆ ಯಾವ ಜಗತ್ತಿನಂತೆ ತೋರಿದೆ ?

ಉ. ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1) ಮಲ್ಲಜ್ಜಿಯ ಮಳಿಗೆಯಲ್ಲಿ ದೊರೆಯುವ ವಸ್ತುಗಳು ಯಾವುವು ? ಪಟ್ಟಿ ಮಾಡಿರಿ.

2) ಮಲ್ಲಜ್ಜಿಯ ನ್ಯಾಯಾಲಯ ಕುರಿತು ವಿವರಿಸಿರಿ ?

3) ನಿರಂಜನ್‌ಗೆ ಮಲ್ಲಜ್ಜಿಯ ಮಳಿಗೆ ಜಾದೂ ಜಗತ್ತು ಎನ್ನಿಸಿದ್ದೇಕೆ ?

ಊ. ಚಿಂತನಾಶೀಲ ಪ್ರಶ್ನೆ

* ದೂರದಲ್ಲಿರುವ ನಿಮ್ಮ ತಂದೆಯವರಿಗೆ ಮಳಿಗೆ ಅಂಗಡಿಯನ್ನು ತೆರೆಯುವಂತೆ ಪತ್ರವೊಂದನ್ನು ಬರೆಯಿರಿ.

ಶುಭ ನುಡಿ

1) ಜನಸೇವೆಯಿಂದ ಜನಮನ್ನಣೆ ದೊರಕುತ್ತದೆ.

2) ವೃತ್ತಿಯೊಂದರ ಸೇವೆಯು ಉತ್ತಮವಾದ ಪ್ರವೃತ್ತಿ.

3) ಎಲ್ಲರೊಳಗೊಂದಾಗುವ ಬಾಳು ಆದರ್ಶದ ಬಾಳು.

4) ಅನುಭವದ ನುಡಿಗಳು ಬದುಕಿಗೆ ದಾರಿದೀಪವಾಗಿರುತ್ತವೆ.

5th-std_Term 2_Kannada_Reader_CBSE_KM.indd 103 7/9/2019 3:26:52 PM

ಘಟಕ ಆರು

ಮಾಸ್ತಿಯವರ ಮಾತೃಪ್ರೇಮ

ಉಪಪಠ್ಯ

–ಬೆಳಗೆರೆ ಕೃಷ್ಣಶಾಸ್ತ್ರಿಗಳು

ಆಶಯ

ನಮ್ಮ ಸಂಸ್ಕೃತಿಯಲ್ಲಿ ಸ್ತ್ರೀಯರನ್ನು ಕುರಿತಂತೆ ಗೌರವದ ಭಾವನೆ ಇದೆ. ಅದರಲ್ಲೂ ತಾಯಿಯನ್ನು ಕುರಿತಂತೆ ಅತಿ ಹೆಚ್ಚಿನ ಪ್ರೀತಿ ಆದರಗಳಿವೆ. ಇದಕ್ಕೆ ಕನ್ನಡದ ಹಿರಿಯ ಚೇತನ ಮಾಸ್ತಿಯವರದು ಒಂದು ಆದರ್ಶ. ಅವರಿಗೆ ಸ್ತ್ರೀಯರ ಬಗ್ಗೆ ಹಾಗೂ ಅವರ ತಾಯಿಯ ಬಗ್ಗೆ ಇದ್ದ ಗೌರವ ವಿಶೇಷವಾದುದು. ಮಾಸ್ತಿಯವರಿಗೆ ಸ್ತ್ರೀಯರ ಬಗೆಗೆ ಇದ್ದ ಗೌರವವನ್ನು ಲೇಖಕರಾದ ಬೆಳೆಗೆರೆ ಕೃಷ್ಣಶಾಸ್ತ್ರಿಗಳು ಈ ಗದ್ಯಭಾಗದಲ್ಲಿ ನಿರೂಪಿಸಿದ್ದಾರೆ.

1975ನೇ ಇಸವಿ ಅಂತರರಾಷ್ಟ್ರೀಯ ಮಹಿಳಾ ವರ್ಷ. ಒಂದು ಮಧ್ಯಾಹ್ನ ಪೂಜ್ಯ ಮಾಸ್ತಿಯವರನ್ನು ಅವರ ನಿವಾಸದಲ್ಲಿ ಕಂಡೆ. ಕುಶಲ ಪ್ರಶ್ನೆಗಳಾಗುವಷ್ಟರಲ್ಲೇ ಕೆಲವು ಮಹಿಳೆಯರು ಮಾಸ್ತಿಯವರನ್ನು ಕಾಣಲು ಬಂದರು. ಮಾಸ್ತಿ ಎಂದಿನಂತೆ ಕೈ ಜೋಡಿಸಿ, 'ಬನ್ನಿ ಅಮ್ಮಾ, ಬನ್ನಿ ತಾಯಿ...!' ಎಂದು ಅವರನ್ನೆಲ್ಲಾ ಬರಮಾಡಿಕೊಂಡರು. ತಾವೆಲ್ಲಾ ಬಂದ ಕಾರಣ ಏನೆಂದು ಕೇಳಬಹುದೇ?' ಎಂದು ಕೇಳಿದರು ಮಾಸ್ತಿ ಹಸನ್ಮುಖರಾಗಿ.

ಅವರೆಲ್ಲರೂ ಯಾವುದೋ ಮಹಿಳಾ ಸಂಘದವರೆಂದು ತಿಳಿಸಿ, 'ಇದು ಮಹಿಳಾ ವರ್ಷ ಅಲ್ಲವೇ? ಆದ್ದರಿಂದ ಮಹಿಳೆಯರ ಬಗೆಗೆ ತಮ್ಮ ಅನುಭವ, ಅನಿಸಿಕೆ, ಸಲಹೆ ಇತ್ಯಾದಿಗಳನ್ನು ತಮ್ಮಿಂದಲೇ ತಿಳಿಯಬೇಕು ಎಂದು ಬಂದೆವು' ಎಂದರು ಒಬ್ಬ ಹಿರಿಯ ಮಹಿಳೆ. ಮಾಸ್ತಿ ಅದಕ್ಕೆ 'ಬಹಳ ಸಂತೋಷ. ತಾವು ನಮ್ಮ ಮನೆಗೆ ಬಂದು ಈ ವಿಚಾರವಾಗಿ ಕೇಳುತ್ತಿರುವುದು ತುಂಬಾ ಸಂತೋಷದ ಮಾತು. ನಮ್ಮಲ್ಲಿ ಹೆಣ್ಣನ್ನು ಆದಿಶಕ್ತಿ, ಲಕ್ಷ್ಮಿ, ಪಾರ್ವತಿ, ಸರಸ್ವತಿ, ಭಾಗೀರಥಿ, ಗೀರ್ವಾಣಿ' ಎಂದೆಲ್ಲ ಕರೆದಿದ್ದಾರೆ. ಬ್ರಹ್ಮ, ವಿಷ್ಣು, ಮಹೇಶ್ವರ ಮುಂತಾದ ಗಂಡು ದೇವರುಗಳನ್ನು ಹೆಸರಿಸುವಾಗ ಪಾರ್ವತೀ ಪರಮೇಶ್ವರ, ಲಕ್ಷ್ಮೀ ನಾರಾಯಣ, ವಾಗ್ಪತಿ ಎಂದು ಹೆಣ್ಣಿನ ಹೆಸರನ್ನು ಮುಂದು ಮಾಡಿ ಕರೆಯುವಲ್ಲಿ ವಿಶೇಷವಿದೆ. ಜಗತ್ತಿನಲ್ಲಿ ಗಂಡು ಎಷ್ಟು ಮುಖ್ಯವೋ, ಹೆಣ್ಣೂ ಅಷ್ಟೇ ಮುಖ್ಯ' ಎಂದು ವಿವರಿಸಿದರು.

ಆಗ ಹದಿವಯಸ್ಸಿನ ಒಬ್ಬಾಕೆ, 'ನಾನೊಂದು ಪ್ರಶ್ನೆ ಕೇಳಲೇ ಸಾರ್?' ಎಂದಳು.

'ಕೇಳಿ.... ಕೇಳಿ... ಏನು ಬೇಕಾದರೂ ಕೇಳಿ. ಸಂಕೋಚವೇಕೆ!?' ಎಂದರು ಮಾಸ್ತಿ ನಗುತ್ತಾ.

'ತಾವು ವಯಸ್ಸಿನಲ್ಲಿದ್ದಾಗ ತಮ್ಮ ಹೆಂಡತಿಯಲ್ಲದೆ ಬೇರೊಬ್ಬ ಹೆಂಗಸನ್ನು ಪ್ರೀತಿಸಿದ್ದು ಉಂಟೇ, ಸಾರ್?' ಎಂದು ಕೇಳಿದರು. ಅಲ್ಲಿದ್ದವರಿಗೆಲ್ಲ ಸಿಡಿಲೆರಗಿದಂತಾಯಿತು. ಎಲ್ಲರೂ ಆಕೆಯನ್ನು ದುರುಗುಟ್ಟಿಕೊಂಡು ನೋಡಿದರು. ಆದರೆ ಮಾಸ್ತಿ ನಗುನಗುತ್ತಲೇ, 'ಹೌದಮ್ಮಾ! ಹೌದು ತಾಯಿ... ನಿಮ್ಮ ಮಾತು ನಿಜ. ನಾನು ನನ್ನ ಹೆಂಡತಿಯನ್ನಲ್ಲದೆ ಬೇರೊಬ್ಬ ಹೆಣ್ಣನ್ನೂ ಪ್ರೀತಿಸಿದ್ದುಂಟು' ಎಂದರು.

ನೆರೆದವರಿಗೆಲ್ಲ ದಿಗ್ಭ್ರಮೆಯಾಯಿತು. ಪ್ರಶ್ನೆ ಕೇಳಿದ ಆಕೆ ಒಂದು ಬಲವಾದ ಕೋಟೆಯನ್ನೇ ಗೆದ್ದಂತೆ ಗತ್ತಿನಿಂದ ಅಲ್ಲಿದ್ದವರನ್ನೆಲ್ಲ ತಲೆ ಎತ್ತಿ ನೋಡಿದರು.

ಮಾಸ್ತಿ ಮುಂದುವರೆದು, 'ಹೇಳಬೇಕೇ? ನಾನು ಗಾಢವಾಗಿ ಪ್ರೀತಿಸಿದ ಆ ಹೆಣ್ಣು ಯಾರೆಂದು ತಿಳಿಯಬೇಕೆನ್ನುವಿರಾ?' ಎಂದರು. ಆಕೆಗೆ ಇಮ್ಮಡಿ ಹಿಗ್ಗಾಯಿತು.

5th-std_Term 2_Kannada_Reader_CBSE_KM.indd 104 7/9/2019 3:26:52 PM



ಮಾಸ್ತಿ ಹಸನ್ಮುಖಿಯಾಗಿಯೇ ಮಾತನಾಡಿದರು. 'ಕೇಳಿ, ನನ್ನ ಧರ್ಮಪತ್ನಿಯಲ್ಲದೆ ನಾನು ವಿಶೇಷವಾಗಿ ಪ್ರೀತಿಸಿದ ಆ ಹೆಣ್ಣು ನನ್ನ ತಾಯಿ, ನನ್ನ ಹೆತ್ತವ್ವ, ನನಗೆ ಜನ್ಮವಿತ್ತ ದೇವತೆ!' ಎಂದರು.

ಆಕೆಯ ಬಾಯಿಂದ ಬಂತು, 'ಅಯ್ಯೋ, ಅಷ್ಟೇನೇ!' ಎಂಬ ಉದ್ಗಾರ.

ಕೂಡಲೇ ಮಾಸ್ತಿ ಕಣ್ಣರಳಿಸಿ ನುಡಿದರು. 'ಏಕೆ, ಅಯ್ಯೋ ಎನ್ನುತ್ತೀರಿ? ನಾನು ನನ್ನ ತಾಯಿಯನ್ನು ವಿಶೇಷವಾಗಿ ಪ್ರೀತಿಸಿದ್ದು ತಪ್ಪೇ?' ಎನ್ನುತ್ತಾ ಅಲ್ಲಿದ್ದವರನ್ನೆಲ್ಲಾ ದಿಟ್ಟಿಸಿ ಮತ್ತೆ ನುಡಿದರು.

'ಹಾಗಾದರೆ ನೀವು ನಿಮ್ಮ ತಾಯಿಯನ್ನು ಪ್ರೀತಿಸುವುದಿಲ್ಲವೇ? ತಾಯಿ ಇಲ್ಲದೆ ನಾವೇ? ನಮ್ಮನ್ನು ಹೆತ್ತು ಹೊತ್ತು ಸಾಕಿ ಸಲಹಿ ದೊಡ್ಡವರನ್ನಾಗಿ ಮಾಡಲಿಲ್ಲವೇ? ನಮಗೆ ಸ್ವಲ್ಪ ಆರೋಗ್ಯ ಕೆಟ್ಟರೂ ನೆಗಡಿ, ಕೆಮ್ಮು, ಜ್ವರ ಬಂದರೂ ನಮ್ಮ ತಾಯಿ ಗಾಬರಿಗೊಳ್ಳಲಿಲ್ಲವೇ? ನಮಗಾಗಿ ಔಷಧಿ, ಪಥ್ಯಗಳನ್ನು ತಾನು ಪಾಲಿಸಲಿಲ್ಲವೇ? ಹೊಟ್ಟೆ ಬಟ್ಟೆ ಕಟ್ಟಲಿಲ್ಲವೇ? ನಮ್ಮನ್ನು ಹಾಗೆ ಜೋಪಾನ ಮಾಡದಿದ್ದರೆ ನಾವೆಲ್ಲಿರುತ್ತಿದ್ದೆವು?' ಎಂದು ಮಾತು ಮುಂದುವರೆಸಿದರು. 'ನೋಡಿ, ನನ್ನ ತಾಯಿ ಇದ್ದಷ್ಟು ದಿನಗಳು ನಾನು ಬೆಳಿಗ್ಗೆ ಎದ್ದ ಕೂಡಲೇ ಅವರೆಲ್ಲಿದ್ದರೂ ಅಲ್ಲಿಗೇ ಹೋಗಿ ಅವರ ಪಾದ ಮುಟ್ಟಿ ನಮಸ್ಕರಿಸಿದ ನಂತರವೇ ನನ್ನ ದಿನಚರಿ ಪ್ರಾರಂಭವಾಗುತ್ತಿತ್ತು. ಈಚೆಗೆ ಅವರು ತೀರಿಕೊಂಡ ಮೇಲೆ ಅವರ ಭಾವಚಿತ್ರವನ್ನು ಪಾದಗಳು ಕಾಣುವಂತೆ ದೊಡ್ಡದಾಗಿ ಮಾಡಿಸಿ ಆ ಒಳಬಾಗಿಲ ಮೇಲೆ ಹಾಕಿದ್ದೇನೆ ನೋಡಿರಿ. ಈಗಲೂ ಪ್ರತಿನಿತ್ಯ ಎದ್ದ ಕೂಡಲೇ ಆ ಕಾಲುಗಳನ್ನು ಮುಟ್ಟಿ ನಮಸ್ಕರಿಸಿದ ಮೇಲೆಯೇ ನನ್ನ ಮುಂದಿನ ಕೆಲಸ. ನಿಮಗದು ಚಿತ್ರದ ಗೊಂಬೆಯಾಗಿ ಕಾಣಿಸಬಹುದು. ಆದರೆ ಅದರಲ್ಲಿ ನಾನು ನನ್ನ ತಾಯಿಯನ್ನು ಕಾಣುತ್ತೇನೆ. ಮಹಿಳಾ ವರ್ಷ ಆಚರಿಸುತ್ತಿರುವ ನಿಮಗೆಲ್ಲಾ ಈ ವಿಚಾರದಲ್ಲಿ ಸ್ಪಷ್ಟವಾದ ನಿಶ್ಚಯವಿರಬೇಕು. ಮಹಿಳೆಯರ ಹಿರಿಮೆಯನ್ನು ಮೆರೆಯುವಾಗ ತಾಯಿಯ ಮಹಿಮೆಯನ್ನು ಮರೆಯಬಾರದು. ತಾಯಿಗಿಂತ ದೊಡ್ಡ ವಸ್ತು ಉಂಟೇ?' ಎಂದರು.

5th-std_Term 2_Kannada_Reader_CBSE_KM.indd 105 7/9/2019 3:26:53 PM

ಪದಗಳ ಅರ್ಥ

ಗತ್ತು–ಅಹಂಕಾರ, ಸೊಕ್ಕು; ಗಾಢವಾಗಿ–ಬಹಳವಾಗಿ; ಗಾಬರಿ–ಹೆದರಿಕೆ; ಜೋಪಾನ–ರಕ್ಷಣೆ; ದಿಗ್ಭ್ರಮೆ–ಆಶ್ಚರ್ಯ; ದಿಟ್ಟಿಸು–ಒಂದೇ ಸಮ ನೋಡು, ಗಮನಿಸಿ ನೋಡು; ದಿನಚರಿ–ದಿನದ ಕೆಲಸ; ನಿವಾಸ–ವಾಸ ಮಾಡುವ ಸ್ಥಳ, ಮನೆ; ನಿಶ್ಚಯ–ನಿರ್ಧಾರ; ಹಸನ್ಮುಖ–ನಗುಮುಖ.

ಮಾಸ್ತಿಯವರ ಪರಿಚಯ



'ಮಾಸ್ತಿ ಕನ್ನಡದ ಆಸ್ತಿ' ಎಂದು ಪ್ರಸಿದ್ಧರಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಕೋಲಾರ ಜಿಲ್ಲೆಯ ಮಾಸ್ತಿ ಎಂಬ ಊರಿನಲ್ಲಿ. 06.06.1891ರಂದು ಜನಿಸಿದರು. ಕನ್ನಡ ಸಣ್ಣ ಕಥೆಗಳ ಜನಕರೆನಿಸಿದ ಇವರು ಕಥೆ, ಕಾದಂಬರಿ, ಕಾವ್ಯ, ವಿಮರ್ಶೆ, ಹೀಗೆ ಹಲವು ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಚೆನ್ನಬಸವನಾಯಕ, ಚಿಕ್ಕವೀರರಾಜೇಂದ್ರ, ಭಾವ ಮುಂತಾದವು ಇವರ ಕೃತಿಗಳು. ಶ್ರೀನಿವಾಸ ಎಂಬುದು ಇವರ ಕಾವ್ಯನಾಮವಾಗಿದೆ. ಇವರಿಗೆ ಜ್ಞಾನಪೀಠ ಪ್ರಶಸ್ತಿಯೂ ಸೇರಿದಂತೆ ಹಲವಾರು ಪ್ರಶಸ್ತಿಗಳು ಸಂದಿವೆ. ಇವರು 1984ರಲ್ಲಿ ನಿಧನರಾದರು.

ಕೃತಿ–ಕರ್ತೃ ಪರಿಚಯ



ಬೆಳಗೆರೆ ಕೃಷ್ಣಶಾಸ್ತ್ರಿಗಳು 22ನೇ ಮೇ, 1916ರಲ್ಲಿ ಜನಿಸಿದರು. ಇವರು ವೃತ್ತಿಯಲ್ಲಿ ಉಪಾಧ್ಯಾಯರಾಗಿದ್ದರು. ವಿನೋಬಾ ಭಾವೆಯವರೊಂದಿಗೆ ಭೂದಾನ ಚಳವಳಿಯಲ್ಲಿಯೂ ಭಾಗವಹಿಸಿದ್ದರು. 'ತುಂಬಿ' ಎಂಬುದು ಇವರ ಕಥಾ ಸಂಕಲನ. 'ಹಳ್ಳಿಮೇಷ್ಟ್ರು', ಮತ್ತು 'ಹಳ್ಳಿಚಿತ್ರ', 'ಆಕಸ್ಮಿಕ' 'ಯೇಗ್ದಾಗೆಲ್ಲಾ ಐತೆ' ಇವು ಇವರ ಕೆಲವು ಪ್ರಮುಖ ಕೃತಿಗಳು. ಶಾಸ್ತ್ರಿಗಳು ದಿನಾಂಕ 22.03.2013ರಂದು ನಿಧನರಾದರು.

'ಸಾಹಿತಿಗಳ ಸ್ಮೃತಿ' ಎಂಬ ಇವರ ಕೃತಿಯಿಂದ ಮಾಸ್ತಿಯವರ 'ಮಾತೃಪ್ರೇಮ' ಎಂಬ ಭಾಗವನ್ನು ಆರಿಸಿಕೊಳ್ಳಲಾಗಿದೆ.

ಟಿಪ್ಪಣಿ

ವಾಗ್ಪತಿ – ವಾಕ್ ಎಂದರೆ ಮಾತು, ವಿದ್ಯೆ. ಮಾತು–ವಿದ್ಯೆಯ ಅಧಿದೇವತೆ ಸರಸ್ವತಿ (ವಿದ್ಯೆಯ ಅಧಿಪತಿಯಾದುದರಿಂದ ಈಕೆಯನ್ನು ಅಧಿದೇವತೆ ಎನ್ನಲಾಗುವುದು). ಈಕೆಯ ಪತಿ ಬ್ರಹ್ಮ. ಆದುದರಿಂದ ಬ್ರಹ್ಮನನ್ನು ವಾಗ್ಪತಿ ಎಂದು ಕರೆಯಲಾಗುವುದು.

ಸಿಡಿಲೆರಗು – ಸಿಡಿಲು ಇದ್ದಕ್ಕಿದ್ದಂತೆ ಹೊಡೆಯುತ್ತದೆ. ಆಗ ಗಾಬರಿಯಾಗುತ್ತದೆ. ಸಿಡಿಲೆರಗು ಎಂದರೆ ಒಮ್ಮೆಲೇ ಗಾಬರಿಯಾಗು, ಭಯಗೊಳ್ಳು ಎಂದರ್ಥ.

ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ

1. ಅಂತರ ರಾಷ್ಟ್ರೀಯ ಮಹಿಳಾ ವರ್ಷ ಎಂದು ಯಾವ ವರ್ಷವನ್ನು ಆಚರಿಸಲಾಯಿತು?
2. ಮಾಸ್ತಿಯವರು ತಮ್ಮನ್ನು ಕಾಣಲು ಬಂದ ಮಹಿಳೆಯರನ್ನು ಹೇಗೆ ಸ್ವಾಗತಿಸಿದರು ?
3. ಮಾಸ್ತಿಯವರನ್ನು ಕಾಣಲು ಮಹಿಳೆಯರು ಏಕೆ ಬಂದಿದ್ದರು ?
4. ಹದಿವಯಸ್ಸಿನ ಮಹಿಳೆ ಮಾಸ್ತಿಯವರನ್ನು ಕೇಳಿದ ಪ್ರಶ್ನೆ ಯಾವುದು ?

5th-std_Term 2_Kannada_Reader_CBSE_KM.indd 106 7/9/2019 3:26:53 PM

5. ಮಾಸ್ತಿಯವರ ಯಾವ ಮಾತು ನೆರೆದವರಿಗೆಲ್ಲಾ ದಿಗ್ಭ್ರಮೆಯನ್ನು ಉಂಟು ಮಾಡಿತು ?

6. ಮಾಸ್ತಿಯವರು ತಮ್ಮ ಹೆಂಡತಿಯನ್ನಲ್ಲದೆ ಪ್ರೀತಿಸಿದ ಮತ್ತೊಬ್ಬ ಹೆಣ್ಣು ಯಾರು ?

ಆ. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಹದಿವಯಸ್ಸಿನಾಕೆ ಕೇಳಿದ ಪ್ರಶ್ನೆಗೆ ಮಾಸ್ತಿಯವರ ಉತ್ತರವೇನು ?

2. ಮಾಸ್ತಿಯವರು ತಮ್ಮ ತಾಯಿಯ ಭಾವಚಿತ್ರವನ್ನು ಒಳಬಾಗಿಲ ಮೇಲೆ ಏಕೆ ಹಾಕಿಕೊಂಡಿದ್ದರು ?

***



5th-std_Term 2_Kannada_Reader_CBSE_KM.indd 107 7/9/2019 3:26:53 PM

ಘಟಕ ಆರು

ವ್ಯಾಕರಣ

ಕಾಲಗಳು

ಕಾಲಸೂಚಕ ಕ್ರಿಯಾಪದ

ಕ್ರಿಯೆಯ ಅರ್ಥವನ್ನು ಕೊಡುವ ಪದಗಳೆಲ್ಲವೂ ಕ್ರಿಯಾಪದಗಳು.ಕ್ರಿಯಾಪದದ ಮೂಲರೂಪವೇ ಕ್ರಿಯಾಪ್ರಕೃತಿ. ಕ್ರಿಯಾಪ್ರಕೃತಿಯನ್ನು ಧಾತು ಎನ್ನುವರು. ಧಾತುವಿಗೆ ಅಖ್ಯಾತ ಪ್ರತ್ಯಯಗಳು ಸೇರಿ ಕ್ರಿಯಾಪದಗಳಾಗುತ್ತವೆ. ಈ ಎರಡರ ನಡುವೆ ಕ್ರಮವಾಗಿ "ಉತ್ತ,ದ,ವ" ಎಂಬ ಕಾಲಸೂಚಕ ಪ್ರತ್ಯಯಗಳು ಸೇರಿ ಕೆಲಸ ನಡೆಯುವ ಕಾಲವನ್ನು ತಿಳಿಸುತ್ತದೆ.ಇದರಲ್ಲಿ ಭೂತಕಾಲ,ವರ್ತಮಾನಕಾಲ ಮತ್ತು ಭವಿಷ್ಯತ್‌ಕಾಲ ಎಂದು ಮೂರು ಬಗೆಗಳಿವೆ.

ಭೂತಕಾಲ :

ಧಾತುವಿಗೆ ಭೂತಕಾಲದಲ್ಲಿ ಅಖ್ಯಾತಪ್ರತ್ಯಯಗಳು ಸೇರಿ ಭೂತಕಾಲದ ಕ್ರಿಯಾಪದಗಳು ಎನಿಸುವುವು. ಭೂತಕಾಲದಲ್ಲಿ 'ದ' ಎಂಬ ಕಾಲಸೂಚಕ ಪ್ರತ್ಯಯವು ಸಾಮಾನ್ಯವಾಗಿ ಬರುವುದು.

ಉದಾಹರಣೆ : ಓದಿದನು, ತಿಂದಳು, ಬಂದಿತು, ಹಾಡಿದರು, ಬಂದೆನು.

ವರ್ತಮಾನಕಾಲ :

ಧಾತುಗಳಿಗೆ ವರ್ತಮಾನಕಾಲದಲ್ಲಿ ಅಖ್ಯಾತಪ್ರತ್ಯಯಗಳು ಎನಿಸುವುವು. ವರ್ತಮಾನಕಾಲದಲ್ಲಿ 'ಉತ್ತ' ಎಂಬ ಕಾಲಸೂಚಕ ಪ್ರತ್ಯಯವು ಸಾಮಾನ್ಯವಾಗಿ ಬರುವುದು.

ಉದಾಹರಣೆ : ತಿನ್ನುತ್ತಾನೆ,ಓದುತ್ತಾಳೆ,ಬರುತ್ತದೆ, ಹಾಡುತ್ತಾರೆ.

ಭವಿಷ್ಯತ್‌ಕಾಲ :

ಧಾತುಗಳಿಗೆ ಭವಿಷ್ಯತ್‌ಕಾಲದಲ್ಲಿ ಅಖ್ಯಾತಪ್ರತ್ಯಯಗಳು ಸೇರಿ ಭವಿಷ್ಯತ್‌ಕಾಲದ ಕ್ರಿಯಾಪದಗಳು ಎನಿಸುವುವು ಭವಿಷ್ಯತ್‌ಕಾಲದಲ್ಲಿ 'ವ' ಎಂಬ ಕಾಲಸೂಚಕ ಪ್ರತ್ಯಯವು ಸಾಮಾನ್ಯವಾಗಿ ಬರುವುದು.

ಉದಾಹರಣೆ : ಬರುವನು, ಬರುವರು, ಹಾಡುವರು, ಬರೆಯುವರು, ತಿನ್ನವಷ್ಟು

5th-std_Term 2_Kannada_Reader_CBSE_KM.indd 108 7/9/2019 3:26:53 PM

ಘಟಕ ಏಳು

ರಾಷ್ಟ್ರೀಯತೆ ಮತ್ತು ಸಮಾಜ

ಪದ್ಯ	:	ಬಂದೆವಿದೋ	–	ಡಿ.ಎಸ್.ಕರ್ಕಿ
ಗದ್ಯ	:	ಪಂಚತಂತ್ರ	–	ಎಂ. ಗೋಪಾಲಕೃಷ್ಣ ಅಡಿಗ (ಮೂಲ : ಮನೋಜ್‌ದಾಸ್)
ಉಪಪಠ್ಯ	:	ನರಿಯ ನ್ಯಾಯ	–	ಸಂಗ್ರಹ
ವ್ಯಾಕರಣ	:	ಲಿಂಗಗಳು		



ಕಲಿಕಾ ಉದ್ದೇಶಗಳು

- ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯತೆಯನ್ನು ಬೆಳೆಸುವುದು.
- ಪದ್ಯದ ಭಾವಾರ್ಥವನ್ನು ತಿಳಿದುಕೊಳ್ಳುವುದು.
- ಕಥೆಯಲ್ಲಿ ಬರುವ ನೀತಿಯನ್ನು ಅಳವಡಿಸಿಕೊಳ್ಳುವುದು.
- ಸಮಯಕ್ಕೆ ತಕ್ಕಂತೆ ಮಾತನಾಡುವ ಜಾಣ್ಮೆಯನ್ನು ಕಲಿಯುವುದು.
- ಭಾಷಾ ಕೌಶಲ್ಯವನ್ನು ಅಭಿವೃದ್ಧಿ ಪಡಿಸಿಕೊಳ್ಳುವುದು.
- ಲಿಂಗಗಳ ವಿಧಗಳನ್ನು ತಿಳಿದುಕೊಳ್ಳುವುದು.

5th-std_Term 3_Kannada_Reader_CBSE_KM.indd 109 7/9/2019 3:41:31 PM

ಘಟಕ ಏಳು

ಬಂದೆವಿದೋ

ಪದ್ಯ

– ಡಿ.ಎಸ್.ಕರ್ಕಿ

ಆಶಯ

'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ'. ಜನನಿ ಮತ್ತು ಜನ್ಮಭೂಮಿ ಸ್ವರ್ಗಕ್ಕಿಂತಲೂ ಮಿಗಿಲಾದವು. ಪ್ರತಿಯೊಬ್ಬರೂ ತಾಯಿ ಮತ್ತು ತಾಯಿನಾಡಿನ ಸೇವೆಗೆ ತ್ಯಾಗ, ಬಲಿದಾನಗಳಿಗೂ ಸದಾ ಸಿದ್ಧರಾಗಿರಬೇಕು. ಅಂತೆಯೇ ಭಾರತಾಂಬೆಯ ಗೌರವವನ್ನು ಕಾಪಾಡಲು ನಾವೆಲ್ಲರೂ ಕಂಕಣಬದ್ಧರಾಗಿರಬೇಕು ಎಂಬ ಸಂದೇಶ ಈ ಕವನದಲ್ಲಿದೆ.

ಬಂದೆವಿದೋ ಬಂದೆವಿದೋ ತಾಯೆ ನಿನ್ನ ಕರೆಗೆ
ನಮ್ಮ ಧಮನಿಯಲ್ಲಿ ರಕುತ ಧುಮುಕುತಿರುವವರೆಗೆ
ವೀರಮಾತೆ ಧೀರರಾಗಿ ನಿನ್ನ ಗೌರವಕ್ಕೆ
ಕಾದಿ ವಿಜಯಮಾಲೆ ಹಿಡಿದು ಬಹೆವು ನಿನ್ನ ಅಡಿಗೆ ‖1‖

ನಮ್ಮ ಪ್ರಾಣ ನಮ್ಮ ತ್ರಾಣ ಅರ್ಪಣ ತವ ಪದಕೆ
ಎದೆಯ ನಚ್ಚು ಭುಜದ ಕೆಚ್ಚು ದರ್ಪಣ ತವಜಯಕೆ
ಬಂದೆವಿದೋ ಭಾರತಾಂಬೆ ಧ್ವಜವನೆತ್ತಿ ಬಾನಿಗೆ
ಕಾದಿ ವೀರ ವಿಜಯ ಮಾಲೆ ತಹೆವು ನಿನ್ನ ಮುಡಿಗೆ ‖2‖

ನೀನೆ ಇತ್ತ ಶೌರ್ಯಧೈರ್ಯ ತಾಯೆ ನಿನಗೆ ಕಾಣಿಕೆ
ತಳೆದು ಬಂದೆವಿದೋ ಮಾತು ಬಂಧುರತೆಯ ರೆಕ್ಕೆ
ಮಾತೃಭಕ್ತಿ, ಸ್ಫೂರ್ತಿಯಾಗೆ ವಿಜಯ ವೀರಸಿರಿಗೆ
ಕಾದಿ ಜಯದ ಮಾಲೆ ಹಿಡಿದು ಬಹೆವು ನಿನ್ನ ಪದಕೆ ‖3‖

5th-std_Term 3_Kannada_Reader_CBSE_KM.indd 110 7/9/2019 3:41:31 PM

ಪದಗಳ ಅರ್ಥ

ಅರ್ಪಣ–ಸಮರ್ಪಣೆ, ಮನಃಪೂರ್ವಕವಾಗಿ ಒಪ್ಪಿಸುವುದು; ಕಾದಿ–ಕಾದಾಡಿ, ಹೋರಾಡಿ; ಕೆಚ್ಚು–ಧೈರ್ಯ, ಸಾಹಸ; ತವ–ನಿನ್ನ; ತ್ರಾಣ–ಶಕ್ತಿ, ಬಲ, ಕಸುವು; ದರ್ಪಣ–ಕನ್ನಡಿ, ಮುಕುರ, ದರ್ಪಣ; ಧಮನಿ–ರಕ್ತನಾಳ, ನರ; ನೆಚ್ಚು–ನಂಬಿಕೆ, ವಿಶ್ವಾಸ; ಪದಕೆ–ಪಾದಕ್ಕೆ, ಅಡಿಗಳಿಗೆ; ಬಂಧುರತೆ–ಸುಂದರವಾದ; ಬಾನು–ಆಕಾಶ, ಗಗನ; ಮಾತೃ–ತಾಯಿ, ಜನನಿ; ಮುಡಿ–ತಲೆ, ಶಿರ, ತುದಿ, ಶಿಖರ; ರಕುತ(ದ್ಭ)–ರಕ್ತ(ತ್ಸ); ಸಿರಿ–ಶ್ರೀ, ಸಂಪತ್ತು, ಐಶ್ವರ್ಯ.

ಕವಿ ಕಾವ್ಯ ಪರಿಚಯ



'ಹಚ್ಚೇವು ಕನ್ನಡದ ದೀಪ' ಎಂಬ ಪ್ರಸಿದ್ಧ ಗೀತೆಯ ಮೂಲಕ ಕನ್ನಡದ ಕಿಚ್ಚನ್ನು ಹೊತ್ತಿಸಿದವರು ಪ್ರಸಿದ್ಧ ಕವಿ ಡಿ.ಎಸ್. ಕರ್ಕಿಯವರು. ಕನ್ನಡ ಜನಮನದಲ್ಲಿ ಪ್ರಸಿದ್ಧರಾದ ಕವಿ ಕರ್ಕಿಯವರ ಪೂರ್ತಿ ಹೆಸರು ದುಂಡಪ್ಪ ಸಿದ್ಧಪ್ಪ ಕರ್ಕಿ. ಉತ್ತರ ಕರ್ನಾಟಕದ ಬೆಳಗಾವಿಯ ರಾಮದುರ್ಗದ ಹಿರೇಕೊಪ್ಪದಲ್ಲಿ 1907 ನವೆಂಬರ್ 15ರಂದು ಜನಿಸಿದ ಇವರು ಶಿಕ್ಷಕರಾಗಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ನಕ್ಷತ್ರಗಾನ, ಗೀತಗೌರವ, ಭಾವತೀರ್ಥ, ಕರಿಕೆ ಕಣಿಗಳು, ಕನ್ನಡ ಛಂದೋವಿಕಾಸ ಇವು ಇವರ ಕೃತಿಗಳು. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನೂ ಇವರು ಗಳಿಸಿದ್ದಾರೆ. ಇರುವಷ್ಟರವರೆಗೆ ಕನ್ನಡ ತಾಯಿಯ ಸೇವೆ ಮಾಡಿದ ಇವರು 1984, ಜನವರಿ 16ರಂದು ನಿಧನರಾದರು.

ಕಲಿಕಾ ಫಲ

- ಈ ಪದ್ಯವನ್ನು ಸರಿಯಾದ ಉಚ್ಚಾರಣೆಯೊಂದಿಗೆ ಓದಿ ತಿಳಿದುಕೊಳ್ಳುವುದು.
- ಈ ಕವಿತೆಯನ್ನು ರಾಗಬದ್ಧವಾಗಿ ಹಾಡಿರಿ.
- ಈ ಪದ್ಯವನ್ನು ತಪ್ಪಿಲ್ಲದಂತೆ ಬರೆಯಿರಿ
- ಈ ಪದ್ಯವನ್ನು ಕಂಠಪಾಠ ಮಾಡಿ

ಮೌಲ್ಯಮಾಪನ

ಓದೋಣ! ಚಿಂತಿಸೋಣ! ಬರೆಯೋಣ!

1. ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ

1. 'ವೀರಮಾತೆ' ನಿನ್ನ ಗೌರವಕ್ಕೆ _____ ಆಗಿ ಬಂದಿಹೆವು.

ಅ) ಧೀರರಾಗಿ ಆ) ಭಕ್ತಿಯಿಂದ

ಇ) ನಮ್ರರಾಗಿ ಈ) ವಿಧೇಯರಾಗಿ

2. ಬಂದೆವಿದೋ ಭಾರತಾಂಬೆ _____ ನೆತ್ತಿ ಬಾನಿಗೆ.

ಅ) ಕತ್ತಿ ಆ) ಹೂವಿನ ಹಾರ

5th-std_Term 3_Kannada_Reader_CBSE_KM.indd 111 7/9/2019 3:41:31 PM

ಇ) ಕೋವಿ ಈ) ಧ್ವಜ

3 ವೀರರಾಗಿ ಕಾದಾಡಿ ನಿನ್ನ ಮುಡಿಗೆ _____ ತರುವೆವು.

ಅ) ಹೂಮಾಲೆ ಆ) ಮುತ್ತಿನ ಮಾಲೆ

ಇ) ವಿಜಯ ಮಾಲೆ ಈ) ತುಳಸಿ ಮಾಲೆ

4 ತಾಯೆ ನಿನ್ನ ಇತ್ತ _____ ವನ್ನು ನಿನಗೆ ಕಾಣಿಕೆಯಾಗಿ ನೀಡುತ್ತೇವೆ.

ಅ) ಹಣ್ಣುಹಾಲು ಆ) ಶೌರ್ಯಧೈರ್ಯ

ಇ) ಕತ್ತಿಗುರಾಣಿ ಈ) ನೆಲಜಲ

5 'ಬಂದೆವಿದೋ' ಪದ್ಯವನ್ನು ಬರೆದವರು _____

ಅ) ಕುವೆಂಪು ಆ) ದ.ರಾ.ಬೇಂದ್ರೆ

ಇ) ಡಿ.ಎಸ್.ಕರ್ಕಿ ಈ) ಜಿ.ಪಿ.ರಾಜರತ್ನಂ

2. ಕೆಳಗಿನ ಪದ್ಯದ ಸಾಲುಗಳನ್ನು ಪೂರ್ಣಗೊಳಿಸಿ ಬರೆಯಿರಿ.

1. ನಮ್ಮ ಧಮನಿಯಲ್ಲಿ ರಕುತ _____
2. ಕಾದಿ ವಿಜಯ ಮಾಲೆ _____
3. ತಳೆದು ಬಂದೆವಿದೋ ಮಾತು _____
4. ಎದೆಯ ನಚ್ಚು ಭುಜದ ಕೆಚ್ಚು _____

3. ಈ ಪದ್ಯದಲ್ಲಿ ಬಂದಿರುವ ಪ್ರಾಸ ಪದಗಳನ್ನು ಬರೆಯಿರಿ.

_____ _____ _____

_____ _____ _____

4. ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1) ಬಂದೆವಿದೋ ಕವನದಲ್ಲಿ ಹೇಳಿರುವಂತೆ ವಿಜಯ ವೀರ ಸಿರಿಗೆ ಯಾವುದು ಸ್ಫೂರ್ತಿಯಾಗಿದೆ?

2) ತಾಯಿಗೆ ನೀಡುತ್ತಿರುವ ಕಾಣಿಕೆ ಯಾವುದೆಂದು ಡಿ.ಎಸ್.ಕರ್ಕಿಯವರು ಹೇಳಿದ್ದಾರೆ?

3) 'ಬಂದೆವಿದೋ' ಪದ್ಯದಲ್ಲಿ ಹೇಳಿರುವಂತೆ ತಾಯಿಯ ತವಪದಕ್ಕೆ ಯಾವುದು ಅರ್ಪಣ?

4) ಕವಿಯು ತಾಯಿಯ ಮುಡಿಗೆ ಏನನ್ನು ತರುವುದಾಗಿ ಹೇಳಿದ್ದಾರೆ?

5. ಚಿಂತನಾಶೀಲ ಪ್ರಶ್ನೆ.

1) ನೀವು ನಿಮ್ಮ ಜೀವನದಲ್ಲಿ ದೇಶಪ್ರೇಮವನ್ನು ಬೆಳೆಸಿಕೊಳ್ಳಲು ಯಾವ ಉತ್ತಮ ಗುಣಗಳನ್ನು ಮೈಗೂಡಿಸಿಕೊಳ್ಳುವಿರಿ?

5th-std_Term 3_Kannada_Reader_CBSE_KM.indd 112 7/9/2019 3:41:31 PM

ಘಟಕ ಏಳು

ಗದ್ಯ

ಪಂಚತಂತ್ರ

– ಎಂ. ಗೋಪಾಲಕೃಷ್ಣ ಅಡಿಗ
ಮೂಲ : ಮನೋಜ್ ದಾಸ್

ಆಶಯ

ಮಕ್ಕಳೇ, ನೀವು ಕೇಳಲೇಬೇಕಾದ, ಓದಲೇ ಬೇಕಾದ ಕಥೆಗಳಲ್ಲಿ ಪಂಚತಂತ್ರದ ಕಥೆಗಳು ಪ್ರಮುಖವಾದವು. ಪಂಚತಂತ್ರವು ಪ್ರಾಣಿ ಪ್ರಪಂಚದೊಂದಿಗೆ ಬೆಸೆದ ನೀತಿಕಥೆಗಳು. ನಮ್ಮ ಜೀವನಕ್ಕೆ ಬೇಕಾಗುವ ಐದು ಮೂಲ ತತ್ವಗಳನ್ನು ಈ ಕಥೆಗಳು ಉಪದೇಶಿಸುತ್ತವೆ. ಅವುಗಳೆಂದರೆ 1. ಮಿತ್ರ ಬೇಧ, 2.ಮಿತ್ರ ಕಾರ್ಯ 3. ಮಿತ್ರ ಪರೀಕ್ಷೆ 4. ಮಿತ್ರ ವಿಶ್ವಾಸ 5. ಮಿತ್ರ ವಂಚನೆ. ಇಲ್ಲಿನ ಕಥೆಗಳನ್ನು ಕ್ರಿ.ಪೂ. ಮೂರನೇ ಶತಮಾನದಲ್ಲಿ ವಿಷ್ಣುಶರ್ಮನು ರಚಿಸಿದನು ಎಂದು ಹೇಳಲಾಗುತ್ತದೆ. ಈ ಪಂಚತಂತ್ರದ ಕಥೆಗಳು ಹುಟ್ಟಿದ್ದು ಹೇಗೆ? ಎಂಬುದು ಕುತೂಹಲಕಾರಿಯಾಗಿದೆ. ನೀವೇ ಓದಿ.....

ಪುರಾತನ ಕಾಲದಲ್ಲಿ ಒಬ್ಬ ರಾಜನಿಗೆ ಮೂರು ಮಂದಿ ಗಂಡು ಮಕ್ಕಳಿದ್ದರು. ರಾಜಕುಮಾರರು ತಮ್ಮ ವಿದ್ಯಾಭ್ಯಾಸದ ಕಡೆಗೆ ಕೊಂಚವೂ ಲಕ್ಷ್ಯ ಕೊಡದೆ ಸೋಮಾರಿಗಳಾಗಿ ಕಾಲ ಕಳೆಯುತ್ತಿದ್ದರು. ಇದರಿಂದ ರಾಜನಿಗೆ ತುಂಬಾ ದುಃಖವಾಯಿತು. ಅವರು ಅದೇ ರೀತಿ ಸಮಯವನ್ನು ವ್ಯರ್ಥ ಮಾಡಿದರೆ ಪಟ್ಟಕ್ಕೆ ಬರಲು ಅವರಲ್ಲಿ ಒಬ್ಬನೂ ಅರ್ಹನಾಗುವುದಿಲ್ಲ ಎಂದು ರಾಜನಿಗೆ ಗೊತ್ತು.

ರಾಜ ಅನೇಕ ಅಧ್ಯಾಪಕರನ್ನು ನೇಮಿಸಿದ. ಆದರೆ ಎಲ್ಲವೂ ವ್ಯರ್ಥ. ಅಧ್ಯಾಪಕನೊಬ್ಬ ಕಣ್ಣಿಗೆ ಬಿದ್ದರೆ ಸಾಕು, ರಾಜಕುಮಾರರು ಭಯದಿಂದ ತತ್ತರಿಸಿ ಕಾಲಿಗೆ ಬುದ್ಧಿ ಹೇಳುತ್ತಿದ್ದರು.

ಕಾಲ ಕಳೆಯುತ್ತಾ ಹೋಯಿತು. ರಾಜನ ನಿರಾಸೆಯೂ ಹೆಚ್ಚುತ್ತಾ ಹೋಯಿತು.

ಕೊನೆಗೆ ರಾಜ ತನ್ನ ದೇಶದ ಎಲ್ಲಾ ಪ್ರಸಿದ್ಧ ವಿದ್ವಾಂಸರನ್ನೂ ಕರೆಸಿ ಒಂದು ಸಭೆ ಏರ್ಪಡಿಸಿದ. ಅವರಿಗೆ ತನ್ನ ಸಮಸ್ಯೆಯನ್ನು ವಿವರವಾಗಿ ಹೇಳಿದ. 'ನಿಮ್ಮಲ್ಲಿ ಯಾರಾದರೂ ಒಬ್ಬರು ನನಗೆ ಸಹಾಯ ಮಾಡಬಲ್ಲಿರಾ?' ಎಂದು ಪ್ರಶ್ನಿಸಿದ.

ಬಹಳ ಹೊತ್ತಿನವರೆಗೆ ಯಾರೂ ಉತ್ತರ ಕೊಡಲಿಲ್ಲ. ಕೊನೆಗೆ ಅವರಲ್ಲೊಬ್ಬ ಎದ್ದು ನಿಂತು, 'ಮಹಾರಾಜನೇ! ತಾವು ತಮ್ಮ ಮಕ್ಕಳ ವಿದ್ಯಾಭ್ಯಾಸವನ್ನು ನನ್ನ ಕೈಗೆ ಒಪ್ಪಿಸಿದರೆ ನನ್ನ ಕೈಲಾದುದನ್ನು ಮಾಡುತ್ತೇನೆ' ಎಂದ.

ಆ ವಿದ್ವಾಂಸನೇ ವಿಷ್ಣುಶರ್ಮ. ತನ್ನ ಜ್ಞಾನದಿಂದ ಆತ ಇಡೀ ದೇಶದಲ್ಲೇ ಸುಪ್ರಸಿದ್ಧನಾಗಿದ್ದ. ಅಂಥ ಮನುಷ್ಯ ತನ್ನ ಮಕ್ಕಳಿಗೆ ಪಾಠ ಹೇಳಲು ಮುಂದೆ ಬಂದನೆಂದು ರಾಜನಿಗೆ ತುಂಬಾ ಸಂತೋಷವಾಯಿತು.

ರಾಜನ ಅರಮನೆ ಬಹಳ ದೊಡ್ಡದು. ಅದರ ಸುತ್ತ ಎತ್ತರವಾದ ಮರಗಳಿದ್ದವು. ಉದ್ದವಾಗಿಯೂ ತುಂಬಾ ಅಗಲವಾಗಿಯೂ ಇದ್ದ ಮೇಲ್ಛಾವಣಿಯ ಕೆಲವು ಭಾಗಗಳ ಮೇಲೆ ಈ ಮರಗಳು ನೆಳಲು ಚೆಲ್ಲುತ್ತಿದ್ದವು. ವಿಷ್ಣುಶರ್ಮ ಛಾವಣಿಯ ಮೇಲಿನ ಒಂದು ಏಕಾಂತವಾದ ಮೂಲೆಗೆ ರಾಜಕುಮಾರರನ್ನು ಕರೆದುಕೊಂಡು ಹೋದ. ಅಲ್ಲಿ ತನ್ನ ಮುಂದೆ ಅವರನ್ನು ಕುಳ್ಳಿರಿಸಿಕೊಂಡು ತಾನೂ ಕುಳಿತ.

ವಿದ್ಯಾಭ್ಯಾಸವನ್ನು ದ್ವೇಷಿಸುತ್ತಿದ್ದ ಆ ರಾಜಕುಮಾರರಿಗೆ ಮೊದಮೊದಲು ಇದರಿಂದೇನೂ ಸಂತೋಷವಾಗಲಿಲ್ಲ. ಆದರೆ ಸ್ವಲ್ಪ ಹೊತ್ತಿನಲ್ಲಿಯೇ ಈ ಸ್ಥಳವನ್ನು ಬಿಟ್ಟು ಏಳುವುದು ಅವರಿಗೆ ಬೇಡವೆನ್ನಿಸಿತು. ವಿಷ್ಣುಶರ್ಮನ

5th-std_Term 3_Kannada_Reader_CBSE_KM.indd 113 7/9/2019 3:41:31 PM

ವಿದ್ಯಾಭ್ಯಾಸದ ರೀತಿ ಅಪೂರ್ವ. ಅವನು ಹೀಗೆ ಆರಂಭಿಸಿದ... 'ಗೋದಾವರೀ ನದೀ ತೀರದಲ್ಲಿ ದೊಡ್ಡದೊಂದು ಆಲದ ಮರ ಇತ್ತು. ಬೇರೆ ಬೇರೆ ದಿಕ್ಕುಗಳಿಂದ ಬರುತ್ತಿದ್ದ ಪಕ್ಷಿಗಳೆಲ್ಲಾ ರಾತ್ರಿಯ ಹೊತ್ತು ಆ ಮರದಲ್ಲಿ ಆಶ್ರಯ ಪಡೆಯುತ್ತಿದ್ದವು...'

ಹೀಗೆ ಅವನು ಕಥೆಗಳನ್ನು ಹೇಳುತ್ತಾ ಹೋದ. ಅವೆಲ್ಲವೂ ಪ್ರಾಣಿಪಕ್ಷಿಗಳನ್ನು ಕುರಿತ ಕಥೆಗಳು. ಆದರೆ ನಿಜವಾಗಿ ಅವು ನಮ್ಮ ಬಗ್ಗೆಯೇ ಇರುವಂತಹವು. ಮನುಷ್ಯನ ಬೇರೆ ಬೇರೆ ಸಮಸ್ಯೆಗಳನ್ನೂ, ಅವುಗಳ ಪರಿಹಾರಗಳನ್ನೂ ಕುರಿತ ಕಥೆಗಳು ಅವು! ಆದರ್ಶ ಸ್ನೇಹಿತ ಯಾರು? ಗೆಳೆತನವನ್ನು ಉಳಿಸಿಕೊಂಡು ಬರುವುದು ಹೇಗೆ? ನಮಗೆ ವಿನಾಶ ತರಬಲ್ಲ ಆಸೆಗಳಿಂದ ತಪ್ಪಿಸಿಕೊಳ್ಳುವುದು ಹೇಗೆ? ಒಳ್ಳೆಯವನಾಗಿದ್ದೂ ಜಾಗರೂಕತೆಯಿಂದ ಇರುವುದರಿಂದಲೂ, ಉದಾತ್ತನಾಗಿದ್ದೂ ಚತುರನಾಗಿರುವುದರಿಂದಲೂ ಲಾಭವಿದೆ ಎಂಬುದನ್ನು ಈ ಕಥೆಗಳು ತೋರಿಸಿ ಕೊಡುತ್ತವೆ. ಕಥೆ ಕೇಳುತ್ತಾ ವಿಷ್ಣುಶರ್ಮನ ಜೊತೆಗೇ ಕುಳಿತಿದ್ದುದರಿಂದ ಹುಡುಗರು ತಿಳುವಳಿಕೆಯನ್ನೂ, ವ್ಯವಹಾರ ಜ್ಞಾನವನ್ನೂ ಪಡೆದುಕೊಂಡರು.

ಪಂಚತಂತ್ರದ ಕಥೆಗಳನ್ನು ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ರೂಪಗಳಲ್ಲಿ ಮತ್ತೆ ಮತ್ತೆ ಹೇಳಲಾಗಿದೆ. ನೀವೂ ಕೂಡ ಈ ಕಥೆಗಳಲ್ಲಿ ಬೇಕಾದಷ್ಟು ಕಥೆಗಳನ್ನು ಓದಿರಬೇಕು. ಆದರೆ ಕೆಲವು ಕಥೆಗಳು ಅಷ್ಟು ಜನಪ್ರಿಯವಾಗಿಲ್ಲದಿದ್ದರೂ, ಕಥಾಲೋಕದಲ್ಲಿ ಅವು ರತ್ನಗಳಂತೆ ಇವೆ. ಉದಾಹರಣೆಗೆ : 'ಮಾತಾಡುವ ಗುಹೆ' ಎಂಬ ಕಥೆಯನ್ನು ತೆಗೆದುಕೊಳ್ಳಬಹುದು. ಇದು ತುಂಬಾ ರಸಭರಿತವಾದ ಕಥೆಯಾಗಿರುವುದು ಮಾತ್ರವಲ್ಲದೆ, ಪ್ರತಿಯೊಬ್ಬನೂ ಯಾವಾಗಲೂ ತನ್ನ ಬಗ್ಗೆ ಎಚ್ಚರಿಕೆಯಿಂದಿದ್ದು ಆತ್ಮ ರಕ್ಷಣೆಗೆ ಸಿದ್ಧವಾಗಿರಬೇಕೆಂಬ ಪಾಠವನ್ನು ಕಲಿಸುತ್ತದೆ...

ಒಂದಾನೊಂದು ಕಾಲದಲ್ಲಿ ಒಂದು ಕಾಡಿನಲ್ಲಿ ಒಂದು ನರಿ ಇತ್ತು. ನಿರ್ಜನವಾದ ಪ್ರದೇಶದಲ್ಲಿನ ಗುಹೆಯೊಂದರಲ್ಲಿ ಅದು ವಾಸಿಸುತ್ತಿತ್ತು. ಒಂದು ದಿನ ನರಿ ಅಲ್ಲಿ ಇಲ್ಲದಿದ್ದಾಗ ಹಸಿವೆಯಿಂದ ಕಂಗಾಲಾಗಿದ್ದ ಸಿಂಹವೊಂದು ಅಲ್ಲಿಗೆ ಬಂತು. ಗುಹೆಯನ್ನು ಹೊಕ್ಕು ಆ ಸಿಂಹ ಒಳಗೆಲ್ಲ ಮೂಸಿ ನೋಡಿತು. ಅದು ನರಿಯ ವಾಸ ಸ್ಥಳ ಎಂಬುದರಲ್ಲಿ ಸಂದೇಹವಿಲ್ಲ ಎಂದು ಅದು ಊಹಿಸಿತು. 'ಆಹಾರವನ್ನು ಹುಡುಕಿಕೊಂಡು ನಾನು ಹೊರಗೆಲ್ಲೋ ಹೋಗಿ ಅಲೆಯುವುದೇಕೆ? ಇಲ್ಲಿ ಕೊಂಚ ಒರಗಿ ವಿಶ್ರಾಂತಿ ತೆಗೆದುಕೊಳ್ಳುತ್ತೇನೆ. ನರಿ ತಿರುಗಿ ಬಂದಾಗ ನನಗೆ ಸವಿಯೂಟ ಸಿಕ್ಕದೇ?' ಎಂದು ಅದು ಯೋಚಿಸಿತು.



5th-std_Term 3_Kannada_Reader_CBSE_KM.indd 114 7/9/2019 3:41:31 PM

ಮುಸ್ಸಂಜೆಯ ಹೊತ್ತಿಗೆ ನರಿ ಮನೆಗೆ ಮರಳಿ ಬಂತು. ಗುಹೆಯನ್ನು ಪ್ರವೇಶಿಸಬೇಕು ಎನ್ನುವಾಗ ಅದಕ್ಕೆ ಸಿಂಹದ ಅಸ್ಪಷ್ಟ ಹೆಜ್ಜೆಯ ಗುರುತುಗಳು ಕಂಡವು. ಅದರ ಹೃದಯ ಜೋರಾಗಿ ಬಡಿದುಕೊಳ್ಳತೊಡಗಿತು. ಅನಂತರ ಅದು ಧೈರ್ಯ ತಂದುಕೊಂಡು ಹೊರಗೆ ನಿಂತು, ಗಟ್ಟಿಯಾಗಿ ಕೂಗಿ ಹೇಳಿತು : 'ಎಲೇ, ಮಾತನಾಡುವ ಗುಹೆಯೇ! ನಿನಗೇನಾಗಿದೆ ಇಂದು? ದಿನವೂ ನಾನು ಮನೆಗೆ ಹಿಂದಿರುಗಿ ಬಂದಾಗಲೆಲ್ಲಾ ನೀನು ನನ್ನನ್ನು ಕುರಿತು, "ನರಿಯೇ! ದಯ ಮಾಡಿಸಬೇಕು!" ಎಂದು ಹೇಳಿ ನನ್ನನ್ನು ಬರಮಾಡಿಕೊಳ್ಳುತ್ತಿದ್ದೆ. ಆದರೆ ಈ ದಿನ ನೀನು ಮೌನವಾಗಿರುವೆ. ನಾನು ಒಳಕ್ಕೆ ಬರಬಾರದೆಂಬುದು ನಿನ್ನ ಇಷ್ಟವೆಂದು ನಾನು ಭಾವಿಸಲೇ?' ಎಂದು ಹೇಳಿತು.

ಅದನ್ನು ಕೇಳಿದ ಸಿಂಹ ತನ್ನೊಳಗೇ ಹೀಗೆ ಯೋಚಿಸಿತು. 'ನಾನು ಇಲ್ಲಿರುವುದರಿಂದ ಈ ಗುಹೆಗೆ ಹೆದರಿಕೆಯಾಗಿದೆ. ಇದರಲ್ಲಿ ಸಂದೇಹವೇ ಇಲ್ಲ. ಆದುದರಿಂದಲೇ ಅದು ನರಿಯನ್ನು ಇಂದು ಸ್ವಾಗತಿಸುತ್ತಿಲ್ಲ'

ಹೀಗೆಂದು ಯೋಚಿಸಿದ ಸಿಂಹ ತಕ್ಷಣ ಹೇಳಿತು : 'ನರಿರಾಯರೇ! ಬರಬೇಕು, ಬರಬೇಕು'

ಆ ಧ್ವನಿಯನ್ನು ಕೇಳಿದ ಕೂಡಲೇ ನರಿ ತನ್ನ ಜೀವ ಉಳಿಸಿಕೊಳ್ಳುವುದಕ್ಕಾಗಿ ಅಲ್ಲಿಂದ ಪಲಾಯನ ಮಾಡುತ್ತಾ ಜೋರಾಗಿ ಹೇಳಿತು : 'ಪ್ರಿಯ ಗುಹೆಯೇ! ನಿನ್ನನ್ನು ತ್ಯಜಿಸಿ ಹೋಗಲು ನಾನು ನಿಶ್ಚಯಿಸಿದ್ದೇನೆ'

ತನ್ನಷ್ಟಕ್ಕೇ ತಾನು ಒಳಗೊಳಗೇ ನಗುತ್ತಾ ನರಿ ಹೀಗೆ ಅಂದುಕೊಂಡಿತು : 'ಮಾತಾಡುವ ಗುಹೆಯೇ? ಇಂಥ ಸಂಗತಿಯನ್ನು ನಾನು ಕೇಳೇ ಇಲ್ಲ.... ದೇವರ ದಯೆ! ನಾನು ಹೇಗೋ ಬಚಾವಾದೆ!'

ಪದಗಳ ಅರ್ಥ

ಅಪೂರ್ವ–ಅಪರೂಪದ, ಶ್ರೇಷ್ಠವಾದ; ಊಳಿಡು–ಗಟ್ಟಿಯಾಗು ಕೂಗು; ಕಂಗಾಲು–ದುರ್ಬಲವಾಗು; ಕೊಂಚ–ಸ್ವಲ್ಪ; ಛಾವಣಿ–ಮಾಳಿಗೆ, ಮನೆಮೇಲಿನ ಆವರಣ; ನಿರ್ಜನ–ಜನವಸತಿ ಇಲ್ಲದ ಸ್ಥಳ; ಪಲಾಯನ–ಓಟ, ಪರಾರಿ, ತಪ್ಪಿಸಿಕೋ, ಓಡಿ ಹೋಗು; ಮುಸ್ಸಂಜೆ–ಸೂರ್ಯ ಮುಳುಗುವ ಸಮಯ, ಸಾಯಂಕಾಲ; ವ್ಯರ್ಥ–ನಿರುಪಯುಕ್ತ, ಉಪಯೋಗವಿಲ್ಲದ; ಉದಾತ್ತ–ಶ್ರೇಷ್ಠ; ಏಕಾಂತ–ಯಾರೂ ಇಲ್ಲದ ಸ್ಥಳ, ಪ್ರಶಾಂತ ವಾತಾವರಣ; ಕಾಲಿಗೆ ಬುದ್ಧಿಹೇಳು–ಓಡಿ ಹೋಗು, ಪರಾರಿಯಾಗು, ಹೇಳದೆ ಕೇಳದೆ ಜಾಗ ಖಾಲಿ ಮಾಡು.

ಕವಿ–ಕಾವ್ಯ ಪರಿಚಯ



ಎಂ.ಗೋಪಾಲಕೃಷ್ಣ ಅಡಿಗರು 1918ರಲ್ಲಿ ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಮೊಗೇರಿ ಎಂಬಲ್ಲಿ ಜನಿಸಿದರು. ಕನ್ನಡ ಸಾಹಿತ್ಯವು ನವೋದಯದಿಂದ ನವ್ಯದ ಹಾದಿಯನ್ನು ಹಿಡಿಯುತ್ತಿದ್ದ ಕಾಲದಲ್ಲಿ ಅಡಿಗರು ನವ್ಯ ಪ್ರಕಾರದ ಪ್ರಸಿದ್ಧ ಕವಿಗಳಾಗುತ್ತಾ ಬೆಳೆದವರು. ಕುವೆಂಪು, ಪು.ತಿ.ನ. ಬೇಂದ್ರೆಯಂತಹ ಹಿರಿಯ ಕವಿಗಳ ಸಾಲಲ್ಲಿ ಗುರುತಿಸಿಕೊಂಡವರು. ಕಟ್ಟುವೆವು ನಾವು, ಭಾವತರಂಗ, ಚಂಡೆಮದ್ದಳೆ, ಭೂಮಿಗೀತ, ನಡೆದು ಬಂದ ದಾರಿ, ಮೊದಲಾದ ಕವನ ಸಂಕಲನಗಳನ್ನೂ; ಅನಾಥೆ, ಆಕಾಶದೀಪ ಎಂಬ ಎರಡು ಕಾದಂಬರಿಗಳನ್ನೂ ಅಡಿಗರು ರಚಿಸಿದ್ದಾರೆ. ಇವರ ಸಮಗ್ರ ಗದ್ಯವು ಕನ್ನಡ ಗದ್ಯ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆಯಾಗಿದೆ. ಅಡಿಗರಿಗೆ ಪಂಪ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇರಳದ ಕುಮಾರನ್ ಆಶಾನ್ ಪ್ರಶಸ್ತಿ, ಮಧ್ಯಪ್ರದೇಶದ ಕಬೀರ್ ಸಮ್ಮಾನ್ ಪ್ರಶಸ್ತಿಗಳು ದೊರೆತಿವೆ. ಇವರು ಧರ್ಮಸ್ಥಳದಲ್ಲಿ ನಡೆದ 51ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಅಡಿಗರು 1992ರಲ್ಲಿ ನಿಧನರಾದರು.

ಪ್ರಸ್ತುತ ಪಾಠವನ್ನು ಅವರು ಅನುವಾದಿಸಿರುವ 'ಸಾರ್ವಕಾಲಿಕ ಪುಸ್ತಕಗಳು' (ಮೂಲ:ಮನೋಜ್ ದಾಸ್) ಎಂಬ ಕೃತಿಯಿಂದ ಆರಿಸಲಾಗಿದೆ.

5th-std_Term 3_Kannada_Reader_CBSE_KM.indd 115 7/9/2019 3:41:32 PM

ಕಲಿಕಾ ಫಲ

- ಸಿಂಹ, ನಾಯಿ, ನರಿ, ಬೆಕ್ಕು, ಗಿಳಿ, ಕೋಗಿಲೆಗಳ ಧ್ವನಿಯನ್ನು ಅನುಕರಣೆ ಮಾಡಿ.
- 'ಮಾತನಾಡುವ ಗುಹೆ' ಕಥೆಯನ್ನು ಹಾವ–ಭಾವಗಳೊಂದಿಗೆ ತರಗತಿಯಲ್ಲಿ ಹೇಳಿರಿ.
- ನಿಮಗೆ ಇಷ್ಟವಾದ ಪ್ರಾಣಿಗಳ ಚಿತ್ರ ಅಂಟಿಸಿ, ಅವು ನಿಮಗೆ ಏಕೆ ಇಷ್ಟ ಹೇಳಿರಿ.
- ಕೆಳಗೆ ನೀಡಿರುವ ಸುಳಿವು ಬಳಸಿಕೊಂಡು 'ಹೊಗಳಿಕೆಗೆ ಉಬ್ಬಬೇಡ' ಎಂಬ ನಾಣ್ನುಡಿಗೆ ಸೂಕ್ತ ಕಥೆ ಹೇಳುತ್ತ ಅಭಿನಯಿಸಿ.

ಮೌಲ್ಯಮಾಪನ

ಓದೋಣ! ಚಿಂತಿಸೋಣ! ಬರೆಯೋಣ!

ಅ. ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1) ರಾಜನಿಗೆ ತನ್ನ ಮಕ್ಕಳ ಬಗ್ಗೆ ಏಕೆ ದುಃಖವಾಯಿತು?

2) ವಿಷ್ಣುಶರ್ಮನು ರಾಜನಿಗೆ ಏನೆಂದು ಹೇಳಿದನು ?

3) ವಿಷ್ಣುಶರ್ಮ ಕಥೆಗಳನ್ನು ಹೇಗೆ ಆರಂಭಿಸುತ್ತಿದ್ದನು ?

4) 'ಮಾತನಾಡುವ ಗುಹೆ' ಕಥೆಯ ನೀತಿಯೇನು ?

5) ಸಿಂಹವು ನರಿಯನ್ನು ಹೇಗೆ ಸ್ವಾಗತಿಸಿತು ?

6) ನರಿಯು ತನ್ನ ಗುಹೆಯನ್ನು ಏಕೆ ತ್ಯಜಿಸಿತು ?

ಆ. ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1) ವಿಷ್ಣುಶರ್ಮ ಯಾರು ? ಆತನ ಮಾತುಗಳಿಂದ ರಾಜನಿಗೆ ಏಕೆ ಸಂತೋಷವಾಯಿತು ?

2) ವಿಷ್ಣುಶರ್ಮನ ಕಥೆಗಳಲ್ಲಿ ಬರುವ ಪಂಚತಂತ್ರದ ವಿಚಾರಗಳು ಯಾವುವು?

3) ಸಿಂಹವು ನರಿ ಗುಹೆಯಲ್ಲಿಯೇ ಏಕೆ ಉಳಿಯಿತು ?

ಇ. ಈ ಕೆಳಗಿನ ಮಾತುಗಳನ್ನು ಯಾರು, ಯಾರಿಗೆ ಹೇಳಿದರು ?

1) 'ನಿಮ್ಮಲ್ಲಿ ಯಾರಾದರೂ ನನಗೆ ಸಹಾಯ ಮಾಡಬಲ್ಲಿರಾ?'

2) 'ಎಲೆ ಮಾತನಾಡುವ ಗುಹೆಯೇ, ನಿನಗೇನಾಗಿದೆ ?'

3) 'ನರಿ ರಾಯರೇ! ಬರಬೇಕು, ಬರಬೇಕು'

ಈ. ಚಿಂತನಾಶೀಲ ಪ್ರಶ್ನೆ.

1) ನರಿಯು ಅಪಾಯದಿಂದ ಪಾರಾದಂತೆ ನೀವೂ ಸಹ ಅಪಾಯದಲ್ಲಿ ಸಿಲುಕುವ ಸಂದರ್ಭ ಬಂದಾಗ ಪಾರಾಗುವ ಉಪಾಯವನ್ನು ತರಗತಿಯಲ್ಲಿ ನಿಮ್ಮ ಗೆಳೆಯ ಗೆಳತಿಯರ ಜೊತೆಯಲ್ಲಿ ಚರ್ಚಿಸಿರಿ.

5th-std_Term 3_Kannada_Reader_CBSE_KM.indd 116 7/9/2019 3:41:32 PM

ಅ) ಕೆಳಗಿನ ಪದಗಳ ವಿರುದ್ಧ ಪದಗಳನ್ನು ಬರೆಯಿರಿ.

1) ದುಃಖ × _____

2) ಅರ್ಹ × _____

3) ಜ್ಞಾನ × _____

4) ಅಸ್ಪಷ್ಟ × _____

5) ನಿರಾಸೆ × _____

6) ಧೈರ್ಯ × _____

7) ದ್ವೇಷಿಸು × _____

8) ಲಕ್ಷ್ಯ × _____

ಆ) ಕೆಳಗಿನ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬರೆಯಿರಿ.

1) ವಿದ್ಯಾಭ್ಯಾಸ : _____

2) ಅಪೂರ್ವ : _____

3) ಪರಿಹಾಸ : _____

4) ಸಂದೇಹ : _____

5) ನಿಶ್ಚಯಿಸು : _____

ಇ) ಕೆಳಗಿನ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ

ಮಾದರಿ : ವಿದ್ಯಾಭ್ಯಾಸ = ವಿದ್ಯೆ+ಅಭ್ಯಾಸ

1) ಅವರಲ್ಲೊಬ್ಬ = _____ + _____

2) ಮರಗಳಿದ್ದವು = _____ + _____

3) ಒಳಗೊಳಗೆ = _____ + _____

4) ದುಃಖವಾಯಿತು = _____ + _____

5) ಗುಹೆಯನ್ನು = _____ + _____

5th-std_Term 3_Kannada_Reader_CBSE_KM.indd 117 7/9/2019 3:41:32 PM

ಘಟಕ ಏಳು

ನರಿಯ ನ್ಯಾಯ

ಉಪಪಠ್ಯ

– ಸಂಗ್ರಹ

ಒಂದು ಊರಿನಲ್ಲಿ ಒಬ್ಬ ಮುದುಕನಿದ್ದನು. ಆತ ಹಸುಗಳನ್ನು ಸಾಕಿಕೊಂಡು ಜೀವನ ನಡೆಸುತ್ತಿದ್ದನು. ಮುದುಕನ ಮನೆಯ ಪಕ್ಕದಲ್ಲೇ ಒಬ್ಬ ಶ್ರೀಮಂತನ ಮನೆಯೂ ಇತ್ತು. ಶ್ರೀಮಂತನ ಮನೆಯವರು ದನಗಳನ್ನು ತಮ್ಮ ಮನೆಯ ಮುಂದೆ ಕಟ್ಟುತ್ತಿದ್ದರು.

ಮುದುಕನ ಒಂದು ಹಸು ಕೆಲವು ದಿನಗಳ ಹಿಂದೆ ಕರುವನ್ನು ಹಾಕಿತ್ತು. ಆ ಕರು ತಿರುಗಾಡಿಕೊಂಡಿರಲಿ ಎಂದು ಅದನ್ನು ಕಟ್ಟಿ ಹಾಕದೆ ಆತ ಹಾಗೇ ಬಿಟ್ಟಿದ್ದ. ಆದರೆ ಆ ಕರು ಶ್ರೀಮಂತನ ಮನೆಯ ಎತ್ತಿನ ಮೈಯನ್ನು ಹೋಗಿ ಹೋಗಿ ನೆಕ್ಕುತ್ತಿತ್ತು. ಇದನ್ನು ಕಂಡರೂ ಆ ಮುದುಕ 'ಕರು ತಾನೇ, ಎಲ್ಲಾ ಕರುಗಳೂ ಮೈ ನೆಕ್ಕಿದಂತೆ ಇದು ಕೂಡ ಮೈ ನೆಕ್ಕುತ್ತಿರುತ್ತದೆ. ಇದರಲ್ಲಿ ತಪ್ಪೇನು?' ಎಂದು ಸುಮ್ಮನಾದನು. ಆದರೆ ಆ ಶ್ರೀಮಂತ ತನ್ನ ಎತ್ತನ್ನು ನೆಕ್ಕುತ್ತಿದ್ದ ಕರುವನ್ನು ನೋಡಿ, 'ಏನಾದರೂ ಮಾಡಿ ಈ ಕರುವನ್ನು ತನ್ನದನ್ನಾಗಿ ಮಾಡಿಕೊಳ್ಳಬೇಕು. ಇದು ಮುಂದೆ ಒಳ್ಳೆಯ ಹಸುವಾಗುತ್ತದೆ' ಎಂದು ಯೋಚಿಸತೊಡಗಿದ. ಇದಕ್ಕೆ ಏನಾದರೂ ಒಂದು ಒಳ್ಳೆಯ ಉಪಾಯ ಕಂಡು ಹಿಡಿಯಬೇಕು. ಆ ಕರು ಎತ್ತನ್ನು ಬಿಟ್ಟು ಹೋಗದಂತೆ ಮಾಡಬೇಕೆಂದುಕೊಂಡ.

ಸರಿ, ತನ್ನ ಎತ್ತಿನ ಹೊಟ್ಟೆಯ ಕೆಳಭಾಗಕ್ಕೆ ದಿನವೂ ಉಪ್ಪಿನ ನೀರನ್ನು ಸವರಲು ಪ್ರಾರಂಭಿಸಿದ. ಕರು ಬಂದು ನೆಕ್ಕುವಾಗ ಉಪ್ಪಿನ ರುಚಿ ನಾಲಿಗೆಗೆ ಸಿಕ್ಕಿದ್ದೇ ತಡ ಅದು ಎತ್ತನ್ನು ಬಿಟ್ಟು ಎಲ್ಲಿಯೂ ಹೋಗದೆ ಅಲ್ಲೇ ಉಳಿಯತೊಡಗಿತು. ಶ್ರೀಮಂತನಿಗೆ ಇದೇ ಸರಿಯಾದ ಸಮಯ ಎನ್ನಿಸಿ, ಅವನು ಎತ್ತಿನ ಜೊತೆಯಲ್ಲಿ ಕರುವನ್ನೂ ತನ್ನ ಮನೆಯಲ್ಲೇ ಕಟ್ಟಿ ಹಾಕತೊಡಗಿದ. ಆ ಮುದುಕ ತನ್ನ ಕರುವನ್ನು ಹಿಡಿದುಕೊಂಡು ಹೋಗಲು ಬಂದರೆ ಶ್ರೀಮಂತ ಅದನ್ನು ತಡೆದು, 'ಕರು ನನ್ನದು' ಎಂದು ವಾದಿಸತೊಡಗಿದ. ಮುದುಕ ನನ್ನದು ಎಂದು ಎಂದು ಹೇಳಿ, ಹೀಗೆ ಕೊನೆಗೆ ಜಗಳವೇ ಆರಂಭವಾಯಿತು.



ಕಡೆಗೆ ಎಲ್ಲ ಸೇರಿ ಪಂಚಾಯಿತಿ ಸೇರಿಸಿದರು. ಪಂಚಾಯಿತಿಯವರ ಮುಂದೆ ಶ್ರೀಮಂತ 'ಕರು ನನ್ನದು' ಎಂದ. ಆಗ ಪಂಚಾಯಿತಿಯವರು ನಗತೊಡಗಿದರು. 'ಅಲ್ಲಪ್ಪಾ ಶ್ರೀಮಂತ! ಎತ್ತು ಎಲ್ಲಾದರೂ ಕರು ಹಾಕುವುದುಂಟೇ?'

5th-std_Term 3_Kannada_Reader_CBSE_KM.indd 118 7/9/2019 3:41:32 PM

ಎಂದರು. ಅದಕ್ಕೆ ಅವನು 'ಅದೆಲ್ಲ ನನಗೆ ಗೊತ್ತಿಲ್ಲ. ಕರು ಮಾತ್ರ ನನ್ನದು' ಎಂದು ಪಟ್ಟು ಹಿಡಿದು ಕುಳಿತ.

ಪಂಚಾಯಿತಿಯವರಿಗೆ ತಲೆ ನೋವಾಯಿತು. ಈ ನ್ಯಾಯ ತೀರ್ಮಾನ ಮಾಡುವುದಾದರೂ ಹೇಗೆ ಎಂಬ ಸಮಸ್ಯೆ ಉಂಟಾಯಿತು. ಆಗ ಶ್ರೀಮಂತ ಒಂದು ಸಲಹೆಯನ್ನು ಕೊಟ್ಟ. 'ಆ ಮುದುಕನೂ ಹಸುವನ್ನು ಹೊರಗೆ ಕಟ್ಟಲಿ, ನಾನು ಎತ್ತನ್ನು ಹೊರಗೆ ಕಟ್ಟುತ್ತೇನೆ. ನೀವು ಕರುವನ್ನು ಹೊರಗೆ ಬಿಡಿ. ಕರು ಹಸುವಿನ ಹತ್ತಿರ ಹೋದರೆ ಮುದುಕನದು. ಆ ಕರುವೇನಾದರೂ ಎತ್ತಿನ ಹತ್ತಿರ ಬಂದರೆ ಅದು ನನ್ನದು. ಬೇಕಾದರೆ ಪರೀಕ್ಷೆ ಮಾಡಿ. ಏಕೆಂದರೆ ತಾಯಿ ಇರುವ ಕಡೆ ತಾನೇ ಮರಿ ಹೋಗುವುದು' ಎಂದ ಅವನು. ಪಂಚಾಯಿತಿಯವರು ವಿಧಿಯಿಲ್ಲದೆ ಒಪ್ಪಬೇಕಾಯಿತು. ಅದರಂತೆ ಕರುವನ್ನು ಬಿಟ್ಟರು. ಆ ಕರು ಉಪ್ಪಿನ ರುಚಿ ಕಂಡಿದ್ದರಿಂದ ಎತ್ತಿನ ಮೈಯನ್ನು ನೆಕ್ಕುತ್ತಾ ನಿಂತಿತು. ಆಗ ಪಂಚಾಯಿತಿಯವರು ವಿಧಿಯಿಲ್ಲದೆ ಇದು ತಪ್ಪು ಎಂದು ತಿಳಿದಿದ್ದರೂ ಸುಮ್ಮನಾಗಿ ಶ್ರೀಮಂತನಿಗೆ ಕರುವನ್ನು ಬಿಟ್ಟುಕೊಡಬೇಕಾಯಿತು. ಮುದುಕನಿಗೆ ಅನ್ಯಾಯವಾಯಿತು. ಕರುವನ್ನು ಕಳೆದುಕೊಂಡು ಆತ ತಲೆ ಮೇಲೆ ಕೈ ಹೊತ್ತು ಕೂತ. ಮುದುಕ ದಿನನಿತ್ಯ ಯೋಚನೆಯಲ್ಲಿ ಕೊರಗುತ್ತಾ ಯಾವ ಕೆಲಸವನ್ನೂ ಮಾಡದೆ, ಯಾವುದರಲ್ಲೂ ಆಸಕ್ತಿಯಿಲ್ಲದೆ ಸುಮ್ಮನೆ ಇರತೊಡಗಿದ.

ಒಂದು ದಿನ ಮುದುಕ ಯೋಚಿಸುತ್ತಾ ಊರಿನ ಗುಡ್ಡದ ಮೇಲೆ ಕುಳಿತುಕೊಂಡಿದ್ದನು. ಅದೇ ದಾರಿಯಲ್ಲಿ ಒಂದು ನರಿಯು ಬರುತ್ತಿತ್ತು. ಗುಡ್ಡದ ಮೇಲೆ ಮುದುಕ ಕುಳಿತಿರುವುದನ್ನು ಕಂಡು ಆ ಮುದುಕನ ಹತ್ತಿರ ಬಂದು, 'ಏಕಪ್ಪಾ ಈ ರೀತಿ ಕುಳಿತಿರುವೆ?' ಎಂದು ನರಿಯು ಅವನನ್ನು ಕೇಳಿತು. ಆಗ ಮುದುಕನು ತನಗೆ ಆದ ಅನ್ಯಾಯವನ್ನೆಲ್ಲಾ ನರಿಯ ಬಳಿ ಹೇಳಿದನು. ಆಗ ನರಿ ಮುದುಕನಿಗೆ ಆದ ಅನ್ಯಾಯವನ್ನು ಸರಿಪಡಿಸಬೇಕೆಂದು ಯೋಚಿಸಿ, ಮುದುಕನ ಬಳಿ ಒಂದು ಉಪಾಯವನ್ನು ಹೇಳಿತು. ಅದನ್ನು ಕೇಳಿ ಮುದುಕನಿಗೆ ಸಂತೋಷವಾಯಿತು. ನರಿ ಮುದುಕನ ಬಳಿ ಮತ್ತೆ, 'ನಾನು ಮಧ್ಯ ರಾತ್ರಿಯಲ್ಲಿ ಬರುತ್ತೇನೆ. ನಾನು ಬರುವ ದಿವಸ ಊರಿನ ನಾಯಿಗಳನ್ನೆಲ್ಲಾ ಕಟ್ಟಿ ಹಾಕಿಸಬೇಕು. ಒಂದು ನಾಯಿಯನ್ನೂ ಹೊರಗೆ ಬಿಡಬಾರದು ಮತ್ತೆ' ಎಂದು ಹೇಳಿತು.

ಆ ದಿನ ಸಂಜೆ ಮುದುಕ ಊರಿಗೆ ಬಂದು ನರಿಯು ಹೇಳಿದ ವಿಚಾರವನ್ನೆಲ್ಲಾ ಪಂಚಾಯಿತಿಯವರ ಬಳಿ ಹೇಳಿದನು. ಎಲ್ಲರೂ ಸೇರಿ ನರಿಯು ಬರುವ ದಿನ ಪಂಚಾಯಿತಿ ಸೇರಿಸುವಂತೆ ತೀರ್ಮಾನ ತೆಗೆದುಕೊಂಡರು. ಆ ದಿವಸಕ್ಕೆ ಎರಡು ದಿನ ಮುಂಚೆಯೇ ಆ ಊರಿನಲ್ಲಿರುವ ನಾಯಿಗಳನ್ನೆಲ್ಲಾ ಕಟ್ಟಿ ಹಾಕುವಂತೆ ಢಂಗೂರ ಸಾರಲಾಯಿತು.

ಊರಿನ ಜನರಿಗೆ ಆಶ್ಚರ್ಯವೋ ಆಶ್ಚರ್ಯ! ನರಿ ಬಂದು ನ್ಯಾಯ ತೀರ್ಮಾನ ಮಾಡುತ್ತದೆ ಎಂಬ ಸುದ್ದಿ ಕೇಳಿದ ಊರಿನ ಜನರು ಮಾತ್ರವಲ್ಲದೆ, ಅಕ್ಕಪಕ್ಕದ ಊರಿನ ಜನರೂ ಕೂಡ ಆ ದಿವಸ ಅಲ್ಲಿಗೆ ಬಂದು ಸೇರಿದರು. ಊರಿಗೆ ಊರೇ ಪಂಚಾಯಿತಿ ಕಟ್ಟೆಯಲ್ಲಿ ಬಂದು ಸೇರಿತು. ಹಬ್ಬ ಹರಿದಿನಗಳಲ್ಲಿ ಕೂಡ ಆ ಊರಿನಲ್ಲಿ ಇಷ್ಟು ಜನರು ಸೇರಿರಲಿಲ್ಲ. ಊರಿನ ಪಂಚಾಯಿತಿಯವರು 'ಪಂಚಾಯಿತಿ ಕಟ್ಟೆ'ಯಲ್ಲಿ ಕುಳಿತು ನರಿಗಾಗಿ ಕಾದು ಕುಳಿತರು. ರಾತ್ರಿ ಹನ್ನೆರಡು ಗಂಟೆಯಾದರೂ ನರಿ ಬಾರದೇ ಇದ್ದುದರಿಂದ ಬಂದಿದ್ದ ಜನರಿಗೂ ಪಂಚಾಯಿತಿಯವರಿಗೂ ಬೇಸರವಾಗಿ ಮುದುಕನನ್ನು ಕರೆದು, 'ಏನಯ್ಯಾ! ಹನ್ನೆರಡು ಗಂಟೆಯಾದರೂ ಇನ್ನೂ ನರಿ ಬರಲಿಲ್ಲವಲ್ಲಾ? ಅದು ಬರುವಂತೆ ಕಾಣೆವು.



5th-std_Term 3_Kannada_Reader_CBSE_KM.indd 119 7/9/2019 3:41:33 PM

ನಾವು ಮನೆಗೆ ಹೋಗುತ್ತೇವೆ' ಎಂದರು. ಆಗ ಮುದುಕ 'ಇನ್ನೂ ಸ್ವಲ್ಪ ಹೊತ್ತು ನೋಡಿ ಹೋಗುವಿರಂತೆ ಇರಿ' ಎಂದನು. ಮುದುಕನ ಮಾತಿನಂತೆ ಇನ್ನೂ ಅರ್ಧ ಗಂಟೆ ಕಾದು ಹೋಗೋಣ ಎಂದುಕೊಂಡು ಅವರು ಮತ್ತೆ ಕಾಯತೊಡಗಿದರು. ಸುಮಾರು ಹನ್ನೆರಡೂವರೆ ಗಂಟೆಯ ಸಮಯ. ಊರಿನ ಹೊರವಲಯದ ಬೀದಿಯಿಂದ ನರಿಯೊಂದು ಬರುತ್ತಿರುವುದನ್ನು ಕಂಡು ಜನ, 'ನರಿಯಣ್ಣ ಬರುತ್ತಿದ್ದಾನೆ' ಎಂದು ಕೂಗಿಕೊಂಡರು. ನರಿಗೆ ಇವರ ಕೂಗು ಕೇಳಿ ಗಾಬರಿಯಾಯಿತು. ಆದರೂ ಒಂದೊಂದೇ ಹೆಜ್ಜೆಯೂರುತ್ತಾ ನಿಧಾನವಾಗಿ ನಡೆದು ಬಂತು. ಪಂಚಾಯಿತಿಯವರು ಜನರನ್ನು ಗಲಾಟೆ ಮಾಡದಂತೆ ಸುಮ್ಮನಿರಿಸಿದರು. ನರಿಯಣ್ಣ ಮೆಲ್ಲಗೆ ಪಂಚಾಯಿತಿ



ಕಟ್ಟೆಯನ್ನು ಏರಿ ಪಂಚಾಯಿತಿಯವರಿಗೆ ಮತ್ತು ಜನರಿಗೆ ಕೈಮುಗಿದು ತಾನು ತಡವಾಗಿ ಬಂದುದಕ್ಕೆ ಮೊದಲು ಕ್ಷಮೆ ಕೇಳಿತು. ಆಗ ಜನರು 'ಏತಕ್ಕೆ ತಡ?' ಎಂದು ಕೇಳಿದರು. ಆಗ ನರಿ, 'ಸಮುದ್ರ ಹತ್ತಿಕೊಂಡು ಉರಿಯುತ್ತಿತ್ತು. ನಾನು ಹುಲ್ಲು ತೆಗೆದುಕೊಂಡು ಹೋಗಿ ಅದರಿಂದ ಬೆಂಕಿಯನ್ನು ಆರಿಸಿ ಬರುವುದಕ್ಕೆ ಇಷ್ಟು ಹೊತ್ತಾಯಿತು' ಎಂದಿತು. ಆಗ ಪಂಚಾಯಿತಿಯಲ್ಲಿದ್ದ ಜನರೆಲ್ಲರು ಘೊಳ್ಳೆಂದು ನಕ್ಕರು. 'ಸಮುದ್ರ ಎಲ್ಲಿಯಾದರೂ ಹತ್ತಿ ಉರಿಯುತ್ತದೆಯೇ? ಅದೂ ಅಲ್ಲದೆ ಅದನ್ನು ಹುಲ್ಲಿನಿಂದ ಆರಿಸಲು ಸಾಧ್ಯವೇ?' ಎಂದರು. ಆಗ ನರಿಯು, 'ಶ್ರೀಮಂತನ ಎತ್ತು ಕರು ಹಾಕಿರುವಾಗ ಸಮುದ್ರ ಏಕೆ ಉರಿಯಬಾರದು ? ಹುಲ್ಲು ಏಕೆ ಬೆಂಕಿಯನ್ನು ನಂದಿಸಲಾರದು' ಎಂದು ಕೇಳಿತು. ನರಿಯ ಮಾತಿನ ಅರ್ಥ ಎಲ್ಲರಿಗೂ ಆಯಿತು. ಆಮೇಲೆ ನರಿಯು ಎಲ್ಲಾದರು ನಾಯಿಗಳು ಬಂದು ಬಿಡುತ್ತವೇನೋ ಎಂದು ಹೆದರಿ ಅಲ್ಲಿಂದ ವೇಗವಾಗಿ ಪಲಾಯನ ಮಾಡಿತು.

ನರಿಯ ನ್ಯಾಯವನ್ನು ಕೇಳಿದ ಜನರು ಶ್ರೀಮಂತನ ಮೋಸವನ್ನು ಅರಿತು, 'ಎಂತಹ ಬುದ್ಧಿವಂತ ನರಿ ಇದು. ಇಷ್ಟು ದಿವಸ ತೀರ್ಮಾನ ಮಾಡಲು ಆಗದೇ ಇದ್ದ ಒಂದು ವಿಷಯವನ್ನು ಒಂದೇ ನಿಮಿಷಕ್ಕೆ ಕಡ್ಡಿ ಮುರಿದಂತೆ ತೀರ್ಮಾನ ಮಾಡಿ ಬಿಟ್ಟಿತಲ್ಲಾ!' ಎಂದು ಎಲ್ಲರೂ ನರಿಯನ್ನು ಹೊಗಳತೊಡಗಿದರು. ಮುದುಕನ ಕರುವನ್ನು ಮರಳಿ ಅವನಿಗೇ ಕೊಡಿಸಿದರು. ಅವನಿಗೆ ತುಂಬಾ ಸಂತೋಷವಾಯಿತು.

ನೀತಿ: ಅತಿ ಆಸೆ ಗತಿಗೇಡು

5th-std_Term 3_Kannada_Reader_CBSE_KM.indd 120 7/9/2019 3:41:33 PM

ಕವಿ ಕರ್ತೃ ವಿಚಾರ

ಶ್ರೀನಿವಾಸ. ಎಂ ಪಣಕಹಳ್ಳಿಯವರು 15, ಏಪ್ರಿಲ್ 1980 ರಂದು ಈರೋಡು ಜಿಲ್ಲೆಯ ತಾಳವಾಡಿ ತಾಲ್ಲೂಕಿನ ಪಣಕಹಳ್ಳಿ ಗ್ರಾಮದಲ್ಲಿ ಜನಿಸಿದರು. ಇವರು ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನಲ್ಲಿ ಬಿ.ಎ (2002 ರಲ್ಲಿ) ಪದವಿಯನ್ನೂ, ಮದುರೈ ಕಾಮರಾಜ ವಿಶ್ವವಿದ್ಯಾನಿಲಯದಿಂದ ಎಂ.ಎ (2005 ರಲ್ಲಿ) ಸ್ನಾತಕೋತ್ತರ ಪದವಿಯನ್ನೂ ಉನ್ನತ ಶ್ರೇಣಿಯಲ್ಲಿ ಚಿನ್ನದ ಪದಕದೊಂದಿಗೆ ಪಡೆದಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಜೆ.ಎಸ್.ಎಸ್ ಕಾಲೇಜು ಚಾಮರಾಜನಗರದಲ್ಲಿ ಬಿ.ಇಡಿ (2006 ರಲ್ಲಿ) ಪದವಿಯನ್ನೂ ಉನ್ನತ ಶ್ರೇಣಿಯೊಂದಿಗೆ ಪಡೆದಿದ್ದಾರೆ.

ಶ್ರೀನಿವಾಸ. ಎಂ ಪಣಕಹಳ್ಳಿಯವರು ಬಹುಮುಖ ಪ್ರತಿಭೆಯುಳ್ಳವರು. ಶಾಲಾ ಕಾಲೇಜು ದಿನಗಳಲ್ಲಿಯೇ ಕವಿತೆಗಳನ್ನು ಬರೆಯುವ ಪ್ರವೃತ್ತಿಯನ್ನು ಕರಗತ ಮಾಡಿಕೊಂಡಿದ್ದಾರೆ. ಇವರು ಕಲೆ, ಸಾಹಿತ್ಯ, ಕ್ರೀಡೆ, ಹಾಸ್ಯ, ಅನುವಾದ ಮುಂತಾದ ಪ್ರಕಾರಗಳಲ್ಲಿ ತಮ್ಮನ್ನು ನಿರಂತರವಾಗಿ ತೊಡಗಿಸಿಕೊಂಡಿದ್ದಾರೆ. ಇವರು 130ಕ್ಕೂ ಅಧಿಕ ಕವಿತೆಗಳನ್ನು ರಚಿಸಿದ್ದಾರೆ. ಇವರ ಕವಿತೆಗಳು 'ನಿಜದನಿ ಪತ್ರಿಕೆ', ನೈರುತ್ಯ ಪತ್ರಿಕೆ, 'ಕಾಲೇಜಿನ ಪತ್ರಿಕೆಗಳು', ಸಾಮಾಜಿಕ ಜಾಲತಾಣದ ಪತ್ರಿಕೆಗಳಾದ 'ಅವಧಿ ಪತ್ರಿಕೆ', ಕರ್ನಾಟಕ ನ್ಯೂಸ್ ಪೋರ್ಟಲ್(knp) ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಶ್ರೀನಿವಾಸ ಎಂ ಪಣಕಹಳ್ಳಿರವರಿಗೆ 'ಗ್ರಾಮಾಂತರ ಬುದ್ಧಿಜೀವಿಗಳ ಬಳಗ', ಮೈಸೂರು. ಇವರು ಏರ್ಪಡಿಸಿದ್ದ 2019ನೇ ಸಾಲಿನ ರಾಜ್ಯಮಟ್ಟದ ಸಾಹಿತೋತ್ಸವದಲ್ಲಿ ಕವಿ ಕೆ.ಎಸ್.ನರಸಿಂಹಸ್ವಾಮಿಯವರ ನೆನಪಿನ 'ಕಾವ್ಯ ಪುರಸ್ಕಾರ'(ಪ್ರಶಸ್ತಿ)ವನ್ನು ನೀಡಿ ಗೌರವಿದ್ದಾರೆ.

ಇವರು ಪ್ರತಿಭಾವಂತ ಕವಿಯಾಗಿ, ಉದಯೋನ್ಮುಕ ಬರಹಗಾರರಾಗಿದ್ದಾರೆ. ಕನ್ನಡ ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ನಿರಂತರವಾಗಿ ತೊಡಗಿಸಿಕೊಂಡಿದ್ದಾರೆ. ಕನ್ನಡ ಮತ್ತು ತಮಿಳು ಭಾಷೆಯನ್ನು ನಿರರ್ಗಳವಾಗಿ ಅರಿತುಕೊಂಡಿದ್ದಾರೆ. ಪ್ರಸ್ತುತ ಇವರು ಸರ್ಕಾರಿ ಮಾಧ್ಯಮಿಕ ಶಾಲೆ, ದೊಡ್ಡಗಾಜನೂರಿನಲ್ಲಿ ಕನ್ನಡ ಪದವೀಧರ ಶಿಕ್ಷಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಈ ನೀತಿಕಥೆಯನ್ನು ಸಹನಾರವರು ರಚಿಸಿರುವ "ನರಿಯ ನ್ಯಾಯ ಮತ್ತು ಇತರ ಕಥೆಗಳು" ಎಂಬ ಕಥಾಸಂಕಲನದಿಂದ ಆಯ್ದುಕೊಂಡು ಪಠ್ಯಪುಸ್ತಕದಲ್ಲಿ ಯುವಕವಿ ಶ್ರೀನಿವಾಸ ಎಂ. ಪಣಕಹಳ್ಳಿರವರು ಸಂಗ್ರಹಿಸಿ ಸಂಪಾದಿಸಿದ್ದಾರೆ.

ಕಲಿಕಾ ಫಲ

* ಈ ಕಥೆಯನ್ನು ನಿಮ್ಮ ಸ್ವಂತ ಮಾತಿನಲ್ಲಿ ಹೇಳಿರಿ.
* ನಿಮಗೆ ಯಾವ ಸ್ಪರ್ಧೆಯಲ್ಲಿ ಭಾಗವಹಿಸಲು ಇಷ್ಟ. ಕಾರಣವನ್ನು ತಿಳಿಸಿರಿ.

ಮೌಲ್ಯಮಾಪನ

ಅ. ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1) ಮುದುಕನು ಯಾವ ಪ್ರಾಣಿಯನ್ನು ಸಾಕಿದ್ದನು ?
2) ಶ್ರೀಮಂತನು ಎತ್ತಿನ ಹೊಟ್ಟೆಯ ಕೆಳಭಾಗಕ್ಕೆ ದಿನವೂ ಏನನ್ನು ಸವರುತ್ತಿದ್ದನು?
3) ಪಂಚಾಯಿತಿಯವರು ಶ್ರೀಮಂತನ ಮಾತನ್ನು ಕೇಳಿ ಏಕೆ ನಗತೊಡಗಿದರು?
4) ಮುದುಕನು ಚಿಂತೆಗೀಡಾಗಲು ಕಾರಣವೇನು ?
5) ಮುದುಕನು ಸಂತಸ ಪಡಲು ಕಾರಣವೇನು ?
6) ನರಿಯು ಪಂಚಾಯಿತಿ ಕಟ್ಟೆಯಲ್ಲಿ ಯಾವ ತೀರ್ಪನ್ನು ನೀಡಿತು ?

ಆ. ಚಿಂತನಾಶೀಲ ಪ್ರಶ್ನೆ

1) ನಿಮ್ಮ ಗ್ರಾಮವು ಅಭಿವೃದ್ಧಿ ಹೊಂದಲು ನೀವು ಕೈಗೊಳ್ಳುವ ಕ್ರಮಗಳಾವುವು?

5th-std_Term 3_Kannada_Reader_CBSE_KM.indd 121 7/9/2019 3:41:33 PM

ಘಟಕ ಏಳು

ವ್ಯಾಕರಣ

ಲಿಂಗಗಳು

1) ಶಿವಪುರದಲ್ಲಿ ಒಬ್ಬ **ಶಿವಭಕ್ತ**ನಿದ್ದನು

2) ಭಜನೆಯ ಮಂದಿರಕ್ಕೆ ಒಬ್ಬ **ಶರಣೆ** ಬಂದಿದ್ದಳು.

3) ನದಿಯ ಹತ್ತಿರ ಒಂದು **ಮೊಸಳೆ** ಇತ್ತು.

ಮೇಲಿನ ವಾಕ್ಯಗಳನ್ನು ಓದಿ ಗೆರೆ ಎಳೆದಿರುವ ಪದಗಳನ್ನು ಗಮನಿಸಿರಿ. **'ಶಿವಭಕ್ತ'** ಎಂಬ ಪದವು ಗಂಡಸು ಎಂಬುದನ್ನು ಸೂಚಿಸುತ್ತದೆ. **'ಶರಣೆ'** ಎಂಬ ಪದವು ಹೆಂಗಸು ಎನ್ನುವುದನ್ನು ಸೂಚಿಸುತ್ತದೆ. ಆದರೆ **'ಮೊಸಳೆ'** ಎಂಬ ಪದವು **'ಗಂಡಸು'** ಎಂಬುದನ್ನಾಗಲೀ, **'ಹೆಂಗಸು'** ಎಂಬುದನ್ನಾಗಲೀ ಸೂಚಿಸುವುದಿಲ್ಲ.

1) ಆ ಊರಿನಲ್ಲಿ ಪ್ರಸಿದ್ಧ **ರಾಜ** ಇರುವನು.

2) **ಪುನೀತ್** ಬಹಳ ಒಳ್ಳೆಯವನು.

ಮೇಲಿನ ವಾಕ್ಯಗಳನ್ನು ಓದಿ ಗೆರೆ ಎಳೆದಿರುವ ಪದಗಳನ್ನು ಗಮನಿಸಿರಿ. ರಾಜ, ಪುನೀತ್ ಎಂಬ ಪದಗಳೂ 'ಗಂಡಸು' ಎಂಬ ಅರ್ಥವನ್ನು ನೀಡುತ್ತವೆ. ಇವು ಪುಲ್ಲಿಂಗಗಳು.

1) **'ರಚಿತ'** ಬಲು ಅಪರೂಪದವಳು.

2) **'ಶಿಕ್ಷಕಿ'**ಯು ಪಾಠವನ್ನು ಮಾಡುತ್ತಿದ್ದಾರೆ.

ಮೇಲಿನ ವಾಕ್ಯಗಳನ್ನು ಓದಿ ಗೆರೆ ಎಳೆದಿರುವ ಪದಗಳನ್ನು ಗಮನಿಸಿರಿ. ರಚಿತ, ಶಿಕ್ಷಕಿ ಎಂಬ ಪದಗಳು ಹೆಂಗಸು' ಎಂಬ ಅರ್ಥವನ್ನು ನೀಡುತ್ತವೆ. ಇವು ಸ್ತ್ರೀಲಿಂಗಗಳು.

1) **ಗಿಳಿ**ಯ ಮೈ ಬಣ್ಣ ಹಸಿರು.

2) ಭರತನ ತೋಟದಲ್ಲಿ **ಹಣ್ಣು**ಗಳಿವೆ.

ಮೇಲಿನ ವಾಕ್ಯಗಳನ್ನು ಓದಿ ಗೆರೆ ಎಳೆದಿರುವ ಪದಗಳನ್ನು ಗಮನಿಸಿರಿ. ಗಿಳಿ, ಹಣ್ಣು ಎಂಬ ಪದಗಳು ಗಂಡಸು ಅಥವಾ ಹೆಂಗಸು ಎಂಬ ಅರ್ಥದಿಂದ ಬಳಕೆಯಾಗಿಲ್ಲ. ಇವು ನಪುಂಸಕ ಲಿಂಗಗಳು.

1) ಒಟ್ಟಾರೆಯಾಗಿ ಗಂಡಸು ಎಂಬ ಅರ್ಥದಿಂದ ಬಳಕೆಯಾಗುವ ಪದಗಳು **ಪುಲ್ಲಿಂಗ**ಗಳು.

2) ಹೆಂಗಸು ಎಂಬ ಅರ್ಥದಿಂದ ಬಳಸುವ ಪದಗಳು **ಸ್ತ್ರೀಲಿಂಗ**ಗಳು.


3) ಗಂಡಸು ಅಥವಾ ಹೆಂಗಸು ಎಂಬ ಅರ್ಥದಿಂದ ಬಳಕೆಯಾಗದ ಪದಗಳು **ನಪುಂಸಕಲಿಂಗ**ಗಳು.

5th-std_Term 3_Kannada_Reader_CBSE_KM.indd 122 7/9/2019 3:41:33 PM

ಘಟಕ ಎಂಟು

ಧರ್ಮ–ತತ್ವ–ಚಿಂತನೆ

ಪದ್ಯ	: ಬಸವಣ್ಣನವರ ವಚನ	–	ಬಸವಣ್ಣನವರು
ಗದ್ಯ	: ವೀರಮಾತೆ ಜೀಜಾಬಾಯಿ	–	ಸಂಗ್ರಹ
ಉಪಪಠ್ಯ	: ದುರಾಸೆಯ ಫಲ	–	ಸಂಗ್ರಹ
ವ್ಯಾಕರಣ	: ವಚನಗಳು		



ಕಲಿಕಾ ಉದ್ದೇಶಗಳು

- ಶಿಕ್ಷಣದ ಬಗ್ಗೆ ನಮ್ಮ ಹಿರಿಯರು ಹೇಳಿರುವ ವಿಚಾರಗಳನ್ನು ತಿಳಿದುಕೊಳ್ಳುವುದು.
- ಸಮಾಜಕ್ಕೆ ಮಹಿಳೆಯರ ಕೊಡುಗೆಯನ್ನು ಅರ್ಥೈಸಿಕೊಳ್ಳುವುದು.
- ಪ್ರಾಮಾಣಿಕತೆಯ ಮೌಲ್ಯವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು.
- ವಚನಗಳಲ್ಲಿ ಕಂಡು ಬರುವ ವ್ಯತ್ಯಾಸಗಳನ್ನು ತಿಳಿದುಕೊಳ್ಳುವುದು.
- *ಭಾಷಾ ಪ್ರೌಢಿಮೆಯನ್ನು ಬೆಳೆಸಿಕೊಳ್ಳುವುದು.

5th-std_Term 3_Kannada_Reader_CBSE_KM.indd 123 7/9/2019 3:41:35 PM



ಘಟಕ ಎಂಟು

ಬಸವಣ್ಣನವರ ವಚನ

ಪದ್ಯ

– ಬಸವಣ್ಣನವರು

ದಯವಿಲ್ಲದ ಧರ್ಮ ಯಾವುದಯ್ಯಾ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ
ದಯವೇ ಧರ್ಮದ ಮೂಲವಯ್ಯಾ!
ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯಾ!

5th-std_Term 3_Kannada_Reader_CBSE_KM.indd 124 7/9/2019 3:41:35 PM

ಪದಗಳ ಅರ್ಥ

ದಯೆ – ಕರುಣೆ; ಸಕಲ – ಎಲ್ಲಾ, ಸರ್ವ; ಮೂಲ – ಆರಂಭ;

ಪದ್ಯದ ಭಾವಾರ್ಥ

ಎಲ್ಲಾ ಧರ್ಮಗಳೂ ದಯೆಯನ್ನು ಪ್ರತಿಪಾದಿಸುತ್ತವೆ. ದಯವೇ ಧರ್ಮದ ಮೂಲಾಂಶ. ಸಮಷ್ಟಿ ಹಿತವನ್ನು ಸಾಧಿಸಬೇಕಾದರೆ ದಯವಿರಬೇಕು. ಸಕಲ ಪ್ರಾಣಿಗಳಲ್ಲೂ ದಯೆ ತೋರಿಸಬೇಕು. ದಯೆ ಇಲ್ಲದಿದ್ದಲ್ಲಿ ದ್ವೇಷರಾಗಗಳು ವಿಜೃಂಭಿಸಿ ಸರ್ವನಾಶಕ್ಕೆ ಕಾರಣವಾಗುತ್ತದೆ. ಆಯಾ ಧರ್ಮ ಸ್ಥಾಪಕರು, ಪ್ರವರ್ತಕರು, ದಯೆಗೆ ಪ್ರಥಮ ಸ್ಥಾನ ಕೊಟ್ಟಿರುವುದಲ್ಲದೆ ದಯವೇ ಧರ್ಮದ ಮೂಲಗುಣವೆಂದು ಸಾರಿದ್ದಾರೆ.

ವಚನಕಾರರನ್ನು ಕುರಿತು



ವಚನ ಎಂದರೆ ಮಾತು ಎಂದು ಅರ್ಥ. ಆದರೆ ಶರಣರು ರಚಿಸಿರುವ ವಚನಗಳು ಕನ್ನಡ ಸಾಹಿತ್ಯದ ಒಂದು ಪ್ರಕಾರವಾಗಿದೆ. ಈ ವಚನವನ್ನು ಹನ್ನೆರಡನೇ ಶತಮಾನದ ಶರಣರಾದ ಬಸವಣ್ಣನವರು ರಚಿಸಿದ್ದಾರೆ. ಇವರು ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದರು. ಇವರು ಸರ್ವ ಸಮಾನತೆಯನ್ನು ಜಗತ್ತಿಗೆ ಸಾರಿದ ಮಹಾನ್ ಪುರುಷರು. ಇವರ ವಚನಗಳ ಅಂಕಿತ ನಾಮ ಕೂಡಲಸಂಗಮದೇವಾ!

ಕಲಿಕಾ ಫಲ

- ವಚನವನ್ನು ಓದುವ ವಿಧಾನವನ್ನು ತಿಳಿದುಕೊಳ್ಳುವುದು.
- ಬಸವಣ್ಣನವರು ಹಾಗೂ ಇನ್ನಿತರ ವಚನಕಾರರ ವಚನಗಳನ್ನು ಸಂಗ್ರಹಿಸಿ ತಿಳಿದುಕೊಳ್ಳುವುದು.
- ಬಸವಣ್ಣ ಹಾಗೂ ಇತರ ವಚನಕಾರರಿಗೆ ಸಂಬಂಧಿಸಿದ ವಿಷಯಗಳನ್ನು ತಿಳಿದುಕೊಳ್ಳುವುದು.
- ಈ ವಚನವನ್ನು ಸರಿಯಾದ ಉಚ್ಚಾರಣೆಯೊಂದಿಗೆ ಓದಿ ತಿಳಿದುಕೊಳ್ಳುವುದು.
- ಈ ವಚನವನ್ನು ಕಂಠಪಾಠ ಮಾಡಿ

ಮೌಲ್ಯಮಾಪನ

ಓದೋಣ! ಚಿಂತಿಸೋಣ! ಬರೆಯೋಣ!

ಅ. ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ

1. ಸಕಲ ಪದದ ಸಮಾನ ಅರ್ಥ ನೀಡುವ ಪದ .....

ಅ) ಸರ್ವ ಆ) ಸಕಾಲ
ಇ) ಕೆಲಸ ಈ) ಅಕಾಲ

2. ದಯ+ಇಲ್ಲದ ಈ ಪದವನ್ನು ಕೂಡಿಸಿ ಬರೆದಾಗ .....

ಅ) ದಯಇಲ್ಲದ ಆ) ದಯಯಿಲ್ಲದ
ಇ) ದಯವಿಲ್ಲದ ಈ) ದಯವೇಇಲ್ಲದ

5th-std_Term 3_Kannada_Reader_CBSE_KM.indd 125 7/9/2019 3:41:36 PM

3 **ಮೂಲವಯ್ಯಾ ಈ ಪದವನ್ನು ಬಿಡಿಸಿ ಬರೆದಾಗ _____**

ಅ) ಮೂಲ+ವಯ್ಯಾ ಆ) ಮೂಲ+ಅಯ್ಯಾ

ಇ) ಮೂಲವು+ವಯ್ಯಾ ಈ) ಮೂಲಕ+ಅಯ್ಯಾ

4 **ಧರ್ಮ ಪದದ ವಿರುದ್ಧ ಪದ _____**

ಅ) ಧರುಮ ಆ) ಕರ್ಮ

ಇ) ನ್ಯಾಯ ಈ) ಅಧರ್ಮ

5 **ಬಸವಣ್ಣನವರ ವಚನಗಳ ಅಂಕಿತನಾಮ _____**

ಅ) ಕೂಡಲಸಂಗಮದೇವ ಆ) ಸಂಗಮದೇವ

ಇ) ಚನ್ನಬಸವಣ್ಣ ಈ) ಬಸವಣ್ಣ

ಆ. ಈ ವಚನದಲ್ಲಿ ಬಂದಿರುವ ಪ್ರಾಸ ಪದಗಳನ್ನು ಕಂಡು ಹಿಡಿದು ಬರೆಯಿರಿ.

_____, _____

_____, _____

ಇ. ಸಕಲ ಪ್ರಾಣಿಗಳೆಲ್ಲರಲ್ಲಿ ಎಂಬ ಪದವನ್ನು ಉಪಯೋಗಿಸಿಕೊಂಡು ಹೊಸಹೊಸ ಪದಗಳನ್ನು ರಚಿಸಿ.

_____, _____, _____, _____

ಈ. ಹೊಂದಿಸಿ ಬರೆಯಿರಿ.

1. ದಯೆ	–	ಕೂಡಲ ಸಂಗಮದೇವ
2. ಸಕಲ	–	ಮಾತು
3. ಬಸವಣ್ಣ	–	ಚೆನ್ನಮಲ್ಲಿಕಾರ್ಜುನ
4. ವಚನ	–	ಪ್ರಾಣಿ
5. ಅಕ್ಕಮಹಾದೇವಿ	–	ಧರ್ಮ

ಉ. ಈ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. 'ಕೂಡಲ ಸಂಗಮದೇವ' ಇದು ಯಾರ ಅಂಕಿತನಾಮ ?
2. ಧರ್ಮದ ಮೂಲ ಯಾವುದು ?

ಊ. ಚಿಂತನಾಶೀಲ ಪ್ರಶ್ನೆ.

ನಾವು ಯಾವ ಜೀವಿಯನ್ನೂ ಕನಿಷ್ಠವಾಗಿ ಕಾಣಬಾರದು ಎಂಬುದನ್ನು ಕುರಿತು ತರಗತಿಯಲ್ಲಿ ಚರ್ಚಿಸಿ.

5th-std_Term 3_Kannada_Reader_CBSE_KM.indd 126 7/9/2019 3:41:36 PM

ಘಟಕ ಎಂಟು

ಗದ್ಯ

ವೀರಮಾತೆ ಜೀಜಾಬಾಯಿ

'ಮಾತಾಜಿಯವರಿಗೆ ನನ್ನ ಪ್ರಣಾಮಗಳು' ಚಿಗುರು ಮೀಸೆ ವೀರ ಬಾಲಕ ನಮ್ರತೆಯಿಂದ ನುಡಿದನು. ಮುಗುಳ್ನಗೆ ಬೀರುತ್ತಾ ಅವನ ತಾಯಿ, 'ಬಾ ಕಂದ! ಇಲ್ಲಿ ಕುಳಿತುಕೋ!' ಎಂದಳು. 'ಆಗಲಿ ತಾಯಿ' ಎಂದು ಬಾಲಕ ಕುಳಿತುಕೊಂಡನು.

'ಅಮ್ಮಾ! ನನ್ನನ್ನು ಕರೆಸಿದ ಕಾರಣವೇನು? ನನ್ನಿಂದ ಏನಾಗಬೇಕು ಕೇಳು ತಾಯಿ? ಎಂದನು ಬಾಲಕ, 'ನಾನು ಕೇಳಿದ್ದನ್ನು ಕೊಡುವೆಯಾ ಮಗನೇ?' ಎಂದು ತಾಯಿ ಅಭಿಮಾನದಿಂದ ನುಡಿದಳು.

'ಆಗಲಿ ಮಾತಾಜಿ... ಭವಾನಿ ತಾಯಿಯ ಮೇಲೆ ಆಣೆ'. ನೀನು ಕೆಲಿದ್ದನ್ನು ಕೊಡುವೆ' ಎಂದನು ಮಗ.

ತಾಯಿ ಮನಸ್ಸಿನಲ್ಲೇ ಯೋಚಿಸುತ್ತಾ, 'ಕುಮಾರ! ಆಡಿದ ಮಾತಿನಂತೆ ನಾನು ಕೇಳಿದ್ದನ್ನು ಕೊಡಬೇಕು' ಎಂದಳು.

'ಕೇಳು ತಾಯಿ! ಅಗತ್ಯವಾಗಿ ನೀಡುತ್ತೇನೆ' ಎಂದನು ಮಗ ಸಂತೋಷದಿಂದ. 'ನಾನು ಧನ್ಯ ಕಂದಾ, ಈಗ ಹೇಳುವೆನು ಕೇಳು. ಕೊಂಡಾಣ ದುರ್ಗವು ಮೊಘಲರ ವಶದಲ್ಲಿದೆ. ಅದನ್ನು ನೀನು ಗೆದ್ದು ನನಗೆ ಬಹುಮಾನವಾಗಿ ಕೊಡಬೇಕು' ಎಂದಳು ಹೆಮ್ಮೆಯಿಂದ ಮಗನನ್ನು ನೋಡುತ್ತಾ ತಾಯಿ.




ಈ ರೀತಿ ಸಂಭಾಷಣೆ ನಡೆಸಿದ ತಾಯಿ ಮಗ ಯಾರು ಗೊತ್ತೇ? ಇವರೇ ಭಾರತದ ಇತಿಹಾಸದಲ್ಲಿ ಶಾಶ್ವತ ಸ್ಥಾನ ಪಡೆದಿರುವ ವೀರಮಾತೆ ಜೀಜಾಬಾಯಿ ಹಾಗೂ ಅವಳ ಪುತ್ರ ಮರಾಠ ಸಾಮ್ರಾಜ್ಯದ ಉನ್ನತಿಗೆ ಕಾರಣನಾದ 'ಛತ್ರಪತಿ ಶಿವಾಜಿ!'

5th-std_Term 3_Kannada_Reader_CBSE_KM.indd 127 7/9/2019 3:41:37 PM

ಜೀಜಾಬಾಯಿ ಕ್ರಿ.ಶ. 1595ರಲ್ಲಿ 'ಲಖೂಜಿ' ಜಾಧವರಾವ್ ಅವರ ಮಗಳಾಗಿ ಜನಿಸಿದಳು. ಕ್ರಿ.ಶ. 1603ರಲ್ಲಿ ಷಹಾಜಿಯನ್ನು ವಿವಾಹವಾದಳು. ಷಹಾಜಿಯು ಬಿಜಾಪುರದ ಆದಿಲ್‌ಷಾಹಿಯಲ್ಲಿ ಉದ್ಯೋಗ ಮಾಡುತ್ತಿದ್ದನ್ನು ಕ್ರಿ.ಶ. 1627ರಲ್ಲಿ ಶಿವನೇರಿ ದುರ್ಗದಲ್ಲಿ ಈ ದಂಪತಿಗಳ ಮಗನಾಗಿ ಶಿವಾಜಿಯು ಜನಿಸಿದನು. ಷಹಾಜಿಯು, ತನ್ನ ಮಗ ಶಿವಾಜಿಯನ್ನು ಗುರುವಾದ ದಾದಾಜಿಕೊಂಡ ದೇವನಲ್ಲಿ ವಿದ್ಯಾಭ್ಯಾಸಕ್ಕಾಗಿ ಕಳುಹಿಸಿದನು. ಗುರು ದಾದಾಜಿ ಕೊಂಡ ದೇವನು ಶಿವಾಜಿಗೆ ಕತ್ತಿ ವರಸೆ, ಕುದುರೆ ಸವಾರಿ ಮುಂತಾದ ಯುದ್ಧ ಕಲೆಗಳನ್ನು ಕಲಿಸಿದನು.

ಷಹಾಜಿ ಅನಿವಾರ್ಯವಾಗಿ ತನ್ನಿಂದ ದೂರವಾದಾಗ ಜೀಜಾಬಾಯಿ ಬಹಳ ನೊಂದುಕೊಂಡಳು. ಆದರೂ ಎದೆಗುಂದದೆ ಸ್ವತಂತ್ರವಾಗಿ ಬದುಕಲು ಪ್ರಾರಂಭಿಸಿದಳು. ಮಗನನ್ನು ಓರ್ವ ವೀರಯೋಧನನ್ನಾಗಿ ಬೆಳೆಸುವ ಹೊಂಗನಸಿನೊಂದಿಗೆ ಪುಣೆಗೆ ಬಂದು ಅವನೊಂದಿಗೆ ನೆಲೆಸಿದಳು. ಜೀಜಾಬಾಯಿ ಚಾಣಾಕ್ಷ ಹೆಣ್ಣು ಮಗಳು. ಕೇವಲ ಓರ್ವ ಸಾಮಾನ್ಯ ಮಹಿಳೆಯಂತೆ ಬದುಕಿನ ಆಗುಹೋಗುಗಳನ್ನು ನೆನೆದು ದುಃಖಿಸುವ ಹೆಣ್ಣಾಗಿರಲಿಲ್ಲ ಅವಳು. ಅಖಂಡ ಭಾರತದಲ್ಲಿ ಮೊಘಲರ ಆಳ್ವಿಕೆಯನ್ನು ಕೊನೆಗೊಳಿಸಲು ಪಣ ತೊಟ್ಟಳು. ಭಾರತದಾದ್ಯಂತ ಮರಾಠ ಸಾಮ್ರಾಜ್ಯದ ವಿಜಯ ಪತಾಕೆಯನ್ನು ಹಾರಿಸಬೇಕೆಂದು ತೀರ್ಮಾನಿಸಿದಳು. ಪರಕೀಯರ ಗುಲಾಮಗಿರಿಯಿಂದ ಹೊರಬಂದು ಸ್ವತಂತ್ರವಾಗಿ ಬಾಳಬೇಕು ಎಂದು ನಿರ್ಧರಿಸಿದಳು.



ಶಿವಾಜಿಗೆ ಪ್ರತಿನಿತ್ಯ ರಾಮಾಯಣ–ಮಹಾಭಾರತ ಮುಂತಾದ ಪುರಾಣ ಪುಣ್ಯ ಕತೆಗಳನ್ನು ಹೇಳುತ್ತಿದ್ದಳು. ನ್ಯಾಯ, ನೀತಿ, ಸ್ತ್ರೀಯರಲ್ಲಿ ಗೌರವ, ಕಷ್ಟಸಹಿಷ್ಣುತೆ ಇತ್ಯಾದಿ ಗುಣಗಳನ್ನು ಚಿಕ್ಕಂದಿನಿಂದಲೇ ಮಗನಲ್ಲಿ ಬೆಳೆಸಿದಳು. ಶಿವಾಜಿಗೆ ವೀರಪುರುಷರ ಕತೆಗಳನ್ನು ಕೇಳುವ, ಸಾಹಸಿ ಕೆಲಸಗಳನ್ನು ಮಾಡುವ ಆದರ್ಶಗಳನ್ನು ಬಾಲ್ಯದಿಂದಲೇ ಬಿತ್ತಿದಳು. ಹೀಗೆ ಜೀಜಾಬಾಯಿ ಮಗನಲ್ಲಿ ಧೈರ್ಯ, ಸ್ವಾಭಿಮಾನ, ಸಾಹಸ, ಸೇವೆ, ತ್ಯಾಗ ಮುಂತಾದ ಮೌಲ್ಯಗಳನ್ನು ಬಾಲ್ಯದಲ್ಲಿಯೇ ತುಂಬಿದಳು. ಅವನನ್ನು ಉತ್ತಮ ದೇಶಭಕ್ತನನ್ನಾಗಿ ಬೆಳೆಸಿದಳು. ಅಖಂಡ ಮರಾಠ ಸಾಮ್ರಾಜ್ಯದ ಉನ್ನತಿಗೆ ದಾರಿದೀಪವಾದಳು.

ಮುಂದೆ ಶಿವಾಜಿಯು ಪ್ರಬಲ ಮೊಘಲ ಸಾಮ್ರಾಟ ಔರಂಗಜೇಬನ ವಿರುದ್ಧ ಹೋರಾಟಿ ಜಯ ಗಳಿಸಿದನು. ಜೀಜಾಬಾಯಿ ಮಗನ ವಿಜಯೋತ್ಸವಕ್ಕೆ ಬಹಳ ಸಂತೋಷಪಟ್ಟಳು. ರಾಯಗಢದಲ್ಲಿ ಶಿವಾಜಿಯ ಪಟ್ಟಾಭಿಷೇಕವು ಅತ್ಯಂತ ವೈಭವದಿಂದ ನಡೆಯಿತು. ಸ್ವಾಮಿ ರಾಮದಾಸರು ಬಂದು ತಮ್ಮ ಹಸ್ತದಿಂದ ಶಿವಾಜಿಗೆ ಮುಕುಟಧಾರಣೆ ಮಾಡಿದರು. ಜೀಜಾಬಾಯಿ ಶಿವಾಜಿಯು ಬಾಲ್ಯದಲ್ಲಿದ್ದಾಗ ತಾನು ಕಂಡ ಕನಸು ನನಸಾಯಿತು ಎಂದು ಖುಷಿಪಟ್ಟು ಶಿವಾಜಿಯನ್ನು ಆಶೀರ್ವದಿಸಿದಳು. ಅಂದು ಅವಳು ಸಹ ರಾಜಮಾತೆ ಎನ್ನಿಸಿಕೊಂಡಳು. ಈ ಸಂತೋಷದ ದಿನಗಳನ್ನು ಅನುಭವಿಸಲು ಹೆಚ್ಚು ಅವಕಾಶ ಜೀಜಾಬಾಯಿಗೆ ಲಭಿಸಲಿಲ್ಲ. ಶಿವಾಜಿ ಗದ್ದುಗೆಯನ್ನೇರಿದ ಕೆಲವೇ ದಿನಗಳಲ್ಲಿ ಹಾಸಿಗೆ ಹಿಡಿದಳು.

ಸುಮಾರು ಎಂಭತ್ತು ವರ್ಷಗಳ ಕಾಲ ಜೀವಿಸಿದ ಜೀಜಾಬಾಯಿ ಮರಾಠರ ಅಭ್ಯುದಯವನ್ನು ಕಂಡಳು. ಅನಂತರ ರಾಯಗಢದ ಬಳಿ ಇರುವ 'ಪಾಚಾಡ' ಎಂಬ ಹಳ್ಳಿಯಲ್ಲಿ ಕ್ರಿ.ಶ. 1678ರಲ್ಲಿ ನಿಧನ ಹೊಂದಿದಳು.

ಮನೆಯೇ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು.

ಜನನಿಯಿಂದ ಪಾಠ ಕಲಿತ ಜನರೆ ಧನ್ಯರು

5th-std_Term 3_Kannada_Reader_CBSE_KM.indd 128 7/9/2019 3:41:37 PM

ಪದಗಳ ಅರ್ಥ

ಪ್ರಣಾಮ–ನಮಸ್ಕಾರ, ವಂದನೆ; ನಮ್ರತೆ–ವಿನಯದಿಂದ ಕೂಡಿದ; ಗದ್ದಿಗೆ–ಪೀಠ; ಪ್ರಾರಂಭ–ಮೊದಲು, ಆರಂಭ; ಅಂತಿಮ–ಕೊನೆ; ಶಾಶ್ವತ–ಚಿರಂತನ, ನಾಶ ಹೊಂದದ; ಸ್ವಾಭಿಮಾನ–ಆತ್ಮಗೌರವ, ತನ್ನ ಬಗೆಗೆ ಇರುವ ಅಭಿಮಾನ; ಉದ್ಯೋಗ– ವೃತ್ತಿ, ಕಾಯಕ; ಉನ್ನತಿ–ಹಿರಿಮೆ, ಏಳಿಗೆ, ಅಭಿವೃದ್ಧಿ; ಎದೆಗುಂದದೆ–ಹೆದರದೆ, ಧೈರ್ಯಗುಂದದೆ, ಅಂಜದೆ, ಅಳುಕಿಲ್ಲದೆ, ತಳಮಳಗೊಳ್ಳದೆ; ನಿರ್ಧಾರ–ನಿಶ್ಚಯ, ತೀರ್ಮಾನ; ಹೊಂಗನಸು–ಸುಂದರ, ಸ್ವಪ್ನ, ಹಿತವಾದ ಕನಸು; ಚಾಣಾಕ್ಷ–ಬುದ್ಧಿವಂತ, ಸೂಕ್ಷ್ಮ ದೃಷ್ಟಿಯುಳ್ಳವ, ವ್ಯವಹಾರ ಚತುರ; ಪಣ–ಪ್ರತಿಜ್ಞೆ; ಪತಾಕೆ–ಧ್ವಜ, ಬಾವುಟ; ವೈಭವ–ಆಡಂಬರ; ಮುಕುಟ–ಕಿರೀಟ; ಅಭ್ಯುದಯ–ಅಭಿವೃದ್ಧಿ, ಏಳಿಗೆ, ಉನ್ನತಿ.

ಟಿಪ್ಪಣಿ

ವಿಜಯೋತ್ಸವ : ಗೆಲುವು ಸಿಕ್ಕಿದಾಗ ಆಚರಿಸುವ ಸಂತೋಷ ಸಮಾರಂಭ.

ಸಾಮ್ರಾಜ್ಯ : ಸಾರ್ವಭೌಮ ಅಧಿಕಾರವುಳ್ಳ ರಾಷ್ಟ್ರ, ಚಕ್ರಾಧಿಪತ್ಯ.

ಪಟ್ಟಾಭಿಷೇಕ : (ರಾಜನಾಗುವವನಿಗೆ) ವಿದ್ಯುಕ್ತವಾಗಿ ಪವಿತ್ರ ಜಲಗಳಿಂದ ಅಭಿಷೇಕ ಮಾಡುವಿಕೆ, ಪಟ್ಟಕಟ್ಟುವಿಕೆ.

ಮೌಲ್ಯಮಾಪನ

ಓದೋಣ! ಚಿಂತಿಸೋಣ! ಬರೆಯೋಣ!

ಅ. ಆವರಣದಲ್ಲಿ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಖಾಲಿ ಬಿಟ್ಟ ಸ್ಥಳದಲ್ಲಿ ಬರೆಯಿರಿ.

(ಮಹಾಭಾರತ, ಜೀಜಾಬಾಯಿ, ರಾಯಗಢ, ಷಹಾಜಿ, ರಾಮಾಯಣ).

1. ಶಿವಾಜಿಯ ಪಟ್ಟಾಭಿಷೇಕವು _____ರಲ್ಲಿ ನಡೆಯಿತು.
2. ಜೀಜಾಬಾಯಿ _____ ಎಂಬುವವರನ್ನು ವಿವಾಹವಾದಳು.
3. ಛತ್ರಪತಿ ಶಿವಾಜಿಯ ತಾಯಿಯ _____.
4. ಜೀಜಾಬಾಯಿ ಶಿವಾಜಿಗೆ ಪ್ರತಿನಿತ್ಯ _____ ಮತ್ತು _____ ಕಥೆಗಳನ್ನು ಹೇಳುತ್ತಿದ್ದಳು.

ಆ. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ರಚಿಸಿ.

1) ನೀತಿ : _____

2) ಗೌರವ : _____

3) ಜಯ : _____

4) ಧೈರ್ಯ : _____

5th-std_Term 3_Kannada_Reader_CBSE_KM.indd 129 7/9/2019 3:41:37 PM

ಇ. **ಮಾದರಿಯಲ್ಲಿ ಕೊಟ್ಟಿರುವ ಪದವನ್ನು ಗಮನಿಸಿ. ಅದರಂತೆ ಎರಡೆರಡು ಸಮಾನಾರ್ಥಕ ಪದಗಳನ್ನು ಬರೆಯಿರಿ.**

ಮಾದರಿ : ಸಮುದ್ರ = ಸಾಗರ, ಕಡಲು.

1) ಪುತ್ರ = _____, _____.

2) ರಾಜ = _____, _____.

3) ಯುದ್ಧ = _____, _____.

4) ಪ್ರಾರಂಭ = _____, _____.

ಈ. **ಕೊಟ್ಟಿರುವ ಪದವನ್ನು ಬಳಸಿ ಸ್ವಂತ ವಾಕ್ಯಗಳನ್ನು ಬರೆಯಿರಿ**

1) ಬಹುಮಾನ : _____

2) ಉದ್ಯೋಗ : _____

3) ಆಶೀರ್ವಾದ : _____

4) ವೈಭವ : _____

5) ಹಿರಿಮೆ : _____

ಉ. **ಕೆಳಗಿನ ಪದಗಳನ್ನು ಸರಿಯಾಗಿ ಜೋಡಿಸಿ ವಾಕ್ಯಗಳನ್ನು ರಚಿಸಿ.**

1. ತಾಯಿ ನೀಡುತ್ತೇನೆ ಕೇಳು ಅಗತ್ಯವಾಗಿ.

2. ಹೆಣ್ಣು ಮಗಳು ಚಾಣಾಕ್ಷ ಜೀಜಾಬಾಯಿ

3. ನಡೆಯಿತು ಅತಿ ಶಿವಾಜಿಯ ವೈಭವದಿಂದ ಪಟ್ಟಾಭಿಷೇಕವು.

ಊ. **ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1) ತಾಯಿಗೆ ಮಗನು ಏನೆಂದು ಕೇಳಿದನು ?

2) ಕೊಂಡಾಣ ದುರ್ಗ ಯಾರ ವಶದಲ್ಲಿತ್ತು ?

3) ಜೀಜಾಬಾಯಿಯ ತಂದೆಯ ಹೆಸರೇನು ?

4) ಶಿವಾಜಿಯ ಗುರು ಯಾರು ?

ಋ. **ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು ?**

1) 'ಮಾತಾಜಿಯವರಿಗೆ ನನ್ನ ಪ್ರಣಾಮಗಳು'

ಯಾರು ಹೇಳಿದರು _____

ಯಾರಿಗೆ ಹೇಳಿದರು _____

2) 'ನೀನು ಗೆದ್ದು ನನಗೆ ಬಹುಮಾನವಾಗಿ ಕೊಡಬೇಕು'

ಯಾರು ಹೇಳಿದರು _____

ಯಾರಿಗೆ ಹೇಳಿದರು _____

ಎ. **ಚಿಂತನಾಶೀಲ ಪ್ರಶ್ನೆ**

ನೀವು ಜೀಜಾಬಾಯಿಯ ಯಾವ ಗುಣವನ್ನು ಇಷ್ಟಪಡುವಿರಿ. ಏಕೆ? ವಿವರಿಸಿ.

5th-std_Term 3_Kannada_Reader_CBSE_KM.indd 130 7/9/2019 3:41:37 PM

ಘಟಕ ಎಂಟು

ದುರಾಸೆಯ ಫಲ

ಉಪಪಠ್ಯ

– ಸಂಗ್ರಹ

ರಂಗೇನಹಳ್ಳಿ ಎಂಬ ಊರಿನಲ್ಲಿ ದಾನಪ್ಪ ಎಂಬ ಹೆಸರಿನ ದೊಡ್ಡ ಸಾಹುಕಾರನಿದ್ದನು. ಆತನ ಬಳಿ ತುಂಬಾ ಹಣ, ಆಸ್ತಿಗಳೆಲ್ಲ ಇದ್ದರೂ ಅವನಿಗೆ ತೃಪ್ತಿಯೇ ಇರಲಿಲ್ಲ. ಅವನು ತನ್ನ ಹೆಸರಿಗೆ ತಕ್ಕಂತೆ ನಡೆದುಕೊಳ್ಳದೆ ಮಹಾ ಜಿಪುಣನಾಗಿದ್ದನು. ಅವರ ಮನೆಗೆ ಯಾರೇ ಬಂದು ಸಹಾಯ ಕೇಳಿದರೂ ಆತ ಏನಾದರೂ ಒಂದು ಸಬೂಬು ಹೇಳಿ ಬರಿಗೈ ತೋರಿಸಿ ಬಾಗಿಲು ಹಾಕಿಕೊಂಡು ಒಳಗಡೆ ನಡೆದುಬಿಡುತ್ತಿದ್ದ.

ದಾನಪ್ಪ ಒಂದು ದಿನ ದಾನಪ್ಪ ಪೇಟೆಯಿಂದ ಕೈ ಚೀಲದಲ್ಲಿ ಸಾಮಾನುಗಳನ್ನು ತೆಗೆದುಕೊಂಡು ಹಳ್ಳಿಗೆ ಬರುವಾಗ ಕತ್ತಲಾಗಿ ಬಿಟ್ಟಿತು. ಅವನ ಬಳಿ ಯಾವುದೇ ರೀತಿಯ ಬೆಳಕು ಇರಲಿಲ್ಲ. ಹೇಗೋ ಮನೆಗೆ ಬಂದವನೇ ಆತ ಸಾಮಾನುಗಳನ್ನೆಲ್ಲ ಒಳಗಡೆ ಇಟ್ಟು ಹಣದ ಚೀಲವನ್ನು ತೆಗೆದು ಕಪಾಟಿನಲ್ಲಿರಿಸಲು ಹುಡುಕಾಡಿದರೆ ಚೀಲವೇ ಇರಲಿಲ್ಲ. ದಾರಿಯಲ್ಲಿ ಬಿತ್ತೋ, ಸಂತೆಯಲ್ಲಿ ಬಿತ್ತೋ, ಬಸ್ಸಲ್ಲಿ ಬರುವಾಗ ಬಿತ್ತೋ ಅಥವಾ ಯಾರಾದರೂ ಕಳ್ಳರು ಲಪಟಾಯಿಸಿದರೋ ಅವನಿಗೆ ಗೊತ್ತೇ ಆಗಲಿಲ್ಲ. ಆತ ಆ ದಿನವಷ್ಟೇ ಬ್ಯಾಂಕಿನಿಂದ ಐವತ್ತು ಸಾವಿರದ ರೂಪಾಯಿ ನೋಟಿನ ಕಟ್ಟುಗಳನ್ನು ತಂದಿದ್ದ, ದಾನಪ್ಪನಿಗೆ ತನ್ನ ಜೀವವೇ ಹಾರಿ ಹೋದಷ್ಟು ಸಂಕಟವಾಯಿತು. ಆಮೇಲೆ ಮುಂಜಾನೆ ಎದ್ದವನೇ ಐವತ್ತು ಸಾವಿರ ಹಣವಿದ್ದ ಚೀಲ ಕಳೆದು ಹೋದುದರ ಬಗ್ಗೆ ಪೊಲೀಸರಿಗೆ ದೂರು ನೀಡಿ ಬಂದ. ಅಲ್ಲಿ ಸತ್ಯಪ್ಪ ಎಂಬ ಪೊಲೀಸ್ ಅಧಿಕಾರಿ ಇದ್ದರು.



ಅದೇ ಊರಿನಲ್ಲಿ ಸತೀಶನೆಂಬ ಹುಡುಗನಿದ್ದ. ಆತನ ಮನೆಯಲ್ಲಿ ತುಂಬಾ ಬಡತನ. ಆದರೆ ಕಲಿಕೆಯಲ್ಲಿ ಆತ ತುಂಬಾ ಜಾಣನಿದ್ದ. ಅವನ ಅಪ್ಪ, ಅಮ್ಮ ಅವನಿಗೆ ಒಳ್ಳೆಯ ಸಂಸ್ಕಾರವನ್ನು ಕೊಟ್ಟಿದ್ದರು. ಸತೀಶ ಶಾಲೆಗೆ ಹೋಗುತ್ತಿದ್ದಾಗ ಆ ದುಡ್ಡಿನ ಚೀಲ ಆಕಸ್ಮಿಕವಾಗಿ ಅವನಿಗೆ ಸಿಕ್ಕಿತು. ಆತ ಮನೆಗೆ ತಂದು ಅಪ್ಪ, ಅಮ್ಮನಿಗೆ

5th-std_Term 3_Kannada_Reader_CBSE_KM.indd 131 7/9/2019 3:41:38 PM

ಕೊಟ್ಟು, 'ಅಪ್ಪಾ! ಈ ಹಣದ ಚೀಲ ಯಾರದ್ದೋ ಗೊತ್ತಿಲ್ಲ. ದಾರಿಯಲ್ಲಿ ಸಿಕ್ಕಿತು. ಪಾಪ, ಅವರು ಎಷ್ಟು ಸಂಕಟ ಪಡುತ್ತಾರೋ ಏನೋ? ಇದನ್ನು ಆದಷ್ಟು ಬೇಗ ಪೊಲೀಸರಿಗೆ ತಲುಪಿಸಿ ಬಿಡೋಣ' ಎಂದು ಹೇಳಿದ. ಸತೀಶ ಅಪ್ಪನ ಜೊತೆ ಪೇಟೆಗೆ ಬಂದು ಹಣದ ಚೀಲವನ್ನು ಪೊಲೀಸರಿಗೆ ತಲುಪಿಸಿದರು.

ಪೊಲೀಸ್ ಅಧಿಕಾರಿಯು ಕೂಡಲೇ ದಾನಪ್ಪನನ್ನು ಕರೆಸಿ ಆ ಚೀಲ ತೋರಿಸಿ 'ನೀವು ಕಳೆದುಕೊಂಡ ಚೀಲ ಇದೋ ಎಂದು ಕೇಳಿದರು. 'ಹೌದು, ಹೌದು' ಎಂದು ಚೀಲ ತೆಗೆದುಕೊಂಡ ದಾನಪ್ಪ ಹಣವನ್ನು ಎಣಿಸಿ ನೋಡಿದ ಸರಿಯಾಗಿ ಐವತ್ತು ಸಾವಿರ ರೂಪಾಯಿ ಇದೆ. ಕೂಡಲೆ ದಾನಪ್ಪನಿಗೆ ಮನಸ್ಸಿನಲ್ಲೇ ದುರಾಸೆಯೊಂದು ಮೂಡಿತು. 'ಸ್ವಾಮೀ, ಚೀಲವೇನೋ ನನ್ನದೇ. ಆದರೆ ಈ ಚೀಲದಲ್ಲಿ ಎಪ್ಪತ್ತೈದು ಸಾವಿರವಿತ್ತು. ಇದರಲ್ಲಿ ಐವತ್ತೇ ಸಾವಿರವಿದೆ. ಉಳಿದ ಹಣವನ್ನು ಬಹುಶಃ ಚೀಲ ತಂದವರು ಲಪಟಾಯಿಸಿರಬಹುದು' ಎಂದನು.



ಆಗ ಪೊಲೀಸ್ ಅಧಿಕಾರಿಯು 'ಏನ್ರೀ, ದೂರಿನಲ್ಲಿ ಐವತ್ತು ಸಾವಿರ ಎಂದು ಬರೆಸಿ, ಈಗ ಎಪ್ಪತ್ತೈದು ಸಾವಿರ ಎಂದು ಸುಳ್ಳು ಹೇಳುತ್ತಿದ್ದೀರಲ್ಲಾ? ಪ್ರಾಮಾಣಿಕತೆಯಿಂದ ನಿಮ್ಮ ಹಣವನ್ನು ತಂದುಕೊಟ್ಟ ಆ ಬಾಲಕನ ಮೇಲೇ ಕಳ್ಳತನದ ಆರೋಪ ಹೊರಿಸುತ್ತಿದ್ದೀರಾ? ಹಾಗಾದರೆ ಈ ಹಣ ನಿಮ್ಮದಲ್ಲ, ಇದರಲ್ಲಿ ಐವತ್ತು ಸಾವಿರ ರೂಪಾಯಿ ಮಾತ್ರವಿದೆ. ನಿಮ್ಮ ಎಪ್ಪತ್ತೈದು ಸಾವಿರ ರೂಪಾಯಿ ಇರುವ ಹಣದ ಚೀಲ ಸಿಕ್ಕಿದಾಗ ನಿಮಗೆ ತಲುಪಿಸುತ್ತೇವೆ. ಅಲ್ಲಿಯವರೆಗೆ ಈ ಹಣದ ಚೀಲ ನಮ್ಮಲ್ಲೇ ಇರಲಿ, ಈಗ ನೀವು ಮನೆಗೆ ನಡೆಯಿರಿ ಎಂದರು. ತನ್ನ ದುರಾಸೆಯಿಂದ ಕೈಗೆ ಬಂದ ಹಣವನ್ನು ಕಳೆದುಕೊಂಡ ದಾನಪ್ಪ ಇಂಗು ತಿಂದ ಮಂಗನಂತೆ ಪಶ್ಚಾತ್ತಾಪದಿಂದ ಹಳ್ಳಿಯತ್ತ ಸಾಗಿದ!

ನೀತಿ : ಆಸೆ ಇರಬೇಕು ದುರಾಸೆ ಇರಬಾರದು

5th-std_Term 3_Kannada_Reader_CBSE_KM.indd 132 7/9/2019 3:41:39 PM

ಕವಿ ಕರ್ತೃ ವಿಚಾರ

ಈ ಕಥೆಯನ್ನು ಶ್ರೀಯುತ ಎಂ. ಗುರುಮಲ್ಲಪ್ಪನವರು ಸಂಗ್ರಹಿಸಿದ್ದಾರೆ. ಇವರು ಈರೋಡು ಜಿಲ್ಲೆಯ ತಾಳವಾಡಿ ತಾಲೋಕಿನ ಕಾಮೈಯ್ಯನಪುರ ಗ್ರಾಮದವರು. ಪ್ರಸ್ತುತ ಚಿಮಟಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದಾರೆ. ಇವರ ತಂದೆಯವರ ಹೆಸರು ಶ್ರೀಯುತ ಮಲ್ಲುಗಪ್ಪ, ತಾಯಿ ಶ್ರೀಮತಿ ಬಸಮ್ಮಣಿ. ಇವರು ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿಯಲ್ಲಿ ಕನ್ನಡ ಮತ್ತು ಅಳಗಪ್ಪ ವಿಶ್ವವಿದ್ಯಾನಿಲಯದಲ್ಲಿ ಆಂಗ್ಲ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಗಳಿಸಿದ್ದಾರೆ. ಇವರು ನಂಜನಗೂಡಿನ ಶ್ರೀಗುರುವಿದ್ಯಾವಿಕಾಸ ಕೇಂದ್ರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯ ಶಿಕ್ಷಕರಾಗಿ ಸೇವೆ ಸಲ್ಲಿಸಿ ತದನಂತರ ಮೈಸೂರಿನ ಮಹಾಜನ ಪಬ್ಲಿಕ್ ಶಾಲೆಯಲ್ಲಿ ಅಧ್ಯಾಪಕರಾಗಿ ಸೇವೆಸಲ್ಲಿಸಿ ನಂತರ ಮೈಸೂರಿನ ಜೆ. ಎಸ್. ಎಸ್. ಪದವಿ ಕಾಲೇಜಿನ ಬಿ.ಎ.ಎಡ್ ವಿಭಾಗದಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ತಾಳವಾಡಿಯ ಪಂಚಾಯತ್ ಯೂನಿಯನ್ ಮಾಧ್ಯಮಿಕ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸ್ತುತ್ತಿದ್ದಾರೆ. ವಚನ ಸಾಹಿತ್ಯದಲ್ಲಿ ಆಸಕ್ತಿ ಹೊಂದಿರುವ ಇವರು ವಚನ ಸಾಹಿತ್ಯವನ್ನು ಕುರಿತು ಹಲವಾರು ಕಡೆ ಉಪನ್ಯಾಸವನ್ನು ನೀಡಿದ್ದಾರೆ.

ಪ್ರಸ್ತುತ ಸಂದರ್ಭದಲ್ಲಿ ಮಾನವನು ಆಸೆಯ ಪಾಶಕ್ಕೆ ಒಳಗಾಗಿ ಮೌಲ್ಯಗಳನ್ನು ಕಳೆದುಕೊಳ್ಳುವುದರ ಜೊತೆಗೆ ಅದರ ಪರಿಣಾಮವನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ದುರಾಸೆಯ ಆಮಿಷಕ್ಕೆ ಒಳಗಾಗದೆ, ನೈತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂಬ ಆಶಯದಿಂದ ಪೂಜ್ಯ ಮಾತೆಮಹಾದೇವಿಯವರ 'ವಿಶ್ವ ಧರ್ಮ ಪ್ರವಚನ' ಎಂಬ ಗ್ರಂಥದಿಂದ ಆಯ್ದ 'ದುರಾಸೆಯ ಫಲ' ಎಂಬ ಕಥೆಯನ್ನು ವಿದ್ಯಾರ್ಥಿಗಳ ಮಾರ್ಗದರ್ಶನಕ್ಕೆ ಅನುಗುಣವಾಗಿ ಸ್ವಲ್ಪ ಮಾರ್ಪಾಡುಗಳನ್ನು ಮಾಡಿ ಸಂಗ್ರಹಿಸಿ ಸಂಪಾದಿಸಿ ನೀಡಿದ್ದಾರೆ.



ಕಲಿಕಾ ಫಲ

- ಪ್ರಾಮಾಣಿಕತೆಯನ್ನು ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಿ.
- ಕತೆಯನ್ನು ತಪ್ಪಿಲ್ಲದೆ ಸ್ಪಷ್ಟವಾಗಿ ಅರ್ಥ ಮಾಡಿಕೊಂಡು ಓದಿರಿ.
- ಪ್ರಾಮಾಣಿಕತೆಗೆ ಸಂಬಂಧಿಸಿದ ಇನ್ನಿತರ ಕಥೆಗಳನ್ನು ಸಂಗ್ರಹಿಸಿ ಓದಿರಿ.



ಮೌಲ್ಯಮಾಪನ

ಓದೋಣ! ಚಿಂತಿಸೋಣ! ಬರೆಯೋಣ!

ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1. ದಾನಪ್ಪನು ಯಾವ ಊರಿನಲ್ಲಿ ವಾಸವಾಗಿದ್ದನು ?
2. ದಾನಪ್ಪನು ಬ್ಯಾಂಕಿನಿಂದ ಎಷ್ಟು ಹಣವನ್ನು ತಂದನು ?
3. ಸತೀಶನು ಎಲ್ಲಿಗೆ ಹೊರಟಿದ್ದನು ?
4. ಸತೀಶನು ತನಗೆ ಸಿಕ್ಕಿದ ಹಣದ ಚೀಲವನ್ನು ತನ್ನ ತಂದೆಯೊಡನೆ ಬಂದು ಯಾರ ಬಳಿ ಒಪ್ಪಿಸಿದನು?
5. ದಾನಪ್ಪನು ಪೊಲೀಸ್ ಅಧಿಕಾರಿಯ ಬಳಿ ಏನೆಂದು ಹೇಳಿದನು ?
6. ಪೊಲೀಸ್ ಅಧಿಕಾರಿಯು ದಾನಪ್ಪನಿಗೆ ಏನೆಂದು ಛೀಮಾರಿ ಹಾಕಿದರು ?

ಆ. ಚಿಂತನಾಶೀಲ ಪ್ರಶ್ನೆ

ನಿಮ್ಮ ಬಳಿ ಜಠಿಲ ಸಮಸ್ಯೆಯೊಂದನ್ನು ಯಾರಾದರೂ ತಂದರೆ ಅದನ್ನು ನೀವು ಹೇಗೆ ಬಗೆಹರಿಸುವಿರಿ. ವಿವರಿಸಿ.

5th-std_Term 3_Kannada_Reader_CBSE_KM.indd 133 7/9/2019 3:41:39 PM

ಘಟಕ ಎಂಟು

ವ್ಯಾಕರಣ

ವಚನಗಳು

1. ಆನೆಯು ಎಲ್ಲರ ಮೆಚ್ಚುಗೆಯನ್ನು ಗಳಿಸಿತ್ತು.

2. ಕಾಡಿನಲ್ಲಿ ವಿವಿಧ ರೀತಿಯ ಪ್ರಾಣಿಗಳು ವಾಸವಾಗಿದ್ದವು.

ಈ ವಾಕ್ಯಗಳನ್ನು ಓದಿ. ಅಡಿ ಗೆರೆ ಎಳೆದಿರುವ ಪದಗಳನ್ನು ಗಮನಿಸಿರಿ. 'ಆನೆ' ಎಂಬುದು 'ಒಂದು ಆನೆ' ಎಂಬ ಅರ್ಥವನ್ನು ಸೂಚಿಸುತ್ತದೆ. 'ಪ್ರಾಣಿಗಳು' ಎಂಬ ಪದವು 'ಒಂದಕ್ಕಿಂತ ಹೆಚ್ಚು' ಎಂಬ ಅರ್ಥವನ್ನು ನೀಡುತ್ತದೆ. ಅದೇ ರೀತಿ,

1. ಜಿಂಕೆಯು ಈ ದಿನದ ಸಭೆಗೆ ಸಿದ್ಧವಾಗಿ ಬಂದಿತ್ತು.

2. ಬೆಕ್ಕುಗಳು ಸಭೆಯಲ್ಲಿ ಭಾಗವಹಿಸಿದ್ದವು.

ಈ ವಾಕ್ಯಗಳನ್ನು ಓದಿ. ಅಡಿ ಗೆರೆ ಎಳೆದಿರುವ ಪದಗಳನ್ನು ಗಮನಿಸಿರಿ. 'ಜಿಂಕೆ' ಎಂಬುದು 'ಒಂದು ಜಿಂಕೆ' ಎಂಬ ಅರ್ಥವನ್ನು ಸೂಚಿಸುತ್ತದೆ. ಇದು ಏಕವಚನ. 'ಬೆಕ್ಕುಗಳು' ಎಂಬ ಪದವು 'ಒಂದಕ್ಕಿಂತ ಹೆಚ್ಚು' ಎಂಬ ಅರ್ಥವನ್ನು ನೀಡುತ್ತದೆ. ಇದು ಬಹುವಚನ.

ಏಕವಚನ ಮತ್ತು ಬಹುವಚನಗಳಿಗೆ ಕೆಲವು ಉದಾಹರಣೆಗಳು :

ಏಕವಚನ	ಬಹುವಚನ
ಪತ್ರ	ಪತ್ರಗಳು
ತಮ್ಮ	ತಮ್ಮಂದಿರು
ರೈತ	ರೈತರು
ನಾಯಕ	ನಾಯಕರು
ಮರ	ಮರಗಳು

ಕಲಿಕಾ ಫಲ

- ವಿವಿಧ ಭಿತ್ತಿ ಪತ್ರಗಳನ್ನು ತಯಾರಿಸಿ ಶಾಲೆಯಲ್ಲಿ ಪ್ರದರ್ಶಿಸಿರಿ.
- ಮಿಂಚುಪಟ್ಟಿಯನ್ನು ತಯಾರಿಸಿ ಅದರಲ್ಲಿ ಏಕವಚನ, ಬಹುವಚನಗಳನ್ನು ಬರೆಯಿರಿ.

ಮೌಲ್ಯಮಾಪನ

ಓದೋಣ! ಚಿಂತಿಸೋಣ! ಬರೆಯೋಣ!

ಅ. ವಚನ ಬದಲಿಸಿ ಬರೆಯಿರಿ.

1. ಎತ್ತು : _____ 2. ಗಿಡಗಳು : _____

3. ಊರು : _____ 4. ನದಿಗಳು : _____

5th-std_Term 3_Kannada_Reader_CBSE_KM.indd 134 7/9/2019 3:41:39 PM

ಘಟಕ ಒಂಬತ್ತು

ಮಾನವೀಯತೆ ಮತ್ತು ವ್ಯಕ್ತಿತ್ವ

ಪದ್ಯ	:	ಮಂಕುತಿಮ್ಮನ ಕಗ್ಗ	–	ಡಿ.ವಿ.ಗುಂಡಪ್ಪ
ಗದ್ಯ	:	ಕವಿ ಸುಬ್ರಹ್ಮಣ್ಯ ಭಾರತಿ	–	ಸಂಗ್ರಹ
ಉಪಪಠ್ಯ	:	ಅಜ್ಜಿಯ ತೋಟದಲ್ಲಿ ಒಂದು ದಿನ	–	ಸಂಗ್ರಹ
ವ್ಯಾಕರಣ	:	ಪತ್ರ ಲೇಖನ		



ಕಲಿಕಾ ಉದ್ದೇಶಗಳು

- ಪದ್ಯವನ್ನು ತಪ್ಪಿಲ್ಲದೆ ಸರಿಯಾಗಿ ರಾಗಬದ್ಧವಾಗಿ ಹಾಡುವುದು.
- ವಿದ್ಯಾರ್ಥಿಗಳು ದೇಶಪ್ರೇಮದ ಮಹತ್ವವನ್ನು ಅರಿತುಕೊಳ್ಳುವುದು.
- ವಿದ್ಯಾರ್ಥಿಗಳು ಜೀವನದ ಆದರ್ಶಗಳನ್ನು ತಿಳಿದುಕೊಳ್ಳುವುದು.
- ಹೊರ ಸಂಚಾರದ ಅನುಭವವನ್ನು ತಿಳಿದುಕೊಳ್ಳುವುದು.
- ಭಾಷಾ ಕೌಶಲವನ್ನು ಅಭಿವೃದ್ಧಿ ಪಡಿಸಿಕೊಳ್ಳುವುದು.

5th-std_Term 3_Kannada_Reader_CBSE_KM.indd 135 7/9/2019 3:41:39 PM

ಘಟಕ ಒಂಬತ್ತು

ಮಂಕುತಿಮ್ಮನ ಕಗ್ಗ

ಪದ್ಯ

– ಡಿ.ವಿ.ಗುಂಡಪ್ಪ

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳಗೊಂದಾಗು – ಮಂಕುತಿಮ್ಮ

ಪದಗಳ ಅರ್ಥ

ಹುಲ್ಲು–ಗರಿಕೆ; ಕಷ್ಟ–ತೊಂದರೆ; ಮಲ್ಲಿಗೆ–ಒಂದು ಬಗೆಯ ಹೂ; ದೀನದುರ್ಬಲರು–ನಿಸ್ಸಹಾಯಕ ಸ್ಥಿತಿಯಲ್ಲಿರುವವರು; ಬೆಟ್ಟದಡಿ–ಬೆಟ್ಟದ ತಳಭಾಗ; ಎಲ್ಲರೊಳು–ಎಲ್ಲರಲ್ಲಿಯೂ; ಒಂದಾಗು–ಜೊತೆಯಾಗು, ಬೆರೆ.

ಪದ್ಯದ ಭಾವಾರ್ಥ

ಜೀವನದಲ್ಲಿ, ಬಂದುದನ್ನು ನಾವು ಬಂದ ಹಾಗೆ ಎದುರಿಸಬೇಕು. ಕಷ್ಟ–ಸುಖ ಬಂದಾಗ ಅದನ್ನು ಸಮಾನವಾಗಿ ಸ್ವೀಕರಿಸಬೇಕು. ಬೆಟ್ಟದ ಕೆಳಗಿನ ಹುಲ್ಲಿನಂತೆ ವಿನಯ, ವಿಧೇಯತೆಯನ್ನು ಅಳವಡಿಸಿಕೊಂಡು ಮನೆಗೆ ಸುವಾಸನೆ ಬೀರುವ ಮಲ್ಲಿಗೆಯಂತೆ ಮೃದು ನಡೆನುಡಿಯಿಂದ ಬಾಳಬೇಕು. ಜೀವನದಲ್ಲಿ ವಿಧಿ ನೀಡುವ ಕಷ್ಟಗಳೆಂಬ ಮಳೆಗೆ ಹೆದರದೆ, ವಿಚಲಿರಾಗದೆ ಕಲ್ಲಿನಂತಿರಬೇಕು, ನೊಂದವರಿಗೆ, ಬಡವರಿಗೆ ಬೆಲ್ಲ–ಸಕ್ಕರೆಯಂತೆ ಸಿಹಿಯಾಗಿ, ಪ್ರೀತಿಯನ್ನು ತೋರಬೇಕು. ಬಡವ–ಬಲ್ಲಿದರೆನ್ನದೆ ಎಲ್ಲರಲ್ಲಿ ಒಂದಾಗಿ ಬಾಳಬೇಕು ಎಂಬ ಜೀವನ ತತ್ವವನ್ನು ಡಿ.ವಿ.ಜಿಯವರು ಇಲ್ಲಿ ಸಾರಿದ್ದಾರೆ.

5th-std_Term 3_Kannada_Reader_CBSE_KM.indd 136 7/9/2019 3:41:39 PM

ಕವಿ ಕಾವ್ಯ ಪರಿಚಯ



ಶ್ರೀ. ಡಿ.ವಿ.ಗುಂಡಪ್ಪನರು ಕನ್ನಡ ಸಾರಸ್ವತ ಲೋಕದಲ್ಲಿ ಡಿ.ವಿ.ಜಿ. ಎಂದೇ ಖ್ಯಾತರು. ಇವರ ಪೂರ್ಣ ಹೆಸರು ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ. 1882ರ ಮಾರ್ಚ್ 17ರಂದು ಈಗಿನ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನಲ್ಲಿ ಇವರು ಜನಿಸಿದರು. ಇವರ ತಂದೆ : ವೆಂಕಟರಮಣಯ್ಯ. ತಾಯಿ : ಅಲಮೇಲಮ್ಮ. ಇವರ ಮಾವ ತಿಮ್ಮಪ್ಪ ಹಾಗೂ ಅಜ್ಜಿ ಸಾಕಮ್ಮ(ತಾಯಿಯ ತಾಯಿ) ಬಾಲ್ಯದಲ್ಲಿ ಇವರ ಮೇಲೆ ಗಾಢವಾದ ಪ್ರಭಾವ ಬೀರಿದರು. ಮೈಸೂರಿನ ಮಹಾರಾಜ ಪ್ರೌಢಶಾಲೆಯಲ್ಲಿ ಶಿಕ್ಷಣ ಪಡೆದರು. ಮೆಟ್ರಿಕ್ ಪರೀಕ್ಷೆಯಲ್ಲಿ ಅವರು ತೇರ್ಗಡೆಯಾಗಲಿಲ್ಲ. ಮುಂದೆ ಶಾಲೆಯಲ್ಲಿ ತಮ್ಮ ಶಿಕ್ಷಣವನ್ನು ಮುಂದುವರೆಸಲಾಗಲಿಲ್ಲ. ಆದರೆ ಪರಿಶ್ರಮದಿಂದ ಖಾಸಗಿಯಾಗಿ ವೇದ, ವೇದಾಂತ, ಸಂಸ್ಕೃತ, ರಾಮಾಯಣ, ಮಹಾಭಾರತ, ರಾಜ್ಯಶಾಸ್ತ್ರ, ತತ್ವಶಾಸ್ತ್ರಗಳೊಂದಿಗೆ ದೇಶದ ಇತರ ಭಾಷೆಗಳನ್ನೂ ಕಲಿತುಕೊಂಡರು. ಕನ್ನಡ, ಸಂಸ್ಕೃತ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಪರಿಣತಿ ಹೊಂದಿದ್ದರು. ಇದರಿಂದ ಅಪಾರವಾದ ಜ್ಞಾನವನ್ನು ಪಡೆದುಕೊಂಡರು. ಆದುದರಿಂದಲೇ ಡಿ.ವಿ.ಜಿಯವರು ಅಧ್ಯಯನ ಶೀಲ ಮನಸ್ಸು ನಮ್ಮದಾಗಬೇಕೆಂದು ಹೇಳುತ್ತಿದ್ದರು. ಹೆಚ್ಚು ಹೆಚ್ಚು ಪುಸ್ತಕಗಳನ್ನು ಓದುವಂತೆ ಸಲಹೆ ನೀಡುತ್ತಿದ್ದರು. ಕನ್ನಡದ ಪ್ರಸಿದ್ಧ ಸಾಹಿತಿಗಳಾದ ಇವರು 'ಗೋಖಲೆ ಸಾರ್ವಜನಿಕ ಸಂಸ್ಥೆ'ಯನ್ನು ಕಟ್ಟಿ, ಕನ್ನಡ ನಾಡು ನುಡಿಗಳ ಸೇವೆಯಲ್ಲಿ ತಮ್ಮ ಜೀವನವನ್ನು ಸವೆಸಿದರು. 'ಮಂಕುತಿಮ್ಮನ ಕಗ್ಗ' ಎಂಬುದು ಇವರ ಪ್ರಖ್ಯಾತ ಕೃತಿ. ಈ ಪದ್ಯಗಳು ಕೊನೆಯಲ್ಲಿ ಮಂಕುತಿಮ್ಮ ಎಂದು ಕೊನೆಯಾಗುತ್ತವೆ.

ಕಲಿಕಾ ಫಲ

- ಈ ಪದ್ಯವನ್ನು ಸರಿಯಾದ ಉಚ್ಚಾರಣೆಯೊಂದಿಗೆ ಓದಿ ತಿಳಿದುಕೊಳ್ಳುವುದು.
- ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ'ವನ್ನು ಸಂಗ್ರಹಿಸಿ ಓದಿ, ನಿಮಗಿಷ್ಟವಾದ ಪದ್ಯಗಳನ್ನು ರಾಗಬದ್ಧವಾಗಿ ಹಾಡಿರಿ.
- 'ಮಂಕುತಿಮ್ಮನ ಕಗ್ಗ'ದ ನೀತಿಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿರಿ.
- ಈ ಪದ್ಯವನ್ನು ಕಂಠಪಾಠ ಮಾಡಿ

ಮೌಲ್ಯಮಾಪನ

ಓದೋಣ! ಚಿಂತಿಸೋಣ! ಬರೆಯೋಣ!

ಅ.ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.

1. ಹುಲ್ಲಾಗು ಬೆಟ್ಟದಡಿ, ಮನೆಗೆ _____

ಅ) ಹಾರವಾಗು ಆ) ನೆರವಾಗು

ಇ) ಹಗ್ಗವಾಗು ಈ) ಮಲ್ಲಿಗೆಯಾಗು

2. ಕಷ್ಟ ಪದದ ವಿರುದ್ಧ ಪದ_____

ಅ) ಇಷ್ಟ ಆ) ನಷ್ಟ

ಇ) ಸುಖ ಈ) ದುಃಖ

5th-std_Term 3_Kannada_Reader_CBSE_KM.indd 137 7/9/2019 3:41:40 PM

3 'ಸಕ್ಕರೆಯಾಗು' ಈ ಪದವನ್ನು ಬಿಡಿಸಿ ಬರೆದಾಗ _____

ಅ) ಸಕ್ಕರೆ+ಆಗು ಆ) ಸಕ್ಕರೆ+ಯಾಗು

ಇ) ಸಕ್ಕರೆ+ಹಾಗು ಈ) ಸಕ್ಕರೆಯ+ಆಗು

4 'ಮಂಕುತಿಮ್ಮನ ಕಗ್ಗ'ವನ್ನು ಬರೆದವರು _____

ಅ) ಮಾಸ್ತಿ ಆ) ಕುವೆಂಪು

ಇ) ಡಿ.ವಿ.ಗುಂಡಪ್ಪ ಈ) ದ.ರಾ.ಬೇಂದ್ರೆ

5 'ಬೆಟ್ಟ' ಪದದ ಸಮಾನಾರ್ಥಕ ಪದ _____

ಅ) ಅಟ್ಟ ಆ) ಬೆಟ್ಟು

ಇ) ಸಮುದ್ರ ಈ) ಪರ್ವತ

ಆ. ಈ ಪದ್ಯದಲ್ಲಿ ಬಂದಿರುವ ಪ್ರಾಸ ಪದಗಳನ್ನು ಗುರುತಿಸಿ ಬರೆಯಿರಿ.

1. _____ 2. _____

3. _____ 4. _____

ಇ. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.

1. ದುರ್ಬಲ X
2. ಸಿಹಿ X
3. ಸತ್ಯ X
4. ನ್ಯಾಯ X

ಈ. ಈ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ಡಿ.ವಿ.ಜಿ.ಯವರು ಮನುಷ್ಯನನ್ನು ಏನಾಗು ಎಂದು ಹೇಳಿದ್ದಾರೆ ?
2. ಡಿ.ವಿ.ಜಿ.ಯವರು ಕಷ್ಟವನ್ನು ಹೇಗೆ ಎದುರಿಸಬೇಕು ಎನ್ನುತ್ತಾರೆ ?
3. ಡಿ.ವಿ.ಜಿ.ಯವರ ತಂದೆ–ತಾಯಿಯ ಹೆಸರೇನು ?
4. ಡಿ.ವಿ.ಜಿ.ಯವರು ಎಲ್ಲಿ, ಯಾವಾಗ ಜನಿಸಿದರು ?

ಉ. ಚಿಂತನಾಶೀಲ ಪ್ರಶ್ನೆ.

1) ಮಾನವೀಯತೆಯು ಡಿ.ವಿ.ಜಿ.ಯವರ ಕಗ್ಗದಲ್ಲಿ ಹೇಗೆ ನಿರೂಪಿತವಾಗಿದೆ ತಿಳಿಸಿ.

5th-std_Term 3_Kannada_Reader_CBSE_KM.indd 138 7/9/2019 3:41:40 PM

ಘಟಕ ಒಂಬತ್ತು

ಕವಿ ಸುಬ್ರಹ್ಮಣ್ಯ ಭಾರತಿ

ಗದ್ಯ

– ಸಂಗ್ರಹ

ಇಪ್ಪತ್ತನೆಯ ಶತಮಾನದ ಆರಂಭದ ಕಾಲದಲ್ಲಿ ತಮಿಳು ಕವಿತೆ ಹೆಚ್ಚು ಸತ್ವಶಾಲಿಯಾಗಿ ಮೈದೋರಿರುವುದು ಕವಿ ಸುಬ್ರಹ್ಮಣ್ಯ ಭಾರತಿಯವರ ಕವನಗಳಲ್ಲಿ. ಆಧುನಿಕ ತಮಿಳು ಕವಿತಾ ಪ್ರಪಂಚದಲ್ಲಿ ಇವರು ಕಳಶಪ್ರಾಯರಾದವರು.



ಸುಬ್ರಹ್ಮಣ್ಯ ಭಾರತಿಯವರು ತಮಿಳುನಾಡಿನ ತಿರುನಲ್ವೇಲಿ ಜಿಲ್ಲೆಯ ಎಟ್ಟೆಯಪುರಂನಲ್ಲಿ 1882ರ ಡಿಸೆಂಬರ್ 11ರಂದು ಜನಿಸಿದರು. ಇವರ ತಂದೆ ಚಿನ್ನಸ್ವಾಮಿ ಅಯ್ಯರ್. ತಾಯಿ ಲಕ್ಷ್ಮಿ ಅಮ್ಮೈಯಾರ್. ಇವರಿಗೆ ತಂದೆ–ತಾಯಿಗಳಿಟ್ಟ ಹೆಸರು 'ಸುಬ್ರಹ್ಮಣ್ಯ'. ಇವರು ಬಾಲ್ಯದಿಂದಲೂ ಕಾವ್ಯ ರಚಿಸುವ ಸಾಮರ್ಥ್ಯ ಹೊಂದಿದ್ದರು. ಇದಕ್ಕಾಗಿ ಇವರು ತಮ್ಮ 11ನೇ ವಯಸ್ಸಿನಲ್ಲಿ ಎಟ್ಟೆಯಪುರಂ ಸಂಸ್ಥಾನದ ಅರಸನಿಂದ ಪ್ರಶಂಸೆಯನ್ನೂ ಗಳಿಸಿದ್ದಾರೆ. ಆ ಸಂಸ್ಥಾನದ ಆಸ್ಥಾನ ವಿದ್ವಾಂಸರೂ ಇವರ ದೇಶಭಕ್ತಿ ಗೀತೆಗಳನ್ನು ಮೆಚ್ಚಿಕೊಂಡು ಇವರಿಗೆ 'ಭಾರತಿ' ಎಂಬ ಬಿರುದು ನೀಡಿದರು. ಅಂದಿನಿಂದ ಇವರಿಗೆ 'ಭಾರತಿ' ಎಂಬ ಹೆಸರೇ ಜನಜನಿತವಾಯಿತು. ಇವರು ಕಾಶಿಯಲ್ಲಿ ಸಂಸ್ಕೃತ ಮತ್ತು ಹಿಂದಿ ಭಾಷೆಗಳಲ್ಲೂ ಶಿಕ್ಷಣವನ್ನು ಪಡೆದಿದ್ದಾರೆ.

ಭಾರತಿಯವರು ಬಾಲ್ಯದಿಂದಲೂ ಸ್ವತಂತ್ರವಾದ ಮನೋಭಾವವುಳ್ಳ ಕವಿಗಳು. ಇವರು ಒಮ್ಮೆ ಮನುಷ್ಯರನ್ನು ಹಾಡಿ ಹೊಗಳುವುದನ್ನು ಹಳಿದು ಒಂದು ಕವನವನ್ನು ರಚಿಸಿದರು. ಅದನ್ನು ನೋಡಿದ ಜಮೀನ್ದಾರರು ಅದನ್ನು ವಿರೋಧಿಸಿದರು. ಕೂಡಲೇ ಭಾರತಿಯವರು ಆ ಜಮೀನ್ದಾರರ ಸಂಬಂಧವನ್ನು ಕಡಿದುಕೊಂಡು ಅಲ್ಲಿಂದ ಹೊರಬಂದು ಬಿಟ್ಟರು. ಅವರ ಮನಸ್ಸಿನಲ್ಲಿ ಆಳವಾಗಿ ಹುದುಗಿದ್ದ ಸ್ವಾತಂತ್ರ್ಯಾಪೇಕ್ಷೆಯೂ, ಜನ ಸಾಮಾನ್ಯರ ಬಗೆಗಿದ್ದ ಕಾಳಜಿಯೂ ಅವರನ್ನು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವಂತೆ ಮಾಡಿತು.

ಭಾರತಿಯವರು ಬದುಕಿದ್ದುದು ಅತ್ಯಲ್ಪ ಕಾಲವಾದರೂ, ತಮ್ಮ ಸಾಹಿತ್ಯದ ಮೂಲಕ ತಮಿಳು ಜನರಲ್ಲಿ ಸ್ವಾತಂತ್ರ್ಯದ ಕಿಡಿಯನ್ನು ಬೆಳಗಿಸಿದರು. ಅವರ ಕವನಗಳಲ್ಲಿ ತಮಿಳು ತಾಯಿಯ ಸ್ತುತಿ, ಭಾರತ ಮಾತೆಯ ಆರಾಧನೆಗಳು ತುಂಬಿ ತುಳುಕುತ್ತವೆ. ಜನರಲ್ಲಿ ಸ್ವಾತಂತ್ರ್ಯದ ಭಾವನೆಯನ್ನು ತಮ್ಮ ಕವನಗಳ ಮೂಲಕ ಜಾಗೃತಿಗೊಳಿಸಿದರು. ಆದ್ದರಿಂದ ಇವರನ್ನು 'ದೇಶೀಯ ಕವಿ' ಎಂದು ಕರೆಯಲಾಗುವುದು. ಇವರ ಕವನಗಳಲ್ಲಿ ದೇಶೀಯ ಅಭಿಮಾನ ಬೆಂಕಿ ಹೊತ್ತಿಕೊಂಡಂತೆ ನಾಡಿನಲ್ಲೆಲ್ಲ ವ್ಯಾಪಿಸಿತು. ಬಿಡುಗಡೆಯಾಗಿ ಹೋರಾಡು ಎಂಬ ಜನರನ್ನು ಬಡಿದೆಬ್ಬಿಸಿದರು.

ಮಧುರೈ ಸೇತುಪತಿ ಪ್ರೌಢಶಾಲೆಯಲ್ಲಿ 1904ರಲ್ಲಿ ತಮಿಳು ಉಪಾಧ್ಯಾಯರಾಗಿ ಸೇರಿಕೊಂಡು ಕೆಲವು ವರ್ಷಗಳು ಕೆಲಸ ಮಾಡುತ್ತಿದ್ದಾರೆ. ಅದೇ ಕಾಲದಲ್ಲಿಯೇ ಇವರು 'ಸ್ವದೇಶೀ ಮಿತ್ರನ್' ಎಂಬ ತಮಿಳು ಪತ್ರಿಕೆಯ ಉಪಸಂಪಾದಕರೂ ಆಗಿದ್ದರು. ಆ ಸಂದರ್ಭದಲ್ಲಿ ಅನ್ಯರ ಆಳ್ವಿಕೆಯನ್ನು ವಿರೋಧಿಸಿ ಅವರನ್ನು ಹೊಡೆದಟ್ಟುವಂತೆ ಜನತೆಯನ್ನು ಉತ್ತೇಜಿಸಿ ಹಲವಾರು ಲೇಖನಗಳನ್ನು ಬರೆದರು. ಓದುಗರ ಮನಸ್ಸಿನಲ್ಲಿ ಓದಿದ ಕೂಡಲೇ ಹೋರಾಟದ ಮನೋಭಾವನೆಯನ್ನು ತೀವ್ರಗೊಳಿಸುವಂತಹ ಬರವಣಿಗೆಗಳು ಅವು. ಬ್ರಿಟೀಷ್ ಸರ್ಕಾರ ಇದರಿಂದ ಕೆರಳಿ 'ಸ್ವದೇಶೀ ಮಿತ್ರನ್' ಪತ್ರಿಕೆಗೆ ಹಲವು ತಡೆಗಳನ್ನು ತರುವ ಪ್ರಯತ್ನ ಮಾಡಿತು. ಕೂಡಲೇ ಭಾರತಿಯವರು ಆ ಪತ್ರಿಕೆಯನ್ನು ಬಿಟ್ಟು 1908ರಲ್ಲಿ ತಾವೇ 'ಇಂಡಿಯಾ' ಎಂಬ ಪತ್ರಿಕೆಯನ್ನು ಆರಂಭಿಸಿದರು. ರೊಚ್ಚಿಗೆದ್ದ ಬ್ರಿಟೀಷ್ ಸರ್ಕಾರ ಅವರನ್ನು ಬಂಧಿಸಿ ಸೆರೆಗೆ ತಳ್ಳಲು ಪ್ರಯತ್ನಿಸಿತು. ಅವರಿಂದ ತಪ್ಪಿಸಿಕೊಂಡು ಆಗ ಫ್ರೆಂಚರ ಅಧೀನದಲ್ಲಿದ್ದ ಪಾಂಡಿಚೇರಿಗೆ ಹೋಗಿ ತಲೆ ಮರೆಸಿಕೊಂಡು ತಮ್ಮ ಹೋರಾಟವನ್ನು ಮುಂದುವರೆಸಿದರು. 1908ರಲ್ಲೇ 'ಸ್ವದೇಶ ಗೀತೆಗಳು' ಎಂಬ ಪ್ರಥಮ ಕವನ ಸಂಕಲನವನ್ನು ಪ್ರಕಟಿಸಿದರು.

5th-std_Term 3_Kannada_Reader_CBSE_KM.indd 139 7/9/2019 3:41:40 PM

'ಪಾಂಚಾಲೀ ಶಪಥಂ', 'ಕೋಗಿಲೆಯ ಹಾಡು', 'ಕೃಷ್ಣನ ಹಾಡು', 'ಕೃಷ್ಣನ ಪ್ರೇಮ', 'ಕುಂಟ ಸಿಂಧು', 'ಬಿಡುಗಡೆ' ಮೊದಲಾದವು. ಭಾರತಿಯವರ ಪ್ರಮುಖ ಕವನಗಳಾಗಿವೆ. ಕವನಗಳನ್ನಷ್ಟೇ ಅಲ್ಲದೆ ಇವರು ಹಲವಾರು ಕತೆಗಳನ್ನು ಬರೆದಿದ್ದಾರೆ. 'ಆರರಲ್ಲಿ ಒಂದು ಭಾಗ' ಎನ್ನುವ ಕತೆ 1913ರಲ್ಲಿ 'ಲೋಕೋಪಕಾರಿ' ಎನ್ನುವ ಪತ್ರಿಕೆಯಲ್ಲಿ ಮೊದಲು ಪ್ರಕಟವಾಯಿತು. ನೀತಿ ಕತೆ ಸ್ವರೂಪದ ಈ ಕತೆಯು ಬ್ರಿಟೀಷರ ವಿರುದ್ಧದ ಹೋರಾಟದ ಅಂಶವನ್ನು ಒಳಗೊಂಡಿರುವುದರಿಂದ ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿದೆ. 'ನವತಂತ್ರ ಕತೆಗಳು', 'ಕಾಗೆ ಸಾಹಿತ್ಯ ಕಲಿತ ಕತೆ', 'ಚಂದ್ರಿಕೆಯ ಕತೆ'..... ಮುಂತಾದವು ಇವರ ಕತೆಗಳಾಗಿವೆ.

ಭಾರತಿಯವರು ತಮಿಳು ಭಾಷೆಗೆ ಓಜಸ್ಸನ್ನೂ, ತೇಜಸ್ಸನ್ನೂ ತುಂಬಾ ಶಕ್ತಿಯುತವಾಗಿ ತುಂಬಿದ್ದಾರೆ. ರವೀಂದ್ರರ, ಮಹಾತ್ಮಾಗಾಂಧೀಜಿಯವರ ವಿಚಾರಧಾರೆಗಳು ಇವರಲ್ಲಿ ಮೇಳವಿಸಿವೆ. ಮಕ್ಕಳಿಗಾಗಿಯೂ ಇವರು ಅನೇಕ ಗೀತೆಗಳನ್ನು ರಚಿಸಿದ್ದಾರೆ.

ತಮಿಳಿನ ಮಹಾಕವಿ ಎನ್ನಿಸಿಕೊಂಡ ಭಾರತಿಯವರು 1921ರ ಸೆಪ್ಟೆಂಬರ್ 12ರಂದು ತಮ್ಮ 39ನೇ ವಯಸ್ಸಿನಲ್ಲಿ ಮದರಾಸಿನಲ್ಲಿ ಅಕಾಲ ಮರಣಕ್ಕೆ ತುತ್ತಾದರು.

ಕಲಿಕಾ ಫಲ

- ಈ ಪಾಠವನ್ನು ಸ್ಪಷ್ಟವಾಗಿ ವ್ಯಾಕರಣ ಬದ್ಧವಾಗಿ, ಲೇಖನ ಚಿಹ್ನೆಗಳೊಂದಿಗೆ ಗಮನಿಸಿ ಓದಿರಿ.
- ತಮಿಳು ಭಾಷೆಯ ಅಭಿವೃದ್ಧಿಯಲ್ಲಿ ಮಹಾಕವಿ ಸುಬ್ರಹ್ಮಣ್ಯ ಭಾರತಿಯವರ ಪಾತ್ರವೇನು ?

ಮೌಲ್ಯಮಾಪನ

ಓದೋಣ! ಚಿಂತಿಸೋಣ! ಬರೆಯೋಣ!

ಅ. ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.

1. ಸುಬ್ರಹ್ಮಣ್ಯ ಭಾರತಿಯವರು ತಮಿಳುನಾಡಿನ _____ ಜಿಲ್ಲೆಯಲ್ಲಿ ಜನಿಸಿದರು.

ಅ) ಚೆನ್ನೈ ಆ) ಪಾಂಡಿಚೇರಿ

ಇ) ಮಧುರೈ ಈ) ಈರೋಡು

2. 'ಸುಬ್ರಹ್ಮಣ್ಯ ಭಾರತಿಯವರು' _____ ಎಂಬ ತಮಿಳು ಪತ್ರಿಕೆಯ ಉಪಸಂಪಾದಕರಾಗಿದ್ದರು.

ಅ) ಜ್ಞಾನ ಮಿತ್ರನ್ ಆ) ತಮಿಳ್ ಮಿತ್ರನ್

ಇ) ವಿದೇಶೀ ಮಿತ್ರನ್ ಈ) ಸ್ವದೇಶೀ ಮಿತ್ರನ್

3. 'ಪಾಂಚಾಲೀ ಶಪಥಂ' ಎಂಬುದು _____ರವರ ಕೃತಿ.

ಅ) ಭಾರತೀದಾಸನ್ ಆ) ಕಂಬರ್

ಇ) ಸುಬ್ರಹ್ಮಣ್ಯ ಭಾರತಿ ಈ) ಎಂ.ಕರುಣಾನಿಧಿ

4. ಸುಬ್ರಹ್ಮಣ್ಯ ಭಾರತಿಯವರು ತಮ್ಮ ಬಗ್ಗೆ 11ನೇ ವಯಸ್ಸಿನಲ್ಲಿ _____ ಸಂಸ್ಥಾನದ ಅರಸನಿಂದ ಪ್ರಶಂಸೆಯನ್ನು ಗಳಿಸಿದ್ದಾರೆ.

ಅ) ಎಟ್ಟೆಯ ಪುರಂ ಆ) ಮದರಾಸು

ಇ) ಮೈಸೂರು ಈ) ಮಧುರೈ

5th-std_Term 3_Kannada_Reader_CBSE_KM.indd 140 7/9/2019 3:41:40 PM

5 ಸುಬ್ರಹ್ಮಣ್ಯ ಭಾರತಿಯವರು _____ ಭಾಷೆಗೆ ಓಜಸ್ಸನ್ನೂ, ತೇಜಸ್ಸನ್ನೂ ಶಕ್ತಿಯುತವಾಗಿ ತುಂಬಿದ್ದಾರೆ.

ಅ) ತಮಿಳು ಆ) ಕನ್ನಡ

ಇ) ಸಂಸ್ಕೃತ ಈ) ಮಲಯಾಳಂ

ಆ. ಹೊಂದಿಸಿ ಬರೆಯಿರಿ.

1. ಭಾರತಿ	–	ಪತ್ರಿಕೆ
2. ಎಟ್ಟೆಯಪುರಂ	–	ಕವನ ಸಂಕಲನ
3. ಸ್ವದೇಶೀ ಮಿತ್ರನ್	–	ಕಥೆ
4. ಸ್ವದೇಶ ಗೀತೆಗಳು	–	ಸಂಸ್ಥಾನ
5. ನವತಂತ್ರ ಕಥೆಗಳು	–	ಬಿರುದು

ಇ. ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1) ಸುಬ್ರಹ್ಮಣ್ಯ ಭಾರತಿಯವರು ಎಲ್ಲಿ, ಯಾವಾಗ ಜನಿಸಿದರು ?

2)ಸುಬ್ರಹ್ಮಣ್ಯ ಭಾರತಿಯವರ ತಂದೆ–ತಾಯಿಗಳು ಯಾರು ?

3) ಸುಬ್ರಹ್ಮಣ್ಯ ಭಾರತಿಯವರ ಹೆಸರಿನೊಂದಿಗೆ 'ಭಾರತಿ' ಎಂಬುದು ಹೇಗೆ ಸೇರ್ಪಡೆಯಾಯಿತು ?

4) ಸುಬ್ರಹ್ಮಣ್ಯ ಭಾರತಿಯವರನ್ನು ದೇಶೀಯ ಕವಿ ಎಂದು ಏಕೆ ಕರೆಯುತ್ತಾರೆ?

5) ಸುಬ್ರಹ್ಮಣ್ಯ ಭಾರತಿಯವರು ಆರಂಭಿಸಿದ ಪತ್ರಿಕೆ ಯಾವುದು ?

ಈ. ಚಿಂತನಾಶೀಲ ಪ್ರಶ್ನೆ.

ಸುಬ್ರಹ್ಮಣ್ಯ ಭಾರತಿಯವರಂತೆ ತಮಿಳು ಭಾಷೆಗೆ ಕೊಡುಗೆ ನೀಡಿರುವ ಇನ್ನಿತರ ಕವಿಗಳ ಬಗ್ಗೆ ತಿಳಿದುಕೊಳ್ಳಿ.

5th-std_Term 3_Kannada_Reader_CBSE_KM.indd 141 7/9/2019 3:41:40 PM

ಘಟಕ ಒಂಬತ್ತು

ಅಜ್ಜಿಯ ತೋಟದಲ್ಲಿ ಒಂದು ದಿನ

ಉಪಪಠ್ಯ

– ಸಂಗ್ರಹ

ಮಲೆನಾಡ ತಪ್ಪಲಿನಲ್ಲಿರುವ ಒಂದು ಊರು ಕಣಬೂರು. ಅಲ್ಲೊಂದು ಹಿರಿಯ ಪ್ರಾಥಮಿಕ ಶಾಲೆ. ಆ ಶಾಲೆಯ ಮಕ್ಕಳು ಕಿಶೋರನ ಅಜ್ಜಿಯ ತೋಟಕ್ಕೆ ಗುರುಗಳೊಂದಿಗೆ ಹೊರ ಸಂಚಾರ ಹೊರಟರು. ಕಿಶೋರನ ಅಜ್ಜಿಯ ಮನೆ ಬೆಟ್ಟದ ತಪ್ಪಲಿನಲ್ಲಿದೆ. ಮನೆಯ ಹಿಂದಿನ ಗುಡಿಸಲಿನಲ್ಲಿ ಗೇರು ಮರಗಳಿವೆ. ಅಡಿಕೆ ತೋಟ ದಾಟಿ ಮುಂದೆ ಹೋದರೆ ಭತ್ತದ ಗದ್ದೆಗಳಿವೆ. ಮಕ್ಕಳೆಲ್ಲರೂ ಗದ್ದೆಯ ಹತ್ತಿರ ಬಂದು ತಲುಪಿದರು.



'ಇದು ಯಾವ ಬೆಳೆ?' ಎಂದು ಪೀಟರ್ ಪ್ರಶ್ನಿಸಿದರು. 'ಇದು ಭತ್ತದ ಬೆಳೆ' ಎಂದರು ಗುರುಗಳು. 'ಓ! ಇದೇನಾ, ಭತ್ತದ ಪೈರು?' ತೆನೆಗಳನ್ನು ಕೈಯಿಂದ ಮುಟ್ಟಿ ಪ್ರಶಂಸಿಸಿದ ಪೀಟರ್ ಒಂದು ಭತ್ತದ ತೆನೆಯನ್ನು ಕಿತ್ತುಕೊಟ್ಟು, 'ತಗೋ, ಇದನ್ನು ಬಿಡಿಸಿ ನೋಡು' ಎಂದರು ಗುರುಗಳು. ಶೀಲಾ ತಾನು ಒಂದು ತೆನೆ ಕೀಳಲು ಬಾಗಿದಾಗ ಒಂದು ಕಪ್ಪೆ ಚಂಗನೆ ಕುಪ್ಪಳಿಸಿತು. ಸರಸರ ಎಂದು ಒಂದು ಹಾವು ಹತ್ತಿರದಲ್ಲೇ ಸರಿದು ಹೋಯಿತು. ಮಕ್ಕಳು ಭಯದಿಂದ ಹಿಂದೆ ನೆಗೆದರು. 'ಹೆದರಬೇಡಿ, ಅವು ನಮಗೆ ಏನನ್ನೂ ಮಾಡುವುದಿಲ್ಲ. ಹಾವು, ಕಪ್ಪೆ, ಕೀಟ, ಹಕ್ಕಿ, ಮೊಲ ಹಂದಿ, ಮುಂಗುಸಿ ಮುಂತಾದ ಪ್ರಾಣಿಗಳು ಸಾಮಾನ್ಯವಾಗಿ ತೋಟದ ಸುತ್ತಮುತ್ತ ಇರುತ್ತವೆ' ಎಂದರು ಗುರುಗಳು. ಮಕ್ಕಳು ಮಾತನಾಡುತ್ತಾ ಗದ್ದೆಯ ಬದುವಿನಲ್ಲಿ ನಡೆದು ತೋಡು ದಾಟಿ ಅಡಕೆ ತೋಟಕ್ಕೆ ಬಂದರು. ತೋಟದ ನಡುವೆ ಬಿದ್ದಿದ್ದ ಒಂದು ಹಣ್ಣನ್ನು ಹೆಕ್ಕಿದ ಮೇಲೆ 'ಓ! ಇಲ್ಲಿ ನೋಡಿ ಸೌತೆಕಾಯಿ!' ಎಂದಳು. 'ಅಲ್ಲಲ್ಲ, ಅದು ಹೀರೆ ಕಾಯಿ' ಎಂದನು ರಫೀಕ್. 'ಎರಡೂ ಅಲ್ಲ, ಅದು ಕೋಕೋ ಹಣ್ಣು. ಇದನ್ನು ಚಾಕಲೇಟು ತಯಾರಿಸಲು ಬಳಸುತ್ತಾರೆ. ಯಾವುದೋ ಪ್ರಾಣಿ ಅದನ್ನು ಕಿತ್ತು ಹಾಕಿದೆ. ಬಹುಶಃ ಅಳಿಲೇ ಇರಬೇಕು' ಎಂದರು ಗುರುಗಳು.

5th-std_Term 3_Kannada_Reader_CBSE_KM.indd 142 7/9/2019 3:41:40 PM

ಅಷ್ಟರಲ್ಲಿ ಅಜ್ಜಿ ತೋಟದಲ್ಲಿ ಏನೋ ಮಾಡುತ್ತಿರುವುದನ್ನು ಕಂಡ ಮಕ್ಕಳು ಅಲ್ಲಿಗೆ ಓಡಿದರು. 'ನಿಧಾನವಾಗಿ ಬನ್ನಿ, ಮುಳ್ಳುಗಳು ಇರಬಹುದು' ಎಂದು ಎಚ್ಚರಿಸಿದರು ಅಜ್ಜಿ. 'ಇದೇನು? ಇಷ್ಟೊಂದು ಗುಂಡಿ ತೋಡಿದ್ದೀರಿ?' ಎಂದು ಮಹೇಶ ಪ್ರಶ್ನಿಸಿದನು. ನೀವೆಲ್ಲಾ ನಿಮ್ಮ ಕೈಯಾರೆ ಒಂದೊಂದು ಹಣ್ಣಿನ ಗಿಡ ಇದರಲ್ಲಿ ನೆಡಬೇಕು' ಎಂದು ಅಜ್ಜಿ ಉತ್ತರಿಸಿದರು. 'ಬೇಡಪ್ಪಾ. ನಮ್ಮ ಕೈ ಕೊಳೆಯಾಗುತ್ತದೆ. ನನ್ನ ಅಮ್ಮ ಬೈಯುತ್ತಾಳೆ' ಎಂದಳು ಅಶ್ವಿನಿ. 'ಚೊಕ್ಕದ ಚಿಕ್ಕಮ್ಮ, ಬಾರೆ' ಎಂದು ತಮಾಷೆ ಮಾಡಿದ ಮಹಮ್ಮದ್, 'ಕೈ ಕೆಸರಾದರೆ ಬಾಯಿ ಮೊಸರು' ಎಂದು ಹೇಳುತ್ತಾ ಒಂದು ಗಿಡ ತೆಗೆದುಕೊಂಡು ನೆಡಲು ಆರಂಭಿಸಿದರು. ಅಂತೆಯೇ ಎಲ್ಲಾ ಮಕ್ಕಳೂ ಒಂದೊಂದು ಗಿಡ ನೆಟ್ಟರು. ಕೈ ತೊಳೆದು ಅಜ್ಜಿ ಕೊಟ್ಟ ಹಣ್ಣನ್ನು ತಿಂದು ತೋಟದಲ್ಲೆಲ್ಲಾ ಸುತ್ತಾಡಿದರು. ತೋಟದಲ್ಲಿದ್ದ ಬಾಳೆ, ಅಡಿಕೆ, ತೆಂಗು, ಕಾಳುಮೆಣಸು, ಕಾಫಿ, ಏಲಕ್ಕಿ ಮೊದಲಾದ ಗಿಡಗಳನ್ನು ನೋಡಿದರು.



'ಅಜ್ಜೀ! ಹಾವಿನ ಮರಿ!' ಎಂದು ಕಿರುಚಿದಳು ಶೀಲ. 'ಅದು ಹಾವಲ್ಲ, ಎರೆಹುಳ. ಇದನ್ನು ರೈತನ ಮಿತ್ರ' ಎಂದು ಕರೆಯುತ್ತಾರೆ. ಇದರ ಸಹಾಯದಿಂದ ಎರೆಗೊಬ್ಬರ ತಯಾರಿಸುತ್ತಾರೆ' ಎಂದರು ಗುರುಗಳು. 'ನಾನು ರಾಸಾಯನಿಕ ಗೊಬ್ಬರ ಬಳಸುವುದಿಲ್ಲ. ಎರೆಗೊಬ್ಬರ, ಹಟ್ಟಿ ಗೊಬ್ಬರ, ಕೋಳಿ ಗೊಬ್ಬರ ಮೊದಲಾಸ ಸಾವಯವ ಗೊಬ್ಬರ ಬಳಸಿ ಉತ್ತಮ ಬೆಳೆಗಳನ್ನೇ ಬೆಳೆಯುತ್ತೇನೆ' ಎಂದರು ಅಜ್ಜಿ. ಎಲ್ಲವನ್ನೂ ಗಮನಿಸುತ್ತಿದ್ದ ಶರಣಪ್ಪ, 'ಸರ್, ನಮ್ಮ ಊರು ಬಳ್ಳಾರಿ. ಅಲ್ಲಿ ಜೋಳ, ಮೆಣಸು, ಶೇಂಗಾ ಮತ್ತು ತೊಗರಿ ಬೆಳೆಯುತ್ತಾರೆ' ಎಂದನು. 'ಹೌದು, ಮಣ್ಣಿನ ಗುಣ ಹಾಗೂ ಹವಾಮಾನಕ್ಕೆ ಅನುಗುಣವಾಗಿ ಬೇರೆ ಬೇರೆ ಬೆಳೆ ಬೆಳೆಯುತ್ತಾರೆ' ಎಂದರು ಶಿಕ್ಷಕರು.

'ನಮ್ಮ ಊರು ಪಶ್ಚಿಮ ಘಟ್ಟದ ತಪ್ಪಲಿನಲ್ಲಿದೆ. ಬೆಟ್ಟ ಗುಡ್ಡ ಮರಗಳಿಂದ ಕೂಡಿರುವ ಪ್ರದೇಶವಾದುದರಿಂದ ಹೇರಳವಾಗಿ ಮಳೆ ಬೀಳುತ್ತದೆ. ಆದುದರಿಂದ ಹೆಚ್ಚು ನೀರು ಬೇಕಾದ ಬೆಳೆಗಳನ್ನು ನಾವು ಬೆಳೆಯುತ್ತೇವೆ. ನಿಮ್ಮ ಊರಿನ ಕಡೆ ಮಳೆ ಕಡಿಮೆ ಬೀಳುವುದರಿಂದ ಆ ಬೆಳೆಗಳನ್ನು ಬೆಳೆಯುತ್ತಾರೆ' ಎಂದರು ಅಜ್ಜಿ.

ಅಷ್ಟು ಹೊತ್ತಿಗೆ ಅಜ್ಜಿಯ ಮನೆಯಲ್ಲಿ ಮಕ್ಕಳಿಗಾಗಿ ರುಚಿಯಾದ ಅಡುಗೆ ಸಿದ್ಧವಾಗಿತ್ತು. 'ಕೈ ಕಾಲು ತೊಳೆದುಕೊಂಡು ಊಟಕ್ಕೆ ಬನ್ನಿ.' ಎಂದು ಅಜ್ಜಿ ಕರೆದಳು. ಮಕ್ಕಳು ಅಜ್ಜಿಯ ಜೊತೆ ಊಟಕ್ಕೆ ಕುಳಿತರು.

ಅಜ್ಜಿಯ ಮನೆಯ ಅಂಗಳದಲ್ಲಿದ್ದ ಯಂತ್ರವನ್ನು ಕಂಡ ಶೀಲ, 'ಇದೇನು ಗುರುಗಳೇ?' ಎಂದು ಕೇಳಿದಳು. 'ಇದು ಗದ್ದೆ ಉಳುವ ಯಂತ್ರ. ಹಿಂದೆ ನೇಗಿಲು, ನೊಗ, ಎತ್ತು, ಕೋಣ ಬಳಸಿ ಹೊಲ ಉಳುತ್ತಿದ್ದರು. ಈಗ ಹೊಸ ಸಾಧನಗಳು ಬಂದಿವೆ' ಎಂದರು ಗುರುಗಳು.

ಎಲ್ಲರೂ ರುಚಿರುಚಿಯಾದ ಊಟ ಮುಗಿಸಿದರು. ಕೈ ತೊಳೆಯಲು ಹೋದ ಅಶ್ವಿನಿ 'ಇದೋ ನೋಡಿ. ಇಲ್ಲೂ

5th-std_Term 3_Kannada_Reader_CBSE_KM.indd 143 7/9/2019 3:41:41 PM

ಸಣ್ಣ ಸಣ್ಣ ಗುಂಡಿಗಳು ಇವೆ' ಎಂದಳು. 'ಇವು ಇಂಗು ಗುಂಡಿಗಳು. ಈ ಗುಂಡಿಗಳ ಮೂಲಕ ಮಳೆ ನೀರನ್ನು ಇಂಗಿಸುತ್ತೇವೆ. ಇದು ಅಂತರ್ಜಲ ಹೆಚ್ಚಿಸುತ್ತದೆ. ಇದರಿಂದ ನಮ್ಮ ಬಾವಿಯಲ್ಲಿ ನೀರು ಇಂದೂ ಕಡಿಮೆಯಾಗಿಲ್ಲ' ಎಂದರು ಅಜ್ಜಿ.

'ಮಕ್ಕಳೇ! ನಾವು ಮಳೆ ಕೊಯ್ಲು ಮತ್ತು ಅಂತರ್ಜಲದ ಬಗ್ಗೆ ತರಗತಿಯಲ್ಲಿ ಚರ್ಚಿಸೋಣ. ಈಗ ಅಜ್ಜಿಗೆ ಧನ್ಯವಾದ ಹೇಳಿ ಹೊರಡೋಣ' ಎಂದರು ಗುರುಗಳು. ಅಷ್ಟರಲ್ಲಿ ಅಜ್ಜಿ ಎಲ್ಲರಿಗೂ ಗೋಡಂಬಿ ಹಂಚಿದರು. ಮಕ್ಕಳು ತಿನ್ನುತ್ತಾ ಶಾಲೆಯ ಕಡೆ ಹೆಜ್ಜೆ ಹಾಕಿದರು.

ನೀತಿ : ರೈತ ನಮ್ಮೆಲ್ಲರ ಅನ್ನದಾತ



ಕಲಿಕಾಫಲ

- ವಿದ್ಯಾರ್ಥಿಗಳು ಮರಗಳ ವಿವಿಧ ಪ್ರಭೇದಗಳನ್ನು ಅರಿತುಕೊಳ್ಳುವರು.
- ಕೈತೋಟದ ಪ್ರಯೋಜನಗಳನ್ನು ಅರಿತುಕೊಳ್ಳುವರು.
- ತೋಟದಲ್ಲಿರುವ ಎಲ್ಲಾ ರೀತಿಯ ಕೀಟ, ಸರಿಸೃಪ ಹಾಗೂ ಇನ್ನಿತರ ಜೀವಿಗಳ ಬಗ್ಗೆ ತಿಳಿದುಕೊಳ್ಳುವರು.



ಮೌಲ್ಯಮಾಪನ

ಅ. ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1) ಮಕ್ಕಳು ಎಲ್ಲಿಗೆ ಹೊರಸಂಚಾರ ಹೊರಟರು?

2) ಸಾಮಾನ್ಯವಾಗಿ ಹೊಲವನ್ನು ಯಾವುದರಿಂದ ಉಳುಮೆ ಮಾಡುತ್ತಾರೆ?

3) ಎರೆಗೊಬ್ಬರವನ್ನು ಯಾವುದರಿಂದ ತಯಾರಿಸುತ್ತಾರೆ?

4) ತೋಟದಲ್ಲಿ ಹೆಚ್ಚಾಗಿ ಯಾವ ಗೊಬ್ಬರವನ್ನು ಬಳಸುತ್ತಿದ್ದರು?

5) ಶೀಲಾ ಅಜ್ಜಿಯ ಮನೆಯ ಅಂಗಳದಲ್ಲಿ ಯಾವ ಯಂತ್ರವನ್ನು ನೋಡಿದಳು?

6) ರೈತನ ಮಿತ್ರ ಎಂದು ಯಾವುದನ್ನು ಕರೆಯುತ್ತಾರೆ?

ಆ. ಚಿಂತನಾಶೀಲ ಪ್ರಶ್ನೆ.

ನೀವು ಕೈಗಾರಿಕಾ ಪ್ರದೇಶವೊಂದಕ್ಕೆ ಹೊರ ಸಂಚಾರವನ್ನು ಕೈಗೊಂಡು ಅಲ್ಲಿನ ಕಾರ್ಯ ವಿಧಾನವನ್ನು ನಿಮ್ಮ ಗೆಳೆಯ ಗೆಳತಿಯರ ಜೊತೆಗೆ ಚರ್ಚಿಸಿ.

5th-std_Term 3_Kannada_Reader_CBSE_KM.indd 144 7/9/2019 3:41:41 PM

ಘಟಕ ಒಂಬತ್ತು

ವ್ಯಾಕರಣ

ಪತ್ರ ಲೇಖನ

ಪತ್ರ – 1

ನಿಮ್ಮ ಸಹೋದರಿಯ ವಿವಾಹ ನಿಮಿತ್ತ ಮೂರು ದಿವಸ ರಜೆಯನ್ನು ಕೋರಿ ನಿಮ್ಮ ತರಗತಿಯ ಅಧ್ಯಾಪಕರಿಗೆ ಒಂದು ರಜಾ ಪತ್ರ ಬರೆಯಿರಿ.

ಇಂದ, :

ಶೃತಿ,
ಐದನೆಯ ತರಗತಿ
ಪಂಚಾಯತ್ ಯೂನಿಯನ್ ಮಾಧ್ಯಮಿಕ ಶಾಲೆ
ತಾಳವಾಡಿ, ಈರೋಡು ಜಿಲ್ಲೆ.

ಇವರಿಗೆ, :

ತರಗತಿಯ ಉಪಾಧ್ಯಾಯರು
ಐದನೆಯ ತರಗತಿ
ಪಂಚಾಯತ್ ಯೂನಿಯನ್ ಮಾಧ್ಯಮಿಕ ಶಾಲೆ
ತಾಳವಾಡಿ, ಈರೋಡು ಜಿಲ್ಲೆ.

ಪೂಜ್ಯ ಗುರುಗಳಿಗೆ,

ವಿಷಯ : ರಜೆಯನ್ನು ಕೋರಿ.

10.06.2019ರಂದು ನನ್ನ ಸಹೋದರಿಯ ವಿವಾಹವು ಜರುಗಲಿದೆ. ಈ ಕಾರಣದಿಂದಾಗಿ ಈ ತಿಂಗಳ 09, 10, 11ನೇ ದಿನಾಂಕಗಳಂದು ಶಾಲೆಗೆ ಬರಲಾಗುವುದಿಲ್ಲ. ಆದುದರಿಂದ ನನಗೆ ಮೇಲೆ ತಿಳಿಸಿರುವ ಮೂರು ದಿನಗಳ ಅವಧಿಗೆ ರಜೆಯನ್ನು ನೀಡಬೇಕಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ವಂದನೆಗಳೊಂದಿಗೆ

ತಮ್ಮ ವಿಧೇಯಳಾದ
ಶೃತಿ
ಪೋಷಕರ ರುಜು
(ತಂದೆಯ ಸಹಿ)

ದಿನಾಂಕ : 05.06.2019
ಸ್ಥಳ : ತಾಳವಾಡಿ

5th-std_Term 3_Kannada_Reader_CBSE_KM.indd 145 7/9/2019 3:41:41 PM

ಪತ್ರ – 2

ಐದನೆಯ ತರಗತಿಯ ಅಂಕಪಟ್ಟಿ ಹಾಗೂ ವರ್ಗಾವಣೆ ಪತ್ರವನ್ನು ನೀಡುವಂತೆ ಕೋರಿ ನಿಮ್ಮ ಶಾಲಾ ಮುಖ್ಯೋಪಾಧ್ಯಾಯರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

ದಿನಾಂಕ : 03 ಜೂನ್, 2019

ಇಂದ, :

ಸುಭಾಷ್ ಜಿ.ಎಚ್.

ಇ/ಮ : ಹೇಮಚಂದ್ರ ಜಿ.ಆರ್.

ಜ್ಞಾನ ಮಾರ್ಗ, ಹೊಸೂರು

ಧರ್ಮಪುರಿ ಜಿಲ್ಲೆ.

ಇವರಿಗೆ, :

ಮುಖ್ಯೋಪಾಧ್ಯಾಯರು

ಸೇಂಟ್ ಥಾಮಸ್ ಪ್ರಾಥಮಿಕ ಶಾಲೆ

ಜ್ಞಾನ ಮಾರ್ಗ, ಹೊಸೂರು

ಧರ್ಮಪುರಿ ಜಿಲ್ಲೆ.

ಮಾನ್ಯರೇ,

ವಿಷಯ : ವರ್ಗಾವಣೆ ಪತ್ರಕ್ಕಾಗಿ ಸಲ್ಲಿಸುತ್ತಿರುವ ಮನವಿ ಪತ್ರ.

ನಾನು 2015 ರಿಂದ 2019 ರವರೆಗಿನ ಶೈಕ್ಷಣಿಕ ವರ್ಷಗಳಲ್ಲಿ ನಿಮ್ಮ ಶಾಲೆಯಲ್ಲಿ ವ್ಯಾಸಂಗ ಮಾಡಿ, ಐದನೆ ತರಗತಿಯನ್ನು 2018–2019ನೇ ಶೈಕ್ಷಣಿಕ ವರ್ಷದಲ್ಲಿ. ಉತ್ತೀರ್ಣನಾಗಿದ್ದೇನೆ(ನೋಂದಣಿ ಸಂಖ್ಯೆ : 20134567). ಈಗ ನನ್ನ ಮುಂದಿನ ವ್ಯಾಸಂಗಕ್ಕಾಗಿ ಬೇರೆ ಶಾಲೆಗೆ ಸೇರಬೇಕಾದ ಕಾರಣ ನನ್ನ ಅಂಕಪಟ್ಟಿ, ವರ್ಗಾವಣೆ ಪತ್ರ ಮತ್ತು ನಡತೆಯ ಪ್ರಮಾಣ ಪತ್ರಗಳನ್ನು ಕೊಡಬೇಕಾಗಿ ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ

ಇಂತಿ ತಮ್ಮ ವಿಧೇಯ ವಿದ್ಯಾರ್ಥಿ

ಸುಭಾಷ್ ಜಿ.ಎಚ್.

ದಿನಾಂಕ : 03 ಜೂನ್, 2019

ಸ್ಥಳ : ಹೊಸೂರು

5th-std_Term 3_Kannada_Reader_CBSE_KM.indd 146 7/9/2019 3:41:41 PM

ಶಬ್ದಾರ್ಥಗಳು

ಅ		
ಅಗತ್ಯ	:	ಅವಶ್ಯಕ;
ಅಪಾರ್ಥ	:	ತಪ್ಪು ಅಭಿಪ್ರಾಯ;
ಅಧ್ವಾನ	:	ಹಾಳು, ಹೀನಾಯ, ತೊಂದರೆ;
ಅಪರಾಧ	:	ತಪ್ಪು ಮಾಡುವುದು;
ಆ		
ಆಪತ್ತು	:	ಅಪಾಯ, ತೊಂದರೆ;
ಆರಂಭ	:	ಪ್ರಾರಂಭ, ವ್ಯವಸಾಯ;
ಆಕ್ರಮಣ	:	ಬಲವಂತದಿಂದ ಒಳನುಗ್ಗುವುದು, ಪ್ರವೇಶ;
ಇ		
ಇಂಚರ	:	ಧ್ವನಿ;
ಇಂದಿರ	:	ಚಂದ್ರ;
ಇರುಳು	:	ರಾತ್ರಿ, ಕತ್ತಲೆ;
ಇಂದು	:	ಈ ದಿನ;
ಈ		
ಈಚೆ	:	ಹೊರಗಡೆ, ಈ ಕಡೆ;
ಈಟಿ	:	ತಿವಿಯುವ ಒಂದು ಆಯುಧ, ಶೂಲ;
ಈಶ್ವರ	:	ಈಶ, ಶಿವ, ದೇವರು, ಒಡೆಯ;
ಉ		
ಉದ್ಯೋಗ	:	ಕೆಲಸ;
ಉತ್ಸಾಹ	:	ಲವಲವಿಕೆ, ಆಸಕ್ತಿ;
ಉದ್ಘಾಟನೆ	:	ಪ್ರಾರಂಭ;
ಉದಾತ್ತ	:	ಶ್ರೇಷ್ಠ;
ಊ		
ಊಹೆ	:	ಅಂದಾಜು, ಕಲ್ಪನೆ;
ಊಳಿ	:	ಗಟ್ಟಿಯಾಗಿ ಕೂಗಿ;
ಋ		
ಋಷಭ	:	ವೃಷಭ, ಎತ್ತು;
ಎ		
ಎಗರು	:	ನೆಗೆ, ಜಿಗಿ;
ಎಣೆ	:	ಸಮ, ಸಮಾನ;
ಎದೆಗುಂದದೆ	:	ಧೈರ್ಯಗೆಡದೆ, ಭಯವಿಲ್ಲದೆ, ಅಳುಕಿಲ್ಲದೆ;
ಏ		
ಏಳಿಗೆ	:	ಅಭಿವೃದ್ಧಿ, ಉನ್ನತಿ;
ಏಕಾಂತ	:	ಯಾರೂ ಇಲ್ಲದ ಪ್ರಶಾಂತ ಸ್ಥಳ;
ಐ		
ಐಕ್ಯತೆ	:	ಒಗ್ಗಟ್ಟು;
ಐಶ್ವರ್ಯ	:	ಸಂಪತ್ತು;
ಒ		
ಒಂಟಿ	:	ಏಕಾಂಗಿ, ಒಬ್ಬ;

5th-std_Term 3_Kannada_Reader_CBSE_KM.indd 147 7/9/2019 3:41:41 PM

ಒಡೆಯ	:	ಯಜಮಾನ, ಮಾಲೀಕ;
ಒಪ್ಪಿಗೆ	:	ಸಮ್ಮತಿ;
ಒಂದಾಗು	:	ಜೊತೆಯಾಗು;
ಓ		
ಓಕುಳಿ	:	ಬಣ್ಣದ ನೀರು;
ಓಡು	:	ದೋಣಿ;
ಔ		
ಔಷಧಿ	:	ಮದ್ದು;
ಔಚಿತ್ಯ	:	ಯೋಗ್ಯ;
ಕ		
ಕರುಣೆ	:	ದಯೆ;
ಕಬಳಿಸು	:	ಆಕ್ರಮಿಸು, ನುಂಗಿಹಾಕು;
ಕುತೂಹಲ	:	ಆತುರ, ಅತ್ಯಾಸಕ್ತಿ;
ಕಷ್ಟ	:	ತೊಂದರೆ, ಸಮಸ್ಯೆ;
ಕೆಚ್ಚು	:	ಧೈರ್ಯ, ಸಾಹಸ;
ಕಾದಿ	:	ಕಾದಾಡಿ, ಹೋರಾಡಿ;
ಖ		
ಖಡ್ಗ	:	ಕತ್ತಿ;
ಗ		
ಗಾದೆ	:	ನಾಣ್ನುಡಿ;
ಗರ್ವ	:	ಅಹಂಕಾರ;
ಘ		
ಘಮಲು	:	ಪರಿಮಳ, ಸುವಾಸನೆ;
ಘಟ	:	ಮಣ್ಣಿನ ಮಡಕೆ;
ಜ್ಞ		
ಜ್ಞಾನ	:	ಅರಿವು, ತಿಳುವಳಿಕೆ;
ಚ		
ಚಪ್ಪಾಳೆ	:	ಕೈ ತಟ್ಟುವುದು, ಕರತಾಡನ;
ಚರ್ಚಿಸು	:	ವಾದ ಮಾಡು;
ಚಾಣಾಕ್ಷ	:	ಸೂಕ್ಷ್ಮ ದೃಷ್ಟಿಯುಳ್ಳವನು;
ಛ		
ಛತ್ರಿ	:	ಕೊಡೆ;
ಛಲ	:	ಹಠ;
ಜ		
ಜಲ	:	ನೀರು;
ಜಗ	:	ಪ್ರಪಂಚ;
ಜವಾಬ್ದಾರಿ	:	ಹೊಣೆ;
ಜಗ	:	ಪ್ರಪಂಚ, ವಿಶ್ವ, ಲೋಕ;
ಝ		
ಝರಿ	:	ಗಿರಿನದಿ;
ಟ		
ಟಕ್ಕ	:	ಮೋಸಗಾರ;

5th-std_Term 3_Kannada_Reader_CBSE_KM.indd 148 7/9/2019 3:41:41 PM

ತ		
ತವ	:	ನಿನ್ನ;
ತ್ರಾಣ	:	ಪ್ರಾಣ, ಶಕ್ತಿ, ಬಲ, ಕಸುವು;
ದ		
ದೃಶ್ಯ	:	ನೋಟ;
ಧ		
ಧ್ವನಿ	:	ಶಬ್ದ;
ಧಮನಿ	:	ರಕ್ತನಾಳ, ನರ;
ನ		
ನವೀನ	:	ಹೊಸತು, ಆಧುನಿಕ;
ನಚ್ಚು	:	ನಂಬಿಕೆ, ವಿಶ್ವಾಸ;
ನಿರ್ಜನ	:	ಜನರೇ ಇಲ್ಲದ ಸ್ಥಳ;
ನಮ್ರತೆ	:	ವಿಧೇಯ, ವಿನಯದಿಂದ ಕೂಡಿದ;
ಪ		
ಪದಕೆ	:	ಪಾದಕ್ಕೆ, ಅಡಿಗಳಿಗೆ;
ಪ್ರಣಾಮ	:	ನಮಸ್ಕಾರ, ವಂದನೆ;
ಪಣ	:	ಪ್ರತಿಜ್ಞೆ;
ಬ		
ಬಂಧುರತೆ	:	ಸುಂದರವಾದ;
ಭಾನು	:	ಆಕಾಶ, ಗಗನ;
ಬಲ್ಲಿದ	:	ಶ್ರೀಮಂತ;
ಬಲ್ಲವ	:	ತಿಳಿದವನು;
ಮ		
ಮುಡಿ	:	ತಲೆ, ಶಿರ, ಶಿಖರ, ತುದಿ;
ಮುಕುಟ	:	ಕಿರೀಟ;
ಮಳೆ	:	ವರ್ಷ;
ರ		
ರಕುತ	:	ನೆತ್ತರ, ರಕ್ತ;
ವ		
ವಿಶ್ವ	:	ಪ್ರಪಂಚ;
ವೈಭವ	:	ಆಡಂಬರ;
ಶ		
ಶಬ್ದ	:	ಧ್ವನಿ, ರವ;
ಶ್ವಾನ	:	ನಾಯಿ;
ಷ		
ಷರಾ	:	ದಾಖಲೆ, ಅಭಿಪ್ರಾಯ;
ಸ		
ಸಿರಿ	:	ಸಂಪತ್ತು, ಆಸ್ತಿ, ಐಶ್ವರ್ಯ;
ಸಕಲ	:	ಸರ್ವ, ಎಲ್ಲ;
ಸಂಪತ್ತು	:	ಸಿರಿ, ಆಸ್ತಿ;
ಸೊಲ್ಲು	:	ಮಾತು; ಪಲ್ಲವಿ;
ಸೋಮಾರಿ	:	ಆಲಸಿ, ಕೆಲಸ ಮಾಡದೆ ಸುಮ್ಮನೆ ಕಾಲ ಕಳೆಯುವವನು;
ಹ		
ಹುಲ್ಲು	:	ಗರಿಕೆ;

5th-std_Term 3_Kannada_Reader_CBSE_KM.indd 149 7/9/2019 3:41:41 PM

Kannada Reader - Class V

Text book Development Team

Academic Advisor

Dr. P. KUMAR
Joint Director (Syllabus), SCERT, Chennai.

Reviewer

Dr. TAMILSELVI
Professor and Head,
Dept of Kannada
Madras University. Marina
Chennai

Subject Co-ordinator

K. CHANDRASEKAR
Lecturer, DIET Chennai

Authors

M. GURUMALLAPPA
B.T.Asst.Kannada,
P.U.M.School, Thalavadi,
Erode Dt

SREENIVASA. M
B.T.Asst.Kannada,
P.U.M.School, Doddagajanur,
Thalavadi Tk, Erode Dt

P. VENKATESHA
Head Master
P.U.P.S. Gummalapuram, Krishnagiri Dt

D. MAHADEVA
Head Master, P.U.P..School, Singanapuram,
Thalavadi Tk, Erode Dt

K. JAYARAM
Head Master, P.U.P.School, Palayam,
Thalavadi Tk, Erode Dt

M. SHIVAMALLU
Head Master, P.U.P.School, Kamayanapuram,
Thalavadi Tk, Erode Dt

K. SHIVASWAMY
Head Master, P.U.P.School, Honganapuram,
Thalavadi Tk, Erode Dt

N. SUBRAMANYA
SG Asst. Teacher
P.U.P.School, Mallayanapuram,
Thalavadi Tk, Erode Dt

K. MAHADEVASWAMY
P.U.M.School, Aralavadi
Thalavadi Tk, Erode Dt

Layout Design
Gopinath, Porsellvan,
Ashok kumar, Daniel
Selva kumar, Vinoth kumar
Sridhar, Poornachandran,
Santhosh

Art Team
B.Ravikumar,
K. Dhanas Deepak Rajan,
K.Nalan Nancy Rajan
Madhan, R.Shalini

QC
Rajesh Thangappan,
Arun Kamaraj Palanisamy,
Jerald Wilson

Wrapper Design
Kathir Arumugam

Coordination
Ramesh Munisamy

This book has been printed on 80 GSM Elegant Maplitho paper.
Printed by offset at:

5th-std_Term 3_Kannada_Reader_CBSE_KM.indd 150 7/9/2019 3:41:41 PM